# ಅಧ್ಯಯನ – 2 Study II

# ಪಾಪ ವಿಮೋಚನೆಯ ಕರ್ತೃ

## The Author of the Atonement

**ಸರ್ವಶಕ್ತನಾದ ಯೆಹೋವನು – ಕ್ರಿಸ್ತನ ಮೂಲಕ ಪಾಪಿಗಳ ವಿಮೋಚಕನು – "ವಧಿತನಾದ ಕುರಿಯಾದಾತನು ಯೋಗ್ಯನು" – ಸ್ವಯಂ ಇರುವಂಥಾದ್ದು – 'ನಾನೇ ಆಗಿದ್ದೇನೆ' – ತಪ್ಪಾದ ಸಂಪ್ರದಾಯ – ಸುಳ್ಳು ಸೃಷ್ಟಿಯ ಮೇಲೆ ಆತುಕೊಂಡದ್ದು – ತಂದೆ ಮತ್ತು ಮಗನ ಅನ್ಯೋನ್ಯತೆಯನ್ನು ಪರಿಶುದ್ಧ ಗ್ರಂಥಗಳಲ್ಲಿ ತೋರಿಸಿಕೊಡುವುದು – ಪರಿಶುದ್ಧಗ್ರಂಥದಲ್ಲಿ 'ಯೆಹೋವ' ಮತ್ತು 'ಕರ್ತನು' ಎಂಬ ಶಿರೋನಾಮೆಯ ಬಳಕೆ – ಹಳೆ ಒಡಂಬಡಿಕೆಯಲ್ಲಿ ದೇವರು ಎಂಬ ಪದ – ಹೊಸ ಒಡಂಬಡಿಕೆಯಲ್ಲಿ – ಸಾಮರಸ್ಯಗೊಳಿಸುವ ಸತ್ಯವೇದದ ಸಾಕ್ಷಿ – 'ನನ್ನನ್ನು ನೋಡಿದವನು ನನ್ನ ತಂದೆಯನ್ನು ನೋಡಿದ್ದಾನೆ' – ಆತನು ದೇವರಿಗೆ ಸರಿಸಮಾನವಾಗಿರುವನೆಂದು ಎಣಿಸಲಿಲ್ಲ – "ನಮಗಾದರೋ ಒಬ್ಬನೇ ದೇವರು ತಂದೆಯೆಂಬಾತನು ಮತ್ತು ಒಬ್ಬನೇ ಕರ್ತನು ಯೇಸುಕ್ರಿಸ್ತನು".**

ಯೆಹೋವ ದೇವರು ತಾನೇ ಪಾಪ ನಿವೃತ್ತಿಯೆಂಬ ಮಹಾ ಯೋಜನೆಯ ಕಾರ್ಯಕರ್ತನೆಂದು ಹಕ್ಕಿನಿಂದ ಸಮರ್ಥಿಸಿಕೊಂಡಿದ್ದಾನೆ. ನಾವೀಗತಾನೇ ಅದನ್ನು ಅಭಿವೃದ್ಧಿಯ ಪ್ರಗತಿಯಲ್ಲಿ ಕಂಡಿದ್ದೇವೆ. ಇದು ಕಲ್ವಾರಿಯಲ್ಲಿ ಪ್ರಾರಂಭವಾಗಿದ್ದು ಮಿಲಿಯಾಂತರ ಯುಗದ ಅಂತ್ಯದವರೆಗೆ ಮುಕ್ತಾಯಗೊಳ್ಳುವುದಿಲ್ಲ. ಆಗ ಈ ಪಾಪನಿವೃತ್ತಿಯ ಮಧ್ಯಸ್ಥಗಾರನಾದ ನಮ್ಮ ಕರ್ತನಾದ ಯೇಸುವು ಈ ಲೋಕದ ಸಾಮ್ರಾಜ್ಯಗಳನ್ನು ವಿಮೋಚಿಸಿ ತನ್ನ ರಾಜ್ಯವನ್ನು ಸ್ಥಾಪಿಸುವನು ಮತ್ತು ಅದು ಆತನ ತಂದೆಯ ಅಧೀನಕ್ಕೆ ಸಂಪೂರ್ಣವಾಗಿ ಒಳಪಟ್ಟಿರುತ್ತದೆ. ಇದಕ್ಕೆ ಸಾಮರಸ್ಯಗೊಳ್ಳುವಂತೆ ಅನೇಕ ಹೇಳಿಕೆಗಳನ್ನು ದೇವರ ವಾಕ್ಯದಲ್ಲಿ ಕಂಡುಕೊಳ್ಳಬಹುದಾಗಿದೆ.; ಉದಾಹರಣೆಗೆ "ಯೆಹೋವನೆಂಬ ನಿಮ್ಮ ದೇವರು ನಾನೇ, ಇಸ್ರಾಯೇಲ್ಯರ ಪರಿಶುದ್ಧನೂ ನಿಮ್ಮ ರಕ್ಷಕನೂ ಆಗಿದ್ದೇನೆ", "ನಾನೇ ಯೆಹೋವನು, ನಾನಲ್ಲದೆ ನಿಮಗೆ ಬೇರೆ ಯಾವ ರಕ್ಷಕನೂ ಇಲ್ಲ", "ಯೆಹೋವನೆಂಬ ನಾನೇ ನಿಮ್ಮ ರಕ್ಷಕನೂ, ವಿಮೋಚಕನೂ, ಯಾಕೋಬ್ಯರ ಪರಿಶುದ್ಧನೂ ಆಗಿದ್ದೇನೆ" ನಾನೇ ಯೆಹೋವನು, ಐಗುಪ್ತ ದೇಶದ ನಿಮ್ಮ ದೇವರೂ ಆಗಿದ್ದೇನೆ. ನಿಮಗೆ ನಾನಲ್ಲದೆ ಬೇರೆ ದೇವರು ಇರಬಾರದು ಯಾಕೆಂದರೆ ನಾನಲ್ಲದೆ ನಿಮಗೆ ಬೇರೆ ರಕ್ಷಕನಿಲ್ಲ" ಒಬ್ಬನೇ ಜ್ಞಾನಿಯಾದ ದೇವರಿಗೆ, ನಮ್ಮ ರಕ್ಷಕನಿಗೆ ಮಹಿಮೆಯೂ, ಘನಮಾನವೂ, ಆಧಿಪತ್ಯವೂ, ಶಕ್ತಿಯೂ ಈಗಲೂ, ಯಾವಾಗಲೂ ಉಂಟಾಗಲಿ. ಆಮೆನ್" ಮತ್ತು "ನಾವು ಜೀವಿಸುವ ದೇವರನ್ನು ನಂಬುತ್ತೇವೆ. ಆತನು ಎಲ್ಲಾ ಮಾನವರ, ವಿಶೇಷವಾಗಿ ಆತನನ್ನು ನಂಬುವವರ ರಕ್ಷಕನಾಗಿದ್ದಾನೆ" – ಯೆಶಾಯ 43:3, 60:16; ಹೋಶೇಯ 13:4, ಯೂದ 25:1 ತಿಮೋಥೆ 4:10; ಮತ್ತು ತೀತ 1:3; 2:10.

ಮೇಲಿನ ಈ ವಿಚಾರಗಳನ್ನೆಲ್ಲಾ ನಾವು ಅಂಗೀಕರಿಸುವುದಾದರೆ, ಅಂದರೆ ಸರ್ವಶಕ್ತನಾದ ಯೆಹೋವನು, ತಾನೇ, ರಕ್ಷಣೆಯೆಂಬ ಮಹಾ ಯೋಜನೆಯ ಕಾರ್ಯಕರ್ತನೂ ಅದನ್ನು ಆತನು ತನ್ನ ಇಚ್ಛಾಪೂರ್ವಕರಾದ ಕಾರ್ಯಭಾರಿಗಳ ಮತ್ತು ಪ್ರತಿನಿಧಿಗಳ ಮೂಲಕ ನೆರವೇರಿಸುವವನಾಗಿದ್ದಾನೆ ಎಂಬುವುದನ್ನು ನಾವು ಒಪ್ಪಿಕೊಳ್ಳುವುದಾದರೆ ಅದು ಮಾನವಕುಲದ ರಕ್ಷಣೆಯ ಬಗ್ಗೆ ಪರಲೋಕದ ತಂದೆಗೂ ಆತನ ಮಗನಿಗೂ ಇರುವ ಸಂಬಂಧದ ವಿಷಯದಲ್ಲಿ ಅನೇಕರಿಗಿರುವ ತಪ್ಪು ಕಲ್ಪನೆಗಳಿಂದ ಬಿಡುಗಡೆ ಗೊಳಿಸುತ್ತದೆ ಮತ್ತು ಕ್ರೈಸ್ತರೆಂದು ಹೇಳಿಕೊಳ್ಳುವವರಲ್ಲಿ ದೇವದೂಷಣೆಯಂತೆ ಹೆಚ್ಚಾಗಿ ಕಂಡುಬರುವ ದೃಷ್ಟಿಕೋನದ ಸಂಗತಿಗಳಿಗೆ ಇದು ಎಡೆಮಾಡಿ ಕೊಡುವುದಿಲ್ಲ. ಅದೇನೆಂದರೆ, ಪರಲೋಕದ ತಂದೆಯು ರೌದ್ರವುಳ್ಳವನಾಗಿ, ಪಾಪಿ ಮಾನವನನ್ನು ಸಂಹರಿಸಲು ಇಲ್ಲವೇ ನರಳಿಸಲು ಬಯಸುವವನಾಗಿದ್ದನು, ಪರಲೋಕದ ಮಗನೂ ನಮ್ಮ ಕರ್ತನೂ ಆದ ಯೇಸು ಸಂಪೂರ್ಣವಾಗಿ ಪ್ರೀತಿ ಹಾಗೂ ಕರುಣೆಯುಳ್ಳವನಾಗಿದ್ದು (ಈ ಅಭಿಪ್ರಾಯದ ಪ್ರಕಾರ ತಂದೆ ದೇವರಲ್ಲಿ ಇವುಗಳು ಇರಲಿಲ್ಲ) ಮಧ್ಯಸ್ಥಿಕೆ ವಹಿಸಿದವನಾಗಿ ಸ್ವತಃ ಮನುಷ್ಯನಿಗೆ ಬದಲಾಗಿ ಈ ಕ್ರೋಧವನ್ನು ತನ್ನ ಮೇಲೆ ತೆಗೆದುಕೊಂಡು ತನ್ನ ಪರಲೋಕದ ತಂದೆಯ ಕೋಪ ಮತ್ತು ದ್ವೇಷಗಳನ್ನು ಶಮನಗೊಳಿಸಿದನು: ಯೆಹೋವನು ನ್ಯಾಯವಂತ ನಾಗಿದ್ದು ಈಗ ಶಾಂತಗೊಂಡಿದ್ದಾನೆ. ಯಾಕೆಂದರೆ ಕೇವಲ ನ್ಯಾಯವಂತನಾಗಿ ಈಗಾಗಲೇ ಕ್ರಿಸ್ತನ ಪರಿಶುದ್ಧ ರಕ್ತದ ಮೂಲಕ ಪಾವತಿಸಿರುವುದನ್ನು ಮತ್ತೊಮ್ಮೆ ಪಾಪಿಗಳ ಮೂಲಕ ಆತನಿಗೆ ಪಾವತಿಸುವ ಅಗತ್ಯವಿಲ್ಲ. ಪಾಪ ನಿವೃತ್ತಿಯ ಬಗ್ಗೆ ಇರುವ ಈ ಧಾರುಣವಾದ ತಪ್ಪು ದೃಷ್ಟಿಕೋನವು ಎಷ್ಟು ಬೇಗ ಇಲ್ಲವಾಗುವುದೋ ಅಷ್ಟು ಬೇಗನೇ ಅದನ್ನು ಹೊಂದಿರುವವರು ಆತ್ಮಿಕ ಸಂಗತಿಗಳಲ್ಲಿ – ಜ್ಞಾನದಲ್ಲಿ, ಕೃಪೆಯಲ್ಲಿ ಮತ್ತು ಸತ್ಯದೇವರ ಪ್ರೀತಿಯಲ್ಲಿ ಪ್ರಗತಿಹೊಂದಲಿರುವರು.

ಈ ಸಂಗತಿಗಳ ಯುಕ್ತವಾದ ದೃಷ್ಟಿಕೋನವು ನಮಗೆ ತೋರಿಸುವುದೇನೆಂದರೆ, ಪರಲೋಕದ ತಂದೆಯು ಎಲ್ಲಾ ಉದ್ಧಾತವಾದ ಗುಣಧರ್ಮಗಳಲ್ಲಿ ಪೂರ್ಣ ಸಮರ್ಪಕನಾಗಿದ್ದಾನೆ; ಆತನು ನ್ಯಾಯಪರತೆಯಲ್ಲಿಯೂ ಸಮರ್ಪಕನಾಗಿದ್ದು ಆತನ ನ್ಯಾಯವಾದ ತೀರ್ಪನ್ನು ಆತನಿಂದಲೂ ಅತಿಕ್ರಮಣ ಮಾಡಲು ಸಾಧ್ಯವಿಲ್ಲ; ಜ್ಞಾನದಲ್ಲಿ ಪರಿಪೂರ್ಣನಾಗಿದ್ದು ಮಾನವರ ಸೃಷ್ಟಿಯಲ್ಲಿ ಮಾತ್ರವಲ್ಲ, ಆತನ ರಕ್ಷಣೆ ಮತ್ತು ಪಾಪನಿವೃತ್ತಿಗಳಲ್ಲಿಯೂ ಸಹಾ ಆತನ ಯೋಜನೆ ಮತ್ತು ವ್ಯವಸ್ಥೆಗಳು ಪರಿಪೂರ್ಣವಾದವುಗಳಾಗಿದ್ದು ಅದಕ್ಕೆ ಯಾವುದೇ ಆಕಸ್ಮಿಕ ಪ್ರಸಂಗಗಳಾಗಲೀ, ವಿಫಲತೆಯಾಗಲೀ ಉಂಟಾಗುವುದಿಲ್ಲ ಮತ್ತು ದೇವರ ಯೋಜನೆಯಲ್ಲಿ ಯಾವುದೇ ಬದಲಾವಣೆಯು ಅಗತ್ಯತೆಯು ಕಂಡುಬರುವುದಿಲ್ಲ **"ನಾನು ಮಾರ್ಪಡುವುದಿಲ್ಲ; ಏಕ ರೀತಿಯಾಗಿ ಇರುವಾತನು ಎಂದು ಕರ್ತನು ಹೇಳುತ್ತಾನೆ" "ಜಗದುತ್ಪತ್ತಿಗೆ ಮೊದಲೇ ಆತನ ಎಲ್ಲಾ ಕೆಲಸಗಳು ಕರ್ತನಿಗೆ ತಿಳಿದಿವೆ"** ಎಂದು ಬರೆದಿರುವಂತೆ ಆತನ ಪ್ರೀತಿಯು ಸಹಾ ಪರಿಪೂರ್ಣವಾದುದು ಮತ್ತು ಅದಕ್ಕಿಂತ ಹೆಚ್ಚಿನ ಪ್ರೀತಿಯ ಸಾಧ್ಯತೆ ಇಲ್ಲ. ಹೀಗಿದ್ದರೂ ಆ ಪ್ರೀತಿಯು ಸಮಬಲವುಳ್ಳದ್ದಾಗಿದೆ ಮತ್ತು ದೇವರ ಇತರ ಗುಣಧರ್ಮಗಳಿಗನುಸಾರವಾಗಿಯೇ ಅದೆ. ದೇವರ ಜ್ಞಾನಕ್ಕನುಸಾರವಾಗಿ ಗುರುತಿಸಲ್ಪಟ್ಟ ನ್ಯಾಯದ ಕಾರ್ಯಕ್ರಮ ದೊಂದಿಗೆ ಹೊಂದಾಣಿಕೆಗೊಂಡಾಗ ಮಾತ್ರವೇ ಅದು ಪಾಪಿಯನ್ನು ಬಿಡಿಸಬಲ್ಲದು; ಆತನ ಎಲ್ಲಾ ಒಳ್ಳೆಯ ಉದ್ದೇಶಗಳು, ನ್ಯಾಯದ ಕಾರ್ಯಕ್ರಮಗಳು ಮತ್ತು ಪ್ರೀತಿಯ ವಿನ್ಯಾಸಗಳು ಪೂರ್ಣವಾಗಿ ಸುಸಂಘಟಿಸುವಂತೆ ಅದು ಶಕ್ತಿಯುಲ್ಲಿಯೂ ಸಮರ್ಪಕವಾಗಿದೆ. ಇವುಗಳನ್ನು ಕಾರ್ಯಗತಗೊಳಿಸಿ ಮೂಲದಲ್ಲಿ ವಿನ್ಯಾಸಗೊಂಡ ಫಲಿತಾಂಶಗಳನ್ನು ಪಡೆಯಬಹುದು. – **"ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ಧೇಶಿಸಿದ್ದನ್ನು ಕೈಗೂಡಿಸದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂತಿರುಗುವುದಿಲ್ಲ"** – ಯೆಶಾಯ 55:11, ಮಲಾಕಿ 3:06, ಅ.ಕೃ 15:18.

ನಾವು ಈ ರೀತಿಯಲ್ಲಿ ಯೆಹೋವನು ತಾನೇ ರಕ್ಷಣೆಯ ಕಾರ್ಯಕರ್ತನು ಮತ್ತು ಆತನು ಅದನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ತಂದಿದ್ದಾನೆಂದು ದೇವರ ವಾಕ್ಯಗಳ ದೃಷ್ಟಿಕೋನದಿಂದ ನೋಡುವಾಗ, ಅದು ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಬಗ್ಗೆ ನಾವು ಹೊಂದಿದ ಪ್ರೀತಿ ಮತ್ತು ಗೌರವದಿಂದ ಕುಂಠಿತಗೊಳಿಸದೆ ನಮ್ಮನ್ನು ಸರ್ವಶಕ್ತನಾದ ದೇವರ ಬಗ್ಗೆ ಇನ್ನೂ ಹೆಚ್ಚಿನ ಹಾಗೂ ಪರಿಪೂರ್ಣವಾದ ಗೌರವ ಮತ್ತು ಪ್ರೀತಿಯೆಡೆಗೆ ನಡೆಸುತ್ತದೆ. ಯಾಕೆಂದರೆ ನಾವು ಪರಲೋಕದ ಮಗನಲ್ಲಿ ಪರಲೋಕದ ತಂದೆಯ ಪ್ರತೀಕವನ್ನು ಕಂಡಿದ್ದೇವೆ ಮತ್ತು ಆತನನ್ನು "**ಒಡಂಬಡಿಕೆಯ ದೂತ**"ನನ್ನಾಗಿ ಮಾನ್ಯಮಾಡಿದ್ದೇವೆ. ಆತನ ಮೂಲಕವೇ ಯೆಹೋವನ ಒಡಂಬಡಿಕೆಯ ಎಲ್ಲಾ ಆಶೀರ್ವಾದಗಳೂ ಮಾನವ ಕುಲಕ್ಕೆ ದೊರೆಯುವುದಾಗಿದೆ ಮತ್ತು ಆತನಿಲ್ಲದೆ ಯಾವುದೇ ದೈವಾಶೀರ್ವಾದವೂ ನಮಗೆ ಲಭಿಸುವಂತಿಲ್ಲ. ಈ ಆಲೋಚನೆಗೆ ಸಾಮರಸ್ಯವಾಗಿ, ನಮ್ಮ ಕರ್ತನಾದ ಯೇಸುವು ಎಲ್ಲಾ ಸಂಗತಿಗಳಲ್ಲಿ, ರಕ್ಷಣಾ ಕಾರ್ಯದಲ್ಲಿ ತನ್ನ ತಂದೆ ದೇವರ ಪ್ರತಿನಿಧಿಯಾಗಿ ಕಾರ್ಯವೆಸಗಿದ್ದಾನೆ ಎಂಬುದಕ್ಕೆ ದೇವರ ವಾಕ್ಯದ ಈ ಕೆಳಗಣ ಹೇಳಿಕೆಗಳನ್ನು ಗಮನಿಸಿರಿ :–

**"ನಮ್ಮ ರಕ್ಷಕನಾದ ದೇವರ ದಯುವೂ ಜನೋಪಕಾರವೂ ಪ್ರತ್ಯಕ್ಷವಾದಾಗ ನಾವು ಮಾಡಿದ ಪುಣ್ಯಕ್ರಿಯೆಯ ನಿಮಿತ್ತದಿಂದಲ್ಲ, ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು. ನಾವು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಕೃಪೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟು ನಿತ್ಯಜೀವದ ನಿರೀಕ್ಷೆಯನ್ನು ಪಡೆದು ಅದಕ್ಕೆ ಬಾಧ್ಯರಾಗುವಂತೆ ದೇವರು ಆತನ ಮೂಲಕ ಪವಿತ್ರಾತ್ಮನನ್ನು ನಮ್ಮ ಮೇಲೆ ಸಮೃದ್ಧಿಯಾಗಿ ಸುರಿಸಿದನು"** – ತೀತ 3: 4–6.

**"ದೇವರು ಆತನನ್ನೇ ಇಸ್ರಾಯೇಲ್ ಜನರಿಗೆ ಮಾನಸಾಂತರವನ್ನೂ, ಪಾಪ ಪರಿಹಾರವನ್ನೂ ದಯಪಾಲಿಸುವುದಕ್ಕಾಗಿ ನಾಯಕನೆಂತಲೂ, ರಕ್ಷಕನೆಂತಲೂ ತನ್ನ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಿದನು"** – ಅ.ಕೃ. 5:31.

**"ತಂದೆಯು ತನ್ನ ಮಗನನ್ನು ಲೋಕರಕ್ಷಕನನ್ನಾಗಿ ಕಳುಹಿಸಿಕೊಟ್ಟಿರುವುದನ್ನು ನಾವು ನೋಡಿದ್ದೇವೆ, ಅದರ ವಿಷಯದಲ್ಲಿ ಸಾಕ್ಷಿಹೇಳುತ್ತೇವೆ"** – 1 ಯೋಹಾನ 4:14.

**"ನಮ್ಮ ರಕ್ಷಕನಾದ ದೇವರಿಂದಲೂ ನಮ್ಮ ನಿರೀಕ್ಷೆಗೆ ಆಧಾರವಾಗಿರುವ ಕ್ರಿಸ್ತ ಯೇಸುವಿನಿಂದಲೂ ನೇಮಿಸಲ್ಪಟ್ಟ ಕ್ರಿಸ್ತ ಯೇಸುವಿನ ಅಪೋಸ್ತಲನಾದ ಪೌಲನು . . ."** – 1 ತಿಮೋ. 1:1.

**"ಹಾಗೆ ಮಾಡುವುದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಗೆಯಾಗಿಯೂ, ಯೋಗ್ಯವಾಗಿಯೂ ಅದೆ ... ಯಾಕೆಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯ ನಾಗಿರುವ ಯೇಸುಕ್ರಿಸ್ತನೇ"** – 1 ತಿಮೋ. 2: 3,5.

ನಮ್ಮ ಕರ್ತನಾದ ಯೇಸು ಕ್ರಿಸ್ತನ ಸ್ವಂತ ಮಾತುಗಳನ್ನೂ ಗಮನಿಸಿರಿ :–

**"ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ**

**ಹೊರತು ತೀರ್ಪುಮಾಡುವುದಕ್ಕಾಗಿ ಕಳುಹಿಸಲಿಲ್ಲ"** – ಯೋಹಾನ 3: 17.

**"ನನ್ನಷ್ಟಕ್ಕೆ ನಾನೇ ಏನೂ ಮಾಡಲಾರೆನು; ತಂದೆ ಹೇಳಿದ್ದನ್ನು ಕೇಳಿ ನ್ಯಾಯ ತೀರಿಸುತ್ತೇನೆ"** – ಯೋಹಾನ 5:30.

**"ತಂದೆ ನನ್ನನ್ನು ಕಳುಹಿಸಿಕೊಟ್ಟ ಹಾಗೆಯೇ ನಾನೂ ನಿಮ್ಮನ್ನು ಕಳುಹಿಸಿಕೊಡುತ್ತೇನೆ"** – ಯೋಹಾನ 20:21.

**"ಆ ದಿನದ ವಿಷಯವಾಗಿ ಆ ಘಳಿಗೆಯ ವಿಷಯವಾಗಿ ನನ್ನ ತಂದೆಗೆ ತಿಳಿಯುವುದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು; ಮಗನಿಗೂ ತಿಳಿಯದು"** – ಮಾರ್ಕ 13: 32.

**"ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳುಕೊಳ್ಳುವುದು ನಿಮ್ಮ ಕೆಲಸವಲ್ಲ"** – ಅ.ಕೃ. 1:7.

**"ನನ್ನ ತಂದೆಯ ಹೆಸರಿನಲ್ಲಿ ನಾನು ಮಾಡುವ ಕ್ರಿಯೆಗಳೇ ನನಗೆ ಸಾಕ್ಷಿಯಾಗಿವೆ "** – ಯೋಹಾನ 10:25.

**"ಇಗೋ, ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ"** – ಲೂಕ. 24:49.

**"ನಾನು ನನ್ನ ತಂದೆಯ ಹೆಸರಿನಲ್ಲಿ ಬಂದಿದ್ದೇನೆ"** – ಯೋಹಾನ 5:43.

**"ನಾನು ಮಾತನಾಡುವುದನ್ನೆಲ್ಲಾ ತಂದೆ ನನಗೆ ಹೇಳಿದ ಮೇರೆಗೆ ಮಾತನಾಡುತ್ತೇನೆ"** – ಯೋಹಾನ 12:50.

**"ತಂದೆಯು ನನಗಿಂತ ದೊಡ್ಡವನು"** – ಯೋಹಾನ 1428.

**"ನಾನು ನನ್ನ ತಂದೆಯೂ ನಿಮ್ಮ ತಂದೆಯೂ ನನ್ನ ದೇವರೂ ನಿಮ್ಮ ದೇವರೂ ಆಗಿರುವಾತನ ಬಳಿಗೆ ಏರಿ ಹೋಗುತ್ತೇನೆ"** – ಯೋಹಾನ 20:17.

### "ವಧಿತನಾದ ಕುರಿಯಾದಾತನು ಯೋಗ್ಯನು"
### "Worthy The Lamb that was Slain"

ಸತ್ಯವೇದದ ಕಡೆಯ ಪುಸ್ತಕದಲ್ಲಿ ನಮ್ಮ ಕರ್ತನಾದ ಯೇಸುವು ತಾನೇ ನಮಗೆ ಒದಗಿಸಿದ್ದಾನೆ, **"ಯೇಸು ಕ್ರಿಸ್ತನ ಪ್ರಕಟನೆಯು. ಆತನು ಬೇಗನೇ ಸಂಭವಿಸಬೇಕಾದ ಸಂಗತಿಗಳನ್ನು ತನ್ನ ದಾಸರಿಗೆ ತೋರಿಸುವುದಕ್ಕಾಗಿ ದೇವರಿಂದ ಈ ಪ್ರಕಟನೆಯನ್ನು ಹೊಂದಿದೆನು"** – ಪ್ರಕಟನೆ 1:1. ಇದು ಪಾಪನಿವೃತ್ತಿ ಎಂಬ ಪ್ರಸ್ತಾಪದ ಒಂದು ಅತ್ಯಂತ ಸುಂದರವಾದ ಚಿತ್ರಣವಾಗಿದ್ದು ಮಾನವರು ಪಾಪ ಮತ್ತು ಅದರ ಫಲವಾದ ಶಾಪಗಳಿಂದ ಬಿಡುಗಡೆಹೊಂದುವ ಸಾಮಾನ್ಯ ಯೋಜನೆಯೊಂದನ್ನು ವಿವರಿಸುವುದಾಗಿದೆ. ಇದನ್ನು ನಾವು ಪ್ರಕಟನೆ ಐದನೆಯ ಅಧ್ಯಾಯದಲ್ಲಿ ನೋಡಬಹುದಾಗಿದೆ. ಅಲ್ಲಿ ಅತಿ ಪೂರ್ವಕಾಲದಲ್ಲಿ ಪರಲೋಕದ ತಂದೆಯು ತನ್ನ ಪರಲೋಕದ ಆಸನದಲ್ಲಿ ಆಸನಾರೂಢನಾಗಿರುವುದನ್ನು ತೋರಿಸಲಾಗಿದೆ. ಆತನ ಬಲಗಡೆಯಲ್ಲಿ ಒಂದು ಸುರುಳಿ ಇದ್ದು ಅದರ ಎರಡು ಪಕ್ಕಗಳಲ್ಲಿಯೂ ಬರೆದಿತ್ತು. ಅದು ಏಳು ಮುದ್ರೆಗಳಿಂದ ಮುದ್ರಿತವಾಗಿತ್ತು. ಈ ಸುರುಳಿಯು ದೇವರ ಯೋಜನೆಯನ್ನು ಪ್ರತಿನಿಧಿಸುವುದಾಗಿತ್ತು ಮತ್ತು ಈ ಯೋಜನೆಯು ದೇವರಾದ ಯೆಹೋವನಿಗೆ ಮಾತ್ರವೇ ತಿಳಿದಿದ್ದು ಆತನು ಅದನ್ನು ಯೋಗ್ಯನಾದವನೆಂದು ರುಜುವಾತು ಹೊಂದಿದವನೊಬ್ಬನು ನೋಡುವ ತನಕ ತನ್ನ ಅಧಿಕಾರದೊಂದಿಗೆ ತನ್ನ ಕೈಗಳಲ್ಲಿ ಹಿಡಿದಿದ್ದನು. ಆತನು ಯೆಹೋವನ ಗೌರವಾನ್ವಿತ ಕಾರ್ಯಕರ್ತನಾಗಿ, ಆತನ ಪ್ರತಿನಿಧಿಯಂತೆ ಅದರಲ್ಲಿರುವುದನ್ನು ನಿರ್ವಹಿಸಬೇಕಾಗಿತ್ತು. ಈ ಸಂಕೇತಿಕ ಚಿತ್ರಣವು ಆವರೆಗೆ ನಮ್ಮ ಕರ್ತನಾದ ಯೇಸುವು ನಮ್ಮನ್ನು ದೇವರ ಬಳಿಗೆ ಸೇರಿಸುವುದಕ್ಕಾಗಿ ತಾನು ನೀತಿವಂತನಾಗಿದ್ದು ಅನೀತಿವಂತರಿಗೆ ನ್ಯಾಯವನ್ನುಂಟು ಮಾಡುವುದಕ್ಕಾಗಿ ಕಲ್ವಾರಿಯಲ್ಲಿ ಬಾಧೆಪಡುವುದನ್ನು ತೋರಿಸುತ್ತದೆ. ದೇವರ ಯೋಜನೆಯನ್ನು ಕೈಗೆತ್ತಿಕೊಳ್ಳುವವರಾಗಿ, ಕನಿಷ್ಟ ಅದನ್ನು ಅರ್ಥ ಮಾಡಿಕೊಳ್ಳುವಷ್ಟು ಯೋಗ್ಯರಾಗಿ ಈ ವರೆಗೆ ಬೇರೆ ಯಾರೂ ಕಂಡುಬಂದಿರುವುದಿಲ್ಲ.

ಆದರೆ ನಮ್ಮ ಕರ್ತನಾದ ಯೇಸುವು ಪರಲೋಕದ ತಂದೆಗೆ ವಿಧೇಯತೆಯ ಮೂಲಕ ತನ್ನ ನಿಷ್ಠೆಯನ್ನು ರುಜುವಾತು ಪಡಿಸಿದಾಗ, ಮಾನವರ ಹೊರೆಯನ್ನು ತನ್ನ ಮೇಲೆ ತೆಗೆದುಕೊಂಡು ಮರಣಪಡುವಷ್ಟರ ಮಟ್ಟಿಗೆ ತನ್ನನ್ನು ತಗ್ಗಿಸಿಕೊಂಡದ್ದರಿಂದ ಮಾತ್ರವಲ್ಲ, ಮರಣ ಪರ್ಯಂತ ಮತ್ತು ನಂತರವೂ ಶಿಲುಬೆಯ ಅವಮಾನಕರವಾದ ಮರಣದವರೆಗೂ ವಿಧೇಯನಾದಾಗ ಆ ಕ್ಷಣದಲ್ಲಿ ಆತನು ಎಲ್ಲಾ ಭರವಸೆಗಳಿಗೂ ನಂಬಿಕೆಗೂ ಯೋಗ್ಯನಾಗಿ ಕಂಡುಬಂದನು. ಅಪೋಸ್ತಲನು ಹೇಳುವಂತೆ – "ಆ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಟವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದುದರಿಂದ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸುಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು" (ಫಿಲಿಪ್ಪಿ 2: 9–11). ಈ ಒಂದು ಅಂಶದಲ್ಲಿಯೇ ನಾವು ಪರಿಗಣಿಸುತ್ತಿರುವ ಚಿತ್ರಣವು (ಪ್ರಕಟನೆ 5:9–13) ನಮ್ಮ ಕರ್ತನಾದ ಯೇಸುವು ವಧಿತನಾದ ಕುರಿಮರಿ ಎಂಬುದನ್ನು ತೋರಿಸುತ್ತದೆ. ಅಲ್ಲಿದ್ದವರು ಆತನ ಮುಂದೆ ತಲೆಬಾಗಿ ಆತನಿಗೆ ಪ್ರಣಾಮ ಸಲ್ಲಿಸುತ್ತಾ "ಯೋಗ್ಯನಾದ ಕುರಿಮರಿ!" ಎಂದು

ಸಾರಲಾಯಿತು – ನೀನು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಗಳನ್ನು ಒಡೆಯಲು ಯೋಗ್ಯನೇ; ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ; ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದಿ; ಅವರು ಭೂಮಿಯ ಮೇಲೆ ಆಳುವರು" (ಪ್ರಕಟನೆ 5:9–10) ಎಂದು ಹೇಳಿದರು. ಈ ರೀತಿಯಲ್ಲಿ ದೇವರ ಪ್ರತಿನಿಧಿಯೂ ಒಡಂಬಡಿಕೆಯ ದೂತನೂ (ಸೇವಕನೂ) ಆದಾತನನ್ನು ಅತ್ಯುನ್ನತ ಮಟ್ಟಕ್ಕೆ ಏರಿಸಿದ ಒಂದು ಚಿತ್ರಣವು ನಮಗೆ ತೋರಿಬರುತ್ತದೆ. ಆತನ ನಮ್ರತೆ ಮತ್ತು ಪೂರ್ಣಾಧೀನತೆಯ ಹಾಗೂ ತಂದೆಯ ಚಿತ್ತಕ್ಕೆ ವಿಧೇಯತೆ ತೋರುವುದರ ನಿಮಿತ್ತ ಇನ್ನುಮಂದೆ ಆತನು ತಂದೆಯ ಸಿಂಹಾಸನದ ಪಾಲುದಾರನಾಗಿ ಘೋಷಿತನಾಗುತ್ತಾನೆ ಮತ್ತು ತಂದೆಯ ಸ್ವಂತ ವ್ಯವಸ್ಥೆಗನುಸಾರವಾಗಿ ಪರಲೋಕದ ಸಮೂಹದವರ ಮಧ್ಯೆ **"ವಧಿತನಾದ ಕುರಿಯಾದಾತನು ಬಲ, ಐಶ್ವರ್ಯ, ಜ್ಞಾನ, ಸಾಮರ್ಥ್ಯ, ಮಾನ, ಪ್ರಭಾವ, ಸ್ತೋತ್ರಗಳನ್ನು ಹೊಂದುವುದಕ್ಕೆ ಯೋಗ್ಯನು"** (ವಚನ 12) ಎಂಬ ಘೋಷಣೆಯನ್ನು ಮಾಡಲಾಗುತ್ತದೆ. ಮತ್ತು ಅಂತ್ಯದಲ್ಲಿ ಪ್ರತಿಯೊಂದು ಸೃಷ್ಟಿಯೂ ಯೆಹೋವನು ತಾನು ಪಡಕೊಂಡ ಒಬ್ಬನೇ ಮಗನನ್ನು ಅತ್ಯುನ್ನತ ಸ್ಥಿತಿಗೆ ಏರಿಸಿದ್ದಾನೆ, ಮತ್ತು ಆತನ ರಾಜ್ಯದ ಸಹಭಾಗಿಯನ್ನಾಗಿ ಮಾಡಿದ್ದಾನೆ ಎಂಬ ಅಲೋಚನೆಯನ್ನು ಗ್ರಹಿಸಿಕೊಂಡು **"ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರ ಮಾನ ಪ್ರಭಾವ ಆಧಿಪತ್ಯಗಳು ಯುಗಯುಗಾಂತರಗಳಲ್ಲಿಯೂ ಇರಲಿ"** (ವಚನ 13) – ಎಂದು ಗಟ್ಟಿಯಾದ ಸ್ವರದಲ್ಲಿ ಅರಿಕೆಮಾಡುತ್ತಾ ತಮ್ಮ ಒಪ್ಪಿಗೆಯನ್ನು ಸೂಚಿಸುತ್ತಾರೆ. ಆದುದರಿಂದ – **"ಎಲ್ಲರೂ ತನಗೆ ಮಾನಕೊಡುವ ಪ್ರಕಾರವೇ ಮಗನಿಗೂ ಮಾನ ಕೊಡಬೇಕೆಂದು ತಂದೆಯು ಇಚ್ಛೈಸುತ್ತಾನೆ"** (ಯೋಹಾನ 5:23) ಎಂಬ ಮಾತುಗಳಿಗೆ ನಾವು ಆಶ್ಚರ್ಯಪಡಬೇಕಾದ್ದಿಲ್ಲ.

ಅಪೋಸ್ತಲನು ಪ್ರಕಟಿಸುವುದೇನೆಂದರೆ, ಯೇಸುಕ್ರಿಸ್ತನ ಈ ಮಹಿಮೆಯು "ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು" ಎಂಬ ದೇವರ ನಿಯಮವೊಂದನ್ನು ಉದಾಹರಿಸುತ್ತದೆ. ಆದರೆ ನಾವು ಈ ಸಾಂಕೇತಿಕ ಚಿತ್ರಣದಲ್ಲಿ (ವ. 13) ಕರ್ತನಾದ ಯೇಸುಕ್ರಿಸ್ತನ ಮಹಿಮೆ, ಗೌರವ, ಶಕ್ತಿ ಮತ್ತು ಪ್ರಭುತ್ವದಿಂದೊಡಗೂಡಿದ ಈ ಉತ್ಕರ್ಷತೆಯು ಪರಲೋಕದ ತಂದೆ ತನ್ನ ಪರಲೋಕದ ಸಿಂಹಾಸನವನ್ನು ಆತನಿಗೋಸ್ಕರ ತ್ಯಾಗಮಾಡುವನೆಂಬ ಅಭಿಪ್ರಾಯವನ್ನಾಗಲೀ ಇಲ್ಲವೇ ತಂದೆಯೂ ಮಗನೂ ಒಂದೇ ವ್ಯಕ್ತಿಯಾಗಿದ್ದಾರೆ ಎಂಬ ಅರ್ಥವನ್ನಾಗಲೀ ನೀಡುವುದಿಲ್ಲ. ಯಾಕೆಂದರೆ ಇಬ್ಬರಿಗೂ ಸದಾ ಮಾನ ಗೌರವಗಳನ್ನು ಪ್ರಥಮವಾಗಿ ಸಲ್ಲಿಸುವವರಾಗಿದ್ದೇವೆ. ಎಂದಿನಂತೆ ತಂದೆಗೆ ಮೊದಲು ಸ್ತುತಿ ಘನ ಮಾನವನ್ನು ಸಲ್ಲಿಸುತ್ತೇವೆ. ಇದು ಪುನಃ ನಮಗೆ **"ತಂದೆಯು ನನಗೆ ರಾಜ್ಯವನ್ನು ನೇಮಿಸಿದ ಪ್ರಕಾರ ನಾನೂ ನಿಮಗೂ ನೇಮಿಸುತ್ತೇನೆ"** (ಲೂಕ 22: 29) ಎಂಬ ಕರ್ತನ ಮಾತುಗಳನ್ನು ನಮ್ಮ ನೆನಪಿಗೆ ತರುವುದಾಗಿದೆ. ಆತನು ತನ್ನ ನಿಷ್ಠಾವಂತ ಅನುಯಾಯಿಗಳಿಗೆ ಹೇಳುವುದೇನೆಂದರೆ **"ನಾನು ಜಯ ಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡುವೆನು"** – ಪ್ರಕಟನೆ 3:21.

ಸಮಗ್ರವಾದ ರಕ್ಷಣಾಕಾರ್ಯವು ಮಗನ ಮೂಲಕವಾದರೂ ಅದು ತಂದೆಯದು ಎಂಬುದು ಮತ್ತೊಂದು ನಿದರ್ಶನವಾಗಿದೆ ಎಂಬುದನ್ನು ನಾವು ಅಪೋಸ್ತಲನ ಈ ಮಾತುಗಳಿಂದ ಗಮನಿಸಬಹುದು – ದೇವರು **"ಈ ಅಂತ್ಯದ ದಿನಗಳಲ್ಲಿ ನಮ್ಮ ಸಂಗಡ ಮಗನ ಮೂಲಕ ಮಾತನಾಡಿದ್ದಾನೆ. ಈತನನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದನು, ಈತನ ಮೂಲಕವೇ ಜಗತ್ತನ್ನು ಉಂಟುಮಾಡಿದನು. ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು ಪಾಪವಿಶುದ್ಧಿಮಾಡಿದ ಮೇಲೆ ಉನ್ನತಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾದನು, ಈತನು ದೇವದೂತರಿಗಿಂತಲೂ ಉತ್ತಮನಾದನು"** (ಇಬ್ರಿಯ 1:1–4). ಪುನಃ ಆತನು ಹೇಳುವುದೇನೆಂದರೆ **"ಪರಲೋಕದೊಳಗೆ ಮಹತ್ವವುಳ್ಳ ದೇವರ (ಯೆಹೋವನು) ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾದಂಥ ಮಹಾಯಾಜಕನು ನಮಗಿದ್ದಾನೆ. ಈತನು ಪವಿತ್ರಸ್ಥಾನದಲ್ಲಿ ಅಂದರೆ ಮನುಷ್ಯನು ಹಾಕದೆ ಕರ್ತನೇ (ಯೆಹೋವನು) ಹಾಕಿದ ನಿಜವಾದ ದೇವದರ್ಶನಗುಡಾರದಲ್ಲಿ ಯಾಜಕೋದ್ಯೋಗ ನಡಿಸುವವನಾಗಿದ್ದಾನೆ"** (ಇಬ್ರಿಯ 8:1). ಮುಂದೆ ಅದೇ ಅಪೋಸ್ತಲನು ಹೇಳುವುದೇನೆಂದರೆ **"ಆದರೆ ಈ ಯಾಜಕನು (ನಮ್ಮ ಕರ್ತನಾದ ಯೇಸು) ಪಾಪನಿವಾರಣೆಗೋಸ್ಕರ ನಿರಂತರವಾಗಿ ನಿಲ್ಲುವ ಒಂದೇ ಯಜ್ಞವನ್ನು ಸಮರ್ಪಿಸಿ ದೇವರ ಬಲಗಡೆಯಲ್ಲಿ ಕೂತುಕೊಂಡನು"** (ಇಬ್ರಿಯ 10:12) ಎಂಬುದಾಗಿ. ಆತನು ಇದನ್ನು ಮುಂದುವರಿಸಿ ಬೋಧಿಸುವುದೇನೆಂದರೆ – **"ನಂಬಿಕೆಯನ್ನು ಹುಟ್ಟಿಸುವವನೂ, ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ**

**ಆಸನಾರೂಢನಾಗಿದ್ದಾನೆ** (ಇಬ್ರಿಯ 12:2) ಮತ್ತು **"ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ಪ್ರಭಾವರೂಪನಾದ ತಂದೆಯೂ ಆಗಿರುವಾತನು ....". ಆತನನ್ನು ಎಲ್ಲದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು"** (ಎಫೆಸ 1:17–22). ಪುನಃ ಅಪೋಸ್ತಲನು ನಮ್ಮ ಕರ್ತನಾದ ಯೇಸುವಿನ ಬಗ್ಗೆ ಹೇಳುವುದೇನೆಂದರೆ **"ಆತನು ಪರಲೋಕಕ್ಕೆ ಏರಿಹೋಗಿ ದೇವರ ಬಲಗಡೆಯಲ್ಲಿದ್ದಾನೆ; ದೇವದೂತರೂ ಅಧಿಕಾರಿಗಳೂ ಮಹತ್ವಗಳೂ ಆತನ ಸ್ವಾಧೀನವಾಗಿವೆ"** (1 ಪೇತ್ರ 3:22) ಎಂಬುದಾಗಿ.

ಈ ಎಲ್ಲಾ ವಿವಿಧವಾದ ದೇವರ ವಾಕ್ಯಗಳೂ ನಮಗೆ ನಮ್ಮ ಕರ್ತನಾದ ಯೇಸುವು ಅತ್ಯುನ್ನತ ಸ್ಥಾನಕ್ಕೆ ಏರಿಸಲ್ಪಟ್ಟಿರುವ ಬಗ್ಗೆ ಮತ್ತು ಪಾಪಿಗಳ ನಿಮಿತ್ತ ತನ್ನನ್ನೆ ಸಮರ್ಪಿಸಿಕೊಂಡು ದೇವರ ಪ್ರೀತಿಯ ಆತ್ಮನನ್ನು ಪ್ರಕಟಿಸಿ ತೋರಿದ ಆತನ ಅದ್ಭುತವಾದ ವಿಧೇಯತೆಗೆ ಇದು ದೇವರಿಂದ ಕೊಡಲ್ಪಟ್ಟ ಪ್ರತಿಫಲವಾಗಿದೆ ಎಂದು ಸ್ಪಷ್ಟವಾಗಿ ಸೂಚಿಸುವವುಗಳಾಗಿವೆ; ಆದರೆ ಇವುಗಳು ಕರ್ತನಾದ ಯೇಸುವೇ ತಂದೆಯಾದ ದೇವರೆಂದು ಅಥವಾ ಆತನು ತಂದೆಯ ಸ್ಥಾನಕ್ಕೆ, ಆತನ ಬುದ್ಧಿವಂತ ಸೃಷ್ಟಿಯಿಂದ ಆರಾಧಿಸಲ್ಪಡುವಂತೆ ಆತನ ಸಿಂಹಾಸನಕ್ಕೆ ಏರಿಸಲ್ಪಟ್ಟನೆಂದು ಎಲ್ಲೂ ತಿಳಿಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ. ಪರಲೋಕದ ತಂದೆಯು ಮಾನ ಮತ್ತು ಮಹಿಮೆಗಳಲ್ಲಿ ಸರ್ವಶ್ರೇಷ್ಠನೆಂದು ಮತ್ತು ತನ್ನ ಕೊಡುಗೆಯಾಗಿ ಆತನು ತನ್ನ ಮಗನನ್ನು ಉನ್ನತ ಸ್ಥಿತಿಗೆ ಏರಿಸಿ ತನ್ನ ಬಲಗಡೆಯಲ್ಲಿ ಕೂರಿಸಿಕೊಂಡನೆಂದು ತಿಳಿಸುತ್ತವೆ. ಇದು ಪ್ರಧಾನ ಕೃಪಾಸ್ಥಾನವಾಗಿದ್ದು ಆತನನ್ನು ಅದರ ಮತ್ತು ಪರಲೋಕ ರಾಜ್ಯಾಧಿಪತ್ಯವು, ಎಲ್ಲಾ ದೇವದೂತರುಗಳೂ, ಪರಲೋಕದ ಮಹಾ ಸೈನ್ಯವೆಲ್ಲವೂ ಆತನ ಅಧೀನವಾಗುವಂತೆ ಮಾಡಿದನು. ನಿಜವಾಗಿಯೂ ಕರ್ತನಾದ ಯೇಸುವಿನ ಪದೋನ್ನತಿಯ ಬಗ್ಗೆ ಮತ್ತು ಪರಲೋಕದ ತಂದೆಯು ಆತನಿಗೆ ದಯಪಾಲಿಸಿದ ಸಮೃದ್ಧವಾದ ಅಧಿಕಾರದ ಬಗ್ಗೆ ಉಪಯೋಗಿಸಿದ ಮಾತುಗಳು ಕೆಲವೊಮ್ಮೆ ಬಲು ಶಕ್ತಿಶಾಲಿಯವುಗಳಾಗಿವೆ. ಯೇಸುವನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿದ ಈ ಯಾವುದೇ ಹೇಳಿಕೆಗಳು ಆತನು ತಂದೆಗೆ ಸರಿಸಮಾನನು ಇಲ್ಲವೇ ಅದಕ್ಕಿಂತಲೂ ಶ್ರೇಷ್ಠನೂ ಎಂಬ ಅಭಿಪ್ರಾಯವನ್ನು ನೀಡುವುದಿಲ್ಲ ಎಂಬುದರ ಬಗ್ಗೆ ಗಮನವನ್ನು ಹರಿಸುವುದು ಯುಕ್ತವೆಂದು ಈ ಸ್ಫೂರ್ತಿಗೊಂಡ ಲೇಖಕನು ಈ ಸಂಧರ್ಭದಲ್ಲಿ ತಿಳಿಸುವುದು ಬಹಳ ಯುಕ್ತವಾಗಿದೆ ಎಂದು ಬಯಸುತ್ತಾನೆ. ಈ ಕಾರಣದಿಂದ ಕ್ರಿಸ್ತನ ಮಿಲಿಯಾಂತರ ಯುಗದ ರಾಜ್ಯಭಾರದ ಬಗ್ಗೆ ಆತನು ಹೇಳಬಯಸುವುದೇನೆಂದರೆ **"ತಾನು (ಕ್ರಿಸ್ತನು) ಎಲ್ಲಾ ವಿರೋಧಿಗಳನ್ನು ತನ್ನ ಪಾದಗಳ ಕೆಳಗೆ ಹಾಕಿಕೊಳ್ಳುವ ತನಕ ರಾಜ್ಯವನ್ನಾಳುವುದು ಅವಶ್ಯ. ಮರಣವು ಕಡೇ ಶತ್ರುವಾಗಿ ನಿವೃತ್ತಿಯಾಗುವುದು. ದೇವರು ಸಮಸ್ತವನ್ನೂ ಆತನ (ಮಗನ) ಪಾದಗಳ ಕೆಳಗೆ ಹಾಕಿ ಆತನಿಗೆ (ಮಗನಿಗೆ) ಅಧೀನವಮಾಡಿದ್ದಾನೆಂಬುದಾಗಿ ಹೇಳಿಯದೆಯಲ್ಲಾ. ಸಮಸ್ತವೂ ಆತನಿಗೆ ಅಧೀನಮಾಡಲ್ಪಟ್ಟಿದೆ ಎಂದು ಹೇಳುವಾಗ ಸಮಸ್ತವನ್ನೂ ಅಧೀನಮಾಡಿಕೊಟ್ಟಾತನು (ತಂದೆ) ಅದರಲ್ಲಿ ಸೇರಲಿಲ್ಲವೆಂಬುದು ಸ್ಪಷ್ಟವಾಗಿದೆ. ಸಮಸ್ತವೂ ಆತನಿಗೆ (ಮಗನಿಗೆ) ಅಧೀನವಾದಮೇಲೆ ಮಗನು ಸಮಸ್ತವನ್ನೂ ತನಗೆ ಅಧೀನಮಾಡಿ ಕೊಟ್ಟಾತನಿಗೆ (ತಂದೆಗೆ) ತಾನೇ ಅಧೀನವಾಗುವನು; ಹೀಗೆ ದೇವರು (ತಂದೆ) ಸಮಸ್ತರಲ್ಲಿ ಸಮಸ್ತವೂ ಆಗುವನು"** – 1 ಕೊರಿಂಥ 15:25–28).

## "ಸ್ವಯಂ ಇರುವಾತನು"
## "The Self Existing One"

ಸರ್ವಶಕ್ತನಾದ ದೇವರು **'ಯೆಹೋವ'**ನೆಂಬ ನಾಮವನ್ನು ತಾನೇ ತನ್ನ ಸ್ವಂತಕ್ಕಾಗಿ ಮೀಸಲಿಟ್ಟಿದ್ದಾನೆ. ಇದು 'ಇರುವಾತ'ನನ್ನು 'ನಿತ್ಯನಿರಂತರ ಜೀವಿಸುವಾತ'ನನ್ನು ಸೂಚಿಸುತ್ತದೆ. **"ನಾನು ಯೆಹೋವನು; ಅಬ್ರಹಾಮ ಇಸಾಕ ಯಾಕೋಬರಿಗೆ ನಾನು ಸರ್ವಶಕ್ತನಾದ ದೇವರೆಂಬ ಹೆಸರುಳ್ಳವನನ್ನಾಗಿ ಕಾಣಿಸಿಕೊಂಡನೇ ಹೊರತು ಯೆಹೋವನು ಎಂಬ ನನ್ನ ಹೆಸರಿನಿಂದ ಅವರಿಗೆ ಗೋಚರವಾಗಲಿಲ್ಲ"** (ವಿಮೋ. 6:3) ಎಂದು ಹೇಳುವವನಾಗಿ ಆತನು ತನ್ನನ್ನು ಮೋಶೆಗೆ ಪ್ರಕಟಿಸಿಕೊಂಡನು. ತದನಂತರ ಈ ಹೆಸರಿನ ಮೂಲಕವೇ ಆತನು ತನ್ನ ಜನರಿಂದ ಗುರುತಿಸಲ್ಪಟ್ಟನು. ಹಳೆ ಒಡಂಬಡಿಕೆ ಉದ್ದಕ್ಕೂ ಈ ಹೆಸರು ನೂರಾರು ಬಾರಿ ಉಪಯೋಗಿಸಲ್ಪಟ್ಟಿದೆ, ಆದರೆ ಹೆಚ್ಚಿನ ಆಂಗ್ಲ ವಾಚಕರಿಗೆ ಇದನ್ನು ತಪ್ಪಾಗಿ 'ಕರ್ತನು' ಎಂದು ತರ್ಜುಮೆ ಮಾಡಿಕೊಡಲಾಗಿದೆ. **'ಯೆಹೋವ'**ನೆಂಬ ಈ ಪವಿತ್ರ ನಾಮವನ್ನು ಮುದ್ರಿಸುವಾಗ ಸಣ್ಣ ಕ್ಯಾಪಿಟಲ್ ಅಕ್ಷರಗಳನ್ನು ಮಾತ್ರವೇ ಉಪಯೋಗಿಸುವುದನ್ನು ನಾವು ಸದಾ ಗುರುತಿಸಬಹುದಾಗಿದೆ.

ಈ ರೀತಿಯಲ್ಲಿ ದೇವರು ಇಸ್ರಾಯೇಲ್ಯರಿಗೆ ಮೊದಲನೆಯ ಆಜ್ಞೆಯನ್ನು ನೀಡಿದಾಗ **"ಯೆಹೋವನೆಂಬ ನಿನ್ನ ದೇವರು ನಾನೇ, ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು . . . . ಯಾವ ಮೂರ್ತಿಯನ್ನು ಮಾಡಿಕೊಳ್ಳಬಾರದು. ಆಕಾಶದಲ್ಲಾಗಲಿ, ಭೂಮಿಯಲ್ಲಾಗಲಿ, ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವುದರ ರೂಪವನ್ನು ಮಾಡಿಕೊಳ್ಳಬಾರದು. ಅವುಗಳಿಗೆ ಅಡ್ಡಬೀಳಲೂ ಬಾರದು, ಪೂಜೆ ಮಾಡಲು ಬಾರದು. ನಾನು ನನಗೆ ಸಲ್ಲತಕ್ಕ ಗೌರವವನ್ನು ಮತ್ತೊಬ್ಬರಿಗೆ ಸಲ್ಲಗೊಡಿಸೆನು"** (ವಿಮೋ. 20:2–5 ನೋಡಿರಿ) ಎಂದು ಅಪ್ಪಣೆಕೊಟ್ಟನು.

ನಂತರದಲ್ಲಿ ಮೋಶೆಯು ಸಹಾ **"ಇಸ್ರಾಯೇಲ್ಯರೇ, ಕೇಳಿರಿ ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು; ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ, ಪೂರ್ಣಪ್ರಾಣದಿಂದಲೂ, ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು"** (ಧರ್ಮೋ. 6:4,5) ಎಂದು ಆಜ್ಞಾಪಿಸಿದನು. ಇದು ಸತ್ಯದ ಮೂಲತತ್ವವಾಗಿದೆ ಎಂದು ನಮ್ಮ ಪ್ರಭುವಾದ ಯೇಸುವು ತಾನೇ ಈ ವಾಕ್ಯವೃಂದದಲ್ಲಿ ಹೇಳಿದ್ದಾನೆ. ಧರ್ಮಶಾಸ್ತ್ರದಲ್ಲಿ ಯಾವ ಆಜ್ಞೆ ಮುಖ್ಯವಾಗಿದೆ ಎಂದು ಆತನನ್ನು ಪ್ರಶ್ನಿಸಿದಾಗ ಈ ಆಜ್ಞೆಯೇ ಮುಖ್ಯವಾದುದು ಮತ್ತು ಮೊದಲನೆಯದು ಎಂದು ಆತನು ಹೇಳಿದ್ದನ್ನು ನಾವು ನೋಡುತ್ತೇವೆ (ಮತ್ತಾಯ 22;36–38) ನಾವು ಪುನಃ ಯೆಶಾಯ 42:8ರಲ್ಲಿ **"ನಾನೇ ಯೆಹೋವನು; ಇದೇ ನನ್ನ ನಾಮವು; ನನ್ನ ಮಹಿಮೆಯನ್ನು ಮತ್ತೊಬ್ಬರಿಗೆ ಸಲ್ಲಗೊಡಿಸೆನು"** ಎಂದು ಹೇಳಿದ್ದಾನೆ. ಯಾವುದೇ ಸಂದರ್ಭದಲ್ಲಿ ಇದು ನಮ್ಮ ಗಮನವನ್ನು ತಪ್ಪಿಸಿಕೊಳ್ಳದಿರಲಿ. ಈ ಸಕಾರಾತ್ಮಕವಾದ ಹೇಳಿಕೆಯಲ್ಲಿ **'ಯೆಹೋವ'**ನೆಂಬ ನಾಮವನ್ನು ಸಕಲ ವಿಧವಾದ ಬೆಳಕಿಗೂ ಮೂಲ ಕಾರಣವಾದವನಲ್ಲಿ ಯಾವ ಚಂಚಲತ್ವವಿಲ್ಲ, ವ್ಯತ್ಯಾಸದ ಸೂಚನೆ ಇಲ್ಲದ ತಂದೆಯಾದಾತನಿಗೆ ಏಕಮಾತ್ರವಾಗಿ ಉಪಯೋಗಿಸಲ್ಪಟ್ಟಿದೆ. ಯೆಹೋವನ ಗೌರವಾನ್ವಿತ ಸೇವಕ – ಮಗನನ್ನಾಗಿ ಮೆಸ್ಸೀಯನನ್ನು ತೋರಿಸುವ ಪ್ರವಾದನೀಯ ಹೇಳಿಕೆಯನ್ನು ಆ ನಂತರವೇ ಮಾಡಿರುವುದನ್ನು ನಾವು ಗಮನಿಸಬೇಕಾಗುತ್ತದೆ – **"ಇಗೋ ನನ್ನ ಸೇವಕನು! ಇವನಿಗೆ ನಾನೇ ಆಧಾರ . . .. ಇವನು ನನಗೆ ಇಷ್ಟನು, ನನ್ನ ಪ್ರಾಣಪ್ರಿಯನು: ಇವನಲ್ಲಿ ನನ್ನ ಆತ್ಮವನ್ನು ಇರಿಸಿದ್ದೇನೆ; ಇವನು ಅನ್ಯಜನರಲ್ಲಿಯೂ ಸದ್ಧರ್ಮವನ್ನು ಪ್ರಚುರಪಡಿಸುವನು.... ಲೋಕದಲ್ಲಿ ಸದ್ಧರ್ಮವನ್ನು ಸ್ಥಾಪಿಸುವತನಕ ಇವನು ಕಳೆಗುಂದದೆಯೂ ಜಜ್ಜಿ ಹೋಗದೆಯೂ ತನ್ನ ಕಾರ್ಯದಲ್ಲಿ ನಿರತನಾಗುವನು. ದ್ವೀಪದ್ವೀಪಾಂತರಗಳು ಇವನ ಧರ್ಮ ಪ್ರಮಾಣಕ್ಕೆ ಕಾದಿರುವವು. ಆಕಾಶ ಮಂಡಲವನ್ನುಂಟು ಮಾಡಿ ಹರವಿ ಭೂಮಂಡಲವನ್ನೂ ಅದರಲ್ಲಿನ ಉತ್ಪತ್ತಿಯನ್ನೂ ವಿಸ್ತರಿಸಿ ಲೋಕದ ಜನರಿಗೆ ಪ್ರಾಣವನ್ನು ಹೌದು, ಭೂಚರರಿಗೆ ಜೀವಾತ್ಮವನ್ನೂ ದಯಪಾಲಿಸುವ ಯೆಹೋವನು ಇಂತೆನ್ನುತ್ತಾನೆ – ನೀನು ಕುರುಡರಿಗೆ ಕಣ್ಣು ಕೊಟ್ಟು ಬಂಧಿಗಳನ್ನು ಸೆರೆಯಿಂದಲೂ ಕತ್ತಲಲ್ಲಿ ಬಿದ್ದವರನ್ನು ಕಾರಾಗೃಹದಿಂದಲೂ ಮರಳಿ ಹೊರಗೆ ತರಬೇಕು ಎಂದು ಯೆಹೋವನೆಂಬ ನಾನು ನನ್ನ ಧರ್ಮದ ಸಂಕಲ್ಪಾನುಸಾರವಾಗಿ ನಿನ್ನನ್ನು ಕರೆದು ಕೈಹಿಡಿದು ನನ್ನ ಜನರಿಗೆ ಒಡಂಬಡಿಕೆಯು ಆಧಾರವನ್ನಾಗಿಯೂ ಅನ್ಯಜನಗಳಿಗೆ ಬೆಳಕನ್ನಾಗಿಯೂ ಮಾಡಿದ್ದೇನೆ. ನಾನೇ ಯೆಹೋವನು; ಇದೇ ನನ್ನ ನಾಮವು"** – ಯೆಶಾಯ 42:1–8.

## ಯೆಹೋವನು ಎಂಬ ಹೆಸರನ್ನು ಮಹಿಮೆಯುಳ್ಳ ತಂದೆಗೆ ಮಾತ್ರವೇ ಅನ್ವಯಿಸಲಾಗಿದೆ.

## The name Jehovah applied only to the Father of Glory.

ಸತ್ಯವೇದದಲ್ಲಿ ಯೆಹೋವನು ಎಂಬ ಹೆಸರನ್ನು ನಮ್ಮ ಕರ್ತನಾದ ಯೇಸುವಿಗೂ ಕೆಲವು ಸಾರಿ ಅನ್ವಯಿಸಲಾಗಿದೆ. ಆದುದರಿಂದ ಇದೊಂದು ವಿಶಿಷ್ಟವಾದ, ವಿಶೇಷ ನಾಮವಲ್ಲ ಎಂಬ ಹಕ್ಕಿನ ಹೇಳಿಕೆಯನ್ನು ಕೆಲವೊಮ್ಮೆ ಮಾಡುವುದುಂಟು. ಇದು ತಪ್ಪು; ಆದರೆ ಎಲ್ಲರ ಲಾಭಕ್ಕಾಗಿ ನಾವು ಈ ಹೇಳಿಕೆಯನ್ನು ಬೆಂಬಲಿಸುತ್ತವೆ ಎಂದು ಹೇಳಿಕೊಳ್ಳುವ ವಾಕ್ಯಭಾಗಗಳನ್ನು ಪರಿಶಿಲಿಸುವವರಾಗಿದ್ದೇವೆ. ಇವುಗಳು **"ನಾನೇ ಆಗಿದ್ದೇನೆ"** ("ಯೆಹೋವನು") ಎಂಬಾತನ ನಾಮವು ಉಚಿತವೂ, ವಿಶೇಷವೂ ಆಗಿದೆ ಎಂದು ಮೇಲೆ ಹೇಳುವ ವಾಕ್ಯಭಾಗದಿಂದ ವ್ಯತಿರಿಕ್ತವಾದವುಗಳಲ್ಲ ಎಂಬುದನ್ನು ನಾವು ತೋರಿಸಿಕೊಡುತ್ತೇವೆ.

(1) ಈ ವಾಕ್ಯಭಾಗವು ಮುಖ್ಯವಾಗಿ – **"ಇಗೋ ನಾನು ಮುಂದಿನ ಕಾಲದಲ್ಲಿ ದಾವೀದನೆಂಬ ಮೂಲದಿಂದ ಸದ್ಧರ್ಮಿಯಾದ ಮೊಳಿಕೆಯನ್ನು ಚಿಗುರಿಸುವೆನು; ಅವನು ರಾಜನಾಗಿ ಆಳುತ್ತಾ ವಿವೇಕದಿಂದ ಕಾರ್ಯವನ್ನು ಸಾಧಿಸುತ್ತಾ ದೇಶದಲ್ಲಿ ನೀತಿನ್ಯಾಯಗಳನ್ನು ನಿರ್ವಹಿಸುವನು. ಅವನ ಕಾಲದಲ್ಲಿ ಯೆಹೂದ್ಯರು ಸುರಕ್ಷಿತರಾಗಿರುವರು, ಇಸ್ರಾಯೇಲ್ಯರು ನೆಮ್ಮದಿಯಾಗಿ ವಾಸಿಸುವರು "ಯೆಹೋವ ಚಿದ್ಕೇನು"** (ಅಂದರೆ ಕರ್ತನೇ ನಮ್ಮ ಸದ್ಧರ್ಮ) **ಎಂಬ ಹೆಸರು ಅವನಿಗಾಗುವುದು** (ಯರೆಮೀಯ 23:5–6) ಎಂಬ ಮಾತುಗಳನ್ನು ಯೆಹೋವನು ಯುಕ್ತವಾಗಿ ಕ್ರಿಸ್ತನ ನಾಮಕ್ಕೆ ಪರಿಗಣಿಸಿದನು ಎಂಬುದನ್ನು ರುಜುವಾತು ಪಡಿಸುವುದು.

ಸ್ಪಷ್ಟವಾಗಿ ನಮ್ಮ ಕರ್ತನಾದ ಯೇಸು ಮತ್ತು ಆತನ ಮಿಲಿಯಾಂತರ ಯುಗದ ಆಳ್ವಿಕೆಯನ್ನು ಇಲ್ಲಿ ಉಲ್ಲೇಖಿಸಲಾಗಿದೆ ಮತ್ತು ಇಬ್ರಿಯ ಭಾಷೆಯ ಹೆಸರು **"ಯೆಹೋವ ಚಿದ್ಕೇನು"**. ಇದರ ವಿವರಣೆ ಏನು?. ಕೇವಲ ಇಷ್ಟೇ : ಭಾಷಾಂತರಕಾರರು ಯೇಸುವಿನ ಹೆಸರಿನೊಂದಿಗೆ **'ಯೆಹೋವ'** ಎಂಬ ನಾಮವು ಸಂಯೋಜಿಸಲ್ಪಟ್ಟಿದೆ ಎಂದು ಎಂಬುದನ್ನು ಕಂಡುಕೊಂಡ ಉತ್ಸಾಹದಲ್ಲಿ, ನಮಗೆ ಸಾಧಾರಣವಾದ ತರ್ಜುಮೆ ನೀಡಿದ್ದಾರೆ. ಅದನ್ನು – ಈ ನಾಮದ ಮೂಲಕವಾಗಿ ಆತನನ್ನು **"ಯೆಹೋವನಲ್ಲಿ ನಮ್ಮ ನೀತಿವಂತನು"** ಎಂದು ಕರೆಯಬಹುದು ಎಂದು ತರ್ಜುಮೆ ಮಾಡುತ್ತಿದ್ದರೆ ಯಾವು ತೊಂದರೆಯೂ ಇರುತ್ತಿದ್ದಿಲ್ಲ. ಇದು ನಮ್ಮ ಕರ್ತನಾದ ಯೇಸುಕ್ರಿಸ್ತನ ಪದವಿಗೆ ಮತ್ತು ಸೇವೆಗೆ ಎಷ್ಟೋ ಉಚಿತವಾಗಿರುತ್ತಿತ್ತು. ಆತನು ದೇವರ ನೀತಿವಂತಿಕೆಯ ಪ್ರತಿನಿಧಿಯಾಗಿ ಕಾಣಿಸಿಕೊಂಡದ್ದಲ್ಲದೆ,

ಮಾನವರ ನ್ಯಾಯ ದಂಡನೆಯನ್ನು ತೆರುವಂತೆ ತನ್ನನ್ನೇ ಈಡುಬಲಿಯಾಗಿ ಅರ್ಪಿಸಲಿಲ್ಲವೇ? ಆ ಮೂಲಕ ದೇವರು ನ್ಯಾಯವಂತನು ಮತ್ತು ಕ್ರಿಸ್ತನನ್ನು ನಂಬುವವರಿಗೆ ಮತ್ತೂ ನ್ಯಾಯವಂತನು ಎಂದು ಕಂಡುಬರುವುದಿಲ್ಲವೆ? ನಿಶ್ಚಿತವಾಗಿಯೂ ಬೇರೆ ಯಾವ ಹೆಸರೂ ಉಚಿತವಾದುದ್ದಲ್ಲ.

**"ಯೆಹೋವ ಚಿದ್ಕೇನು"** ಎಂಬ ಈ ಹೆಸರು ಮತ್ತೊಮ್ಮೆ ಇದೇ ಪ್ರವಾದಿಯ ಲೇಖನದಲ್ಲಿ ಕಂಡುಬರುತ್ತದೆ ಎಂಬುದನ್ನು ಕಡೆಗೆಣಿಸುವಂತಿಲ್ಲ. ಆದರೆ ನಮ್ಮ ಸ್ನೇಹಿತರು, ಭಾಷಾಂತರಕಾರರುಗಳು ಎಂದೂ ಇದನ್ನು ಗಮನಿಸುವುದಿಲ್ಲ. ಅದು ಆಂಗ್ಲ ಭಾಷೆಯಲ್ಲಿ ಅದೇ ಪದಗಳಲ್ಲಿ ತರ್ಜುಮೆಗೊಂಡಿದ್ದರೂ ಮೊದಲಿನಂತೆ ಅದನ್ನು ದೊಡ್ಡ ಅಕ್ಷರಗಳಲ್ಲಿ ಬರೆಯುವುದಿಲ್ಲ, ಯಾಕೆ? ಯಾಕೆಂದರೆ, ಈ ಸಂಬಂಧಗಳು **"ಯೆಹೋವ ಚಿದ್ಕೇನು"** ಎಂಬುದು ಸಮಗ್ರ ಸಭೆಯ ಹೆಸರು ಹೊಸ ಯೆರೂಸಲೇಮಿನ ಹೆಸರು ಎಂದು ತೋರಿಸುತ್ತದೆ – **"ಯೆಹೋವ ಚಿದ್ಕೇನು"** ("ಯೆಹೋವನಲ್ಲಿ ನಮ್ಮ ನೀತಿವಂತನು") ಎಂಬ ಹೆಸರು ಈ ಪಟ್ಟಣಕ್ಕೆ ಸಲ್ಲುವುದು – ಯೆರೆಮೀಯ 33: 16.

ಮತ್ತು ಈ ಹೆಸರು ಮಹಿಮೆ ಹೊಂದಿದ ಸಭೆಗೂ ಅನ್ವಯವಾಗುತ್ತದೆ ಎಂದು ಎಲ್ಲರೂ ಒಡನೆಯೇ ನೋಡಬಹುದು. ಅದು ನೀತಿವಂತಿಕೆಗಾಗಿ ಕರ್ತನ ಶ್ರಮೆಯಲ್ಲಿ ಪಾಲುತೆಗೆದುಕೊಳ್ಳುವುದು. ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಅನುಭವಿಸಿ ತೀರಿಸುತ್ತದೆ (ಕೊಲೊಸ್ಸೆ 1:24, 1 ಪೇತ್ರ 5:9 ನೋಡಿರಿ) ಮಾತ್ರವಲ್ಲ, ಪತ್ನಿಯು ಪತಿಯ ಹೆಸರು ಮತ್ತು ಗೌರವಗಳಲ್ಲಿ ಪಾಲುದಾರಳಾಗುವಂತೆ ಸಭೆಯು ಕರ್ತನ ಎಲ್ಲಾ ಮಹಿಮೆಯಲ್ಲೂ ಪಾಲುತೆಗೆದುಕೊಳ್ಳುವುದೆಂದು ಅದಕ್ಕೆ ವಾಗ್ದಾನ ಮಾಡಲಾಗಿದೆ. ಹೇಗೆ ಸಭೆಯು ಕ್ರಿಸ್ತನ ನಾಮವನ್ನು ಕ್ರಿಸ್ತನ ಶರೀರದ ಸದಸ್ಯರೆಂದು ಹೊಂದುವಂತೆ – ಪ್ರಕಟನೆ 3:12, 19:17, 21:9.

ಯೆಹೋವನು ತನ್ನ ಹೆಸರನ್ನು ಬೇರೆ ಹೆಸರುಗಳೊಂದಿಗೆ ಬೆರೆಸಿರುವುದು ಇದೊಂದೇ ಸಂಧರ್ಭದಲ್ಲಿ ಮಾತ್ರವಲ್ಲ. ಅಬ್ರಹಾಮನು ಇಸಾಕನನ್ನು ಬಲಿಕೊಡಲು ಕರಕೊಂಡು ಹೋಗಿದ್ದ ಆ ಬೆಟ್ಟದ ಘಟನೆಯನ್ನು ಗಮನಿಸೋಣ. ಅಲ್ಲಿ ದೇವರು ಅಬ್ರಹಾಮನಿಗೆ ಇಸಾಕನ ಬದಲಾಗಿ ಬಲಿಕೊಡಲು ಒಂದು ಟಗರನ್ನು ಒದಗಿಸಿ ಕೊಟ್ಟನು. ಆದುದರಿಂದ ಆ ಬೆಟ್ಟಕ್ಕೆ **'ಯೆಹೋವ ಯೀರೆ'** ಯೆಹೋವನ ಬೆಟ್ಟದಲ್ಲಿ ಒದಗುವುದು ಎಂಬ ಹೆಸರಾಯಿತು (ಆದಿ 22:14). ಮೋಶೆಯು ತಾನು ಕಟ್ಟಿದ ಯಜ್ಞವೇದಿಯೊಂದಕ್ಕೆ **'ಯೆಹೋವ ನಿಸ್ಸಿ'** (ಅಂದರೆ ಯೆಹೋವನ ನಮ್ಮ ಜಯಧ್ವಜ) ಎಂಬ ಹೆಸರನ್ನಿಟ್ಟನು (ವಿಮೋ. 17:15). ಗಿದ್ಯೋನನು ಮತ್ತೊಂದು ಯಜ್ಞವೇದಿಯನ್ನು ಕಟ್ಟಿಸಿ ಅದಕ್ಕೆ **''ಯೆಹೋವ ಶಾಲೋಮ್''** (ಅಂದರೆ ಕರ್ತನು ಸಮಾಧಾನಪ್ರಧನು) ಎಂಬ ಹೆಸರನ್ನಿಟ್ಟನು (ನ್ಯಾಯ : 6 : 23,24). ಯೆಹೆಜ್ಕೇಲನು ಕಟ್ಟಲ್ಪಡಲಿರುವ ಪಟ್ಟಣವೊಂದರ ಹೆಸರನ್ನು **'ಯೆಹೋವ ಶಮ್ಮಾ'** (ಕರ್ತನ ನೆಲೆ) ಎಂಬುದಾಗಿ ಪ್ರವಾದಿಸುತ್ತಾನೆ (ಯೆಹೆಜ್ಕೇಲ 48:35).

(2) ಯೆಹೋವನು ಅಬ್ರಹಾಮನಿಗೆ ಕಾಣಿಸಿಕೊಂಡನು (ಆದಿ. 18:1), ಮತ್ತೊಮ್ಮೆ ಮೋಶೆಗೆ (ವಿಮೋ. 3 : 3–15) ಎಂದು ದಾಖಲಾಗಿದೆ. ಅದು ಕ್ರಿಸ್ತ ಯೇಸುವು ತನ್ನ ಮಾನವ ಪೂರ್ವ ಸ್ಥಿತಿಯಲ್ಲಿ ಇದ್ದಿರಬಹುದು ಮತ್ತು ಈ ಕಾರಣದಿಂದ ಆತನ ಆ ಹೆಸರಿದೆ ಎಂಬ ಸಲಹೆ ನೀಡಲಾಗುತ್ತಿದೆ. ಇದಕ್ಕೆ ನಾವು ಅಂಥಾಃ ಆಲೋಚನೆಗಳು ಅಸಮರ್ಥನೀಯವಾದವುಗಳು ಎಂದು ಉತ್ತರಿಸುತ್ತೇವೆ. ಆ ಹೆಸರನ್ನು ಯಾರಿಗಾದರೂ ಅನ್ವಯಿಸಿದಾಗ ಆ ಸೇವಕನು ಯೆಹೋವನ ಅತಿಯಾದ ಮೆಚ್ಚುಗೆಗೆ ಪಾತ್ರನಾಗಿದ್ದನು ಮತ್ತು ಆ ಸಂಧರ್ಭದಲ್ಲಿ ಆತನನ್ನು ಯೆಹೋವನ ಪ್ರತಿನಿಧಿಯಾಗಿ ಮನವಾರ್ತೆಯವನಂತೆ ನಡಿಸಿಕೊಳ್ಳಲಾಯಿತು ಮತ್ತು ಆತನು ದೈವಿಕ ಶಕ್ತಿಯನ್ನು ಪ್ರಯೋಗಿಸುವಂತೆ ಅತನಿಗೆ ಅಧಿಕಾರ ನೀಡಲಾಯಿತು ಎಂದರ್ಥ. ವಿಮೋ. 3:2ರಲ್ಲಿ ನಾವು ತನ್ನನ್ನು **'ಯೆಹೋವ'**ನೆಂಬ ನಾಮದಿಂದ ಪ್ರತ್ಯೇಕಿಸಿ ಕೊಳ್ಳುವಾತನನ್ನು ನೋಡುತ್ತೇವೆ. **"ನಾನೇ"** ಎಂಬಾತನು ಯೆಹೋವನ ದೂತ ಅಥವಾ ದೇವದೂತನಾಗಿದ್ದನು. ಈ ಗೌರವಾನ್ವಿತ ದೂತನು ಯೋಹಾನ 1:1ರಲ್ಲಿ ಹೇಳುವ **'ವಾಕ್ಯ'**ವಾಗಿದ್ದಾನೆ. ಈತನು ಪೂರ್ವ ಮಾನವ ರೂಪದ ನಮ್ಮ ಕರ್ತನಾದ ಯೇಸುಕ್ರಿಸ್ತನು ಎಂಬುದನ್ನು ನಾವು ಒಂದು ಕ್ಷಣಕ್ಕೂ ಇದನ್ನು ಪ್ರಶ್ನಿಸುವುದಿಲ್ಲ. ಆದರೆ ಈ ಅತ್ಯಂತ ಶ್ರೇಷ್ಠನೂ, ಗೌರವಾನ್ವಿತನೂ ಆದ ದೂತನನ್ನು ಆತನು ಪ್ರತಿನಿಧಿಸುವಾತನೊಂದಿಗೆ, ಅಂದರೆ ಯಾರ ಹೆಸರಿನಲ್ಲಿ ಆತನು ಮಾತನಾಡಿದನೋ, ಯಾರ ಶಕ್ತಿಯನ್ನು ಆತನು ಮೋಶೆಗೆ ಅನುಗ್ರಹಿಸಿಕೊಟ್ಟನೋ ಆತನೊಂದಿಗೆ ಬೆರಕೆ ಮಾಡಲಾಗದು.

(3) ಯೆಶಾಯ 40:43ರಲ್ಲಿ **"ಅರಣ್ಯದಲ್ಲಿ ಯೆಹೋವನಿಗೆ ದಾರಿಯನ್ನು ಸರಿಪಡಿಸಿರಿ"** ಎಂಬ ಮಾತುಗಳಲ್ಲಿ ಸ್ನಾನಿಕನಾದ ಯೋಹಾನನ ನಿಯೋಗದ ಬಗ್ಗೆ ನಾವು ನೋಡುತ್ತೇವೆ. ಈ ಮಾತುಗಳಲ್ಲಿ ಯೇಸು ಎಂಬ ನಾಮವು ಯೆಹೋವನ ಮತ್ತೊಂದು ನಾಮವಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ನಾವು ಪುನಃ ಇದಕ್ಕೆ ಉತ್ತರಿಸುವುದೇನೆಂದರೆ – ಅದು ಹಾಗಲ್ಲವೆಂದು! ಯೇಸು ನಿಜವಾಗಿಯೂ ಯೆಹೋವನ ಗೌರವಾನ್ವಿತ ಸೇವಕನು ಮತ್ತು ಪೂರ್ಣವಾದ ಅರ್ಥದಲ್ಲಿ ಜನರ ಮಧ್ಯೆ ಆತನ ಪ್ರತಿನಿಧಿ. ಆದರೆ ಆತನೇ ಹೇಳುವಂತೆ

– **"ತಂದೆಯು ನನ್ನನ್ನು ಕಳುಹಿಸಿಕೊಟ್ಟಿದ್ದಾನೆ"; "ತಂದೆಯು ಹೇಳಿದ್ದನು ಕೇಳೀ ನ್ಯಾಯ ತೀರಿಸುತ್ತೇನೆ"; " ನನ್ನಷ್ಟಕ್ಕೆ ನಾನು ಏನನ್ನೂ ಮಾಡುವುದಿಲ್ಲ"; "ತಂದೆಯು ನನಗಿಂತಲೂ ದೊಡ್ಡವನು"**. ನಾವು ಈ ದೂತನನ್ನು ನಂಬಬೇಕು. ನಿಜಸಂಗತಿಯೇನೆಂದರೆ, ನಾವು ಈಗಾಗಲೇ ತೋರಿಸಿಕೊಟ್ಟಂತೆ (ಸಂಪುಟ II ಅಧ್ಯಾಯ 8 ನೋಡಿರಿ) ಸ್ನಾನಿಕನಾದ ಯೋಹಾನನು ಶ್ರೇಷ್ಠ ದೂತನೊಬ್ಬನ ಪೂರ್ವ ಛಾಯೆಯಂತಿದ್ದಾನೆ. ಸಮಗ್ರವಾದ ಕ್ರೈಸ್ತ ಸಭೆಯು ಆತನ ಕೈಕೆಳಗೆ ಮಹಿಮಾ ಶರೀರವಾಗಲಿದ್ದು ಕ್ರಿಸ್ತನು ಅದರ ಶಿರಸ್ಸಾಗಲಿದ್ದಾನೆ. ಈ ರೀತಿ ಮಹಿಮೆಹೊಂದಿದ ಕ್ರಿಸ್ತನ ಕಾರ್ಯವು ಯೆಹೋವನ ಮಾರ್ಗವನ್ನು ಸಿದ್ಧಪಡಿಸುವ ಮತ್ತು ಆತನ ಮಹಿಮೆಯುಳ್ಳ ಪಾದಗಳಿಗಾಗಿ ಸ್ಥಳ ಸಿದ್ಧಪಡಿಸುವ ಮತ್ತೊಂದು ಹೆಜ್ಜೆಯಾಗಿದೆ. ಈ ಕಾರ್ಯವು ಮಿಲಿಯಾಂತರ ಯುಗದಲ್ಲಿ ಅಂತ್ಯಗೊಳ್ಳುವಾಗ, ಈ ಪ್ರವಾದನೆಯು ಪೂರ್ಣವಾಗಿ ನೆರವೇರುವುದು – 1 ಕೊರಿಂಥ 15:24–28; ಯೋಹಾನ 6:57; 5:30; 10:28.

(4) ನಮ್ಮ ಕರ್ತನಾದ ಯೇಸುವನ್ನು ಅಪೋಸ್ತಲನು **'ಮಹಿಮೆಯುಳ್ಳ ಕರ್ತನು'** (1 ಕೊರಿ. 2:8) ಎಂದು ಕರೆದಿದ್ದಾನೆ. ಆತನೇ ತಂದೆಯಾದ ಯೆಹೋವನು ಎಂಬುದನ್ನು ರುಜುವಾತುಪಡಿಸಲು ನಾವು ಇದನ್ನು ಪರಿಗಣಿಸಬಹುದೆಂದು ಹೇಳಲಾಗಿದೆ. ಯಾಕೆಂದರೆ ಕೀರ್ತನೆ 24:7–10ರಲ್ಲಿ ಕರ್ತನಾದ ಯೇಸುಕ್ರಿಸ್ತನನ್ನು **'ಪ್ರಭಾವವುಳ್ಳ ಅರಸನು'** ಎಂಬದಾಗಿ ಬರೆದಿರುವ ಮಾತುಗಳನ್ನು ನೋಡುತ್ತೇವೆ. ಅಂಥಾಃ ತಿರುಳಿಲ್ಲದ ವಾದವು ಅವರು ಬೆಂಬಲಿಸಲು ಮುನ್ನಡಿಸುತ್ತಿರುವ ವಿಚಾರಸರಣಿಯನ್ನು ಬಲಹೀನಗೊಳಿಸುತ್ತದೆ ಎಂಬದಾಗಿ ನಾವು ಇದಕ್ಕೆ ಉತ್ತರಿಸುತ್ತೇವೆ. ನಮ್ಮ ಕರ್ತನಾದ ಯೇಸುವು ನಿಜವಾಗಿಯೂ ಮಹಿಮೆಯುಳ್ಳಾತನು, ಪ್ರಭಾವದ ಅರಸನೂ ಆಗಿದ್ದು ಮಿಲಿಯಾಂತರ ಯುಗದಲ್ಲಿ ಆತನು ಯೆಹೋವನ ಹೆಸರು ಮತ್ತು ಶಕ್ತಿಯ ಹೆಸರಿನಲ್ಲಿ ರಾಜದಂಡವನ್ನು ಹಿಡಿದು ಅಧಿಕಾರ ನಡೆಸಲಿರುವನು; ಇದುವೇ ಅಪೋಸ್ತಲನನ್ನು ಪ್ರೇರೇಪಿಸಿ ಯೇಸುವನ್ನು **"ಮಹಿಮೆಯುಳ್ಳ ಕರ್ತನು"** ಎಂದು ಪ್ರಕಟಿಸುವಂತೆ ಮಾಡಿದೆ. ಆತನ ರಾಜ್ಯವು ಮಹಿಮೆಯು ಪರಮಾವಧಿಯನ್ನು ಮುಟ್ಟುವಾಗ ಅದನ್ನು ಆತನು ತನ್ನ ತಂದೆಯ ವಶಕ್ಕೆ ಒಪ್ಪಿಸಿಕೊಡುವನು. **"ಆತನು (ಯೆಹೋವನು) ತಾನು ಸಮಸ್ತದಲ್ಲಿ ಸಮಸ್ತನೂ ಆಗುವಂತೆ ಎಲ್ಲವನ್ನೂ ಆತನ (ಮಗನ) ಕಾಲಕೆಳಗೆ ಹಾಕಲಿರುವನು"**

(5) ಕ್ರಿಸ್ತನ ಮಿಲಿಯಾಂತರ ಯುಗದ ರಾಜ್ಯದ ಬಗ್ಗೆ ಪ್ರವಾದಿಯು ಎರಡು ಲೇಖಣಿ ಚಿತ್ರಣಗಳಲ್ಲಿ **"ಅಂತ್ಯಕಾಲದಲ್ಲಿ ಕರ್ತನ ಮಂದಿರದ ಬೆಟ್ಟವು (ರಾಜ್ಯ) ಎಲ್ಲಾ ಗುಡ್ಡ ಬೆಟ್ಟಗಳಿಗಿಂತ (ಎಲ್ಲಾ ರಾಜ್ಯಗಳನ್ನು ತಳ್ಳಿಹಾಕಿ) ಉನ್ನತೋನ್ನತವಾಗಿ ಬೆಳೆದು ನೆಲೆಗೊಳ್ಳುವುದು . . . . ಹೊರಟು ಬಂದ ಬಹುದೇಶಗಳವರು – ಬನ್ನಿರಿ ಯೆಹೋವನ ಪರ್ವತಕ್ಕೆ (ರಾಜ್ಯ) ಹೋಗೋಣ ಆತನು ತನ್ನ ಮಾರ್ಗಗಳ ವಿಷಯವಾಗಿ ನಮಗೆ ಬೋಧನೆ ಮಾಡುವನು, ನಾವು ಆತನ ದಾರಿಯಲ್ಲಿ ನಡೆಯುವೆವು . . . . ಆತನು ಬಹು ರಾಷ್ಟ್ರದವರ ವ್ಯಾಜ್ಯಗಳನ್ನು ವಿಚಾರಿಸುವನು"** ಎಂದು ನೋಡುತ್ತೇವೆ – ಮೀಕ 4:1–3 ಮತ್ತು ಯೆಶಾಯ 4:2–4.

ಮಿಲಿಯಾಂತರ ಯುಗದಲ್ಲಿ ಕ್ರಿಸ್ತನು ತಾನೇ ರಾಜ್ಯಭಾರ ನಡಿಸುವವನು, ನ್ಯಾಯ ತೀರಿಸುವವನೂ ಆಗಿದ್ದು ರಾಜ್ಯವನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುವನು ಎಂದು ಹೇಳಿರುವುದರಿಂದ ಇಲ್ಲಿ **'ಯೆಹೋವನು'** ಎಂಬ ನಾಮವನ್ನು **'ಕ್ರಿಸ್ತನು'** ಎಂಬ ನಾಮವನ್ನಾಗಿ ಪರಿಗಣಿಸ ಬೇಕಾಗುತ್ತದೆ ಎಂದು ಹೇಳಲಾಗುತ್ತಿದೆ. ಅದು ಹಾಗಲ್ಲ! ಎಂದು ಇದಕ್ಕೆ ನಾವು ಉತ್ತರಿಸುತ್ತೇವೆ. ಎಲ್ಲಾ ಆಶೀರ್ವಾದಗಳು ತಂದೆಯದೇ ಆಗಿದ್ದು ಅದು ಯೇಸುಕ್ರಿಸ್ತನ ಮೂಲಕ ನಮಗೆ ಉಂಟಾಗುತ್ತದೆ (1 ಕೊರಿ. 8:6) ಎಂಬುದನ್ನು ನಾವು ಮರೆಯಲಾಗದು. ಆದ್ದರಿಂದಲೇ ನಮ್ಮ ಕರ್ತನಾದ ಯೇಸು ತಾನು ಕಲಿಸಿದ ಮಾದರಿ ಪ್ರಾರ್ಥನೆಯಲ್ಲಿ **" ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ"** (ಮತ್ತಾಯ 6:10) ಎಂದು ಕಲಿಸಿಕೊಟ್ಟದ್ದು. ಇದನ್ನೇ ಕ್ರಿಸ್ತನನ್ನು **'ಹಿಂಡಿಗೆ ರಕ್ಷಕವಾದ ಹೊಡೆಯೇ'** (Tower of the Flock – ಮೀಕ 4:8) ಮತ್ತು ಶಿರಸ್ಸು ಹಾಗೂ ದೇಹ, ನೂತನ ಯೆರೂಸಲೇಮ್ ಎಂದು ವಿವರಿಸಿ ಆತನ ವಶಕ್ಕೆ ಆದಾಮನಿಂದ ಕಳಕೊಂಡ ಏದೇನ್ ಅಂದರೆ ಯೇಸು ಕಲ್ವಾರಿಯಲ್ಲಿ ಪುನಃವಶಪಡಿಸಿ ಕೊಂಡ ರಾಜ್ಯವು ಬರುವುದು ಎಂದು ವಿವರಿಸಲಾಗಿದೆ.

(6) " **'ಎಫ್ರಾತದ ಬೆತ್ಲೆಹೇಮೇ'. . . ಯೆರೂಸಲೇಮನ್ನು ಆಳತಕ್ಕವನು ನಿನ್ನೊಳಗಿಂದ ನನಗಾಗಿ ಹೊರಡುವನು. ಆತನ ಹೊರಡೋಣ ಮೂಲವು ಪುರಾತನವೂ ಅನಾದಿಯೂ ಆದದ್ದು"** (ಮೀಕ 5: 2) ಎಂಬ ಮಾತುಗಳನ್ನು ಕ್ರಿಸ್ತನೇ ಯೆಹೋವನೆಂಬುದನ್ನು – ನಿರಂತರತೆಯಿಂದ ನಿರಂತರತೆವರೆಗೂ – ಏಕೆಂದರೆ ಮೋಶೆಯು "ಯುಗ ಯುಗಾಂತರಗಳಲ್ಲಿಯೂ ನೀನೇ ದೇವರು" ಎಂದು ಸ್ಪಷ್ಟಪಡಿಸಿದ್ದಾನೆ ಎಂದು ರುಜುವಾತು ಪಡಿಸುವುದಾಗಿದ್ದು ಈ ಮಾತುಗಳನ್ನು ನಾವು ಅಂಗೀಕರಿಸಬೇಕೆಂದು ನಮಗೆ ತಿಳಿಸಲಾಗಿದೆ.

ಇದಕ್ಕೆ ಉತ್ತರವಾಗಿ ನಾವು ಹೇಳುವುದೇನೆಂದರೆ, ಹೀಗೆಮಾಡುವುದರಿಂದ **'ಯೆಹೋವ'** ಎಂಬ ಹೆಸರಿನ

ಉಪಯೋಗವಾಗಿರುವ ನೂರಾರು ಕಡೆಗಳಲ್ಲಿ ನಾವು ವಿವೇಚನಾ ರಹಿತವಾದ ಊಹೆಗಳನ್ನು ಮಾಡುವಂತೆ ತಿಳಿಸಿದಂತಾಗುತ್ತದೆ. ಆದರೆ ಇದು ಕಂಡುಬರುವ ಸಂಬಂಧಗಳಿಗೂ ವ್ಯತಿರಿಕ್ತವಾಗಿದೆ. ಮೀಕ 5:4ರಲ್ಲಿ ಮುಂದುವರೆದು ನಾವು ಮೆಸ್ಸೀಯನ ಬಗ್ಗೆ **"ಆತನು ಕರ್ತನ ಬಲವನ್ನೂ ತನ್ನ ದೇವರಾದ ಯೆಹೋವನ ನಾಮದ ಮಹಿಮೆಯನ್ನೂ ಹೊಂದಿದವನಾಗಿ ನಿಂತು ತನ್ನ** (ಯೆಹೋವನ) **ಹಿಂಡನ್ನು ಮೇಯಿಸುವನು"** ಎಂದು ಓದುತ್ತೇವೆ.

ಈ ಪ್ರಸ್ತಾಪದ ಬಗ್ಗೆ ಇದಕ್ಕಿಂತ ಸ್ಪಷ್ಟವಾದ ಹೇಳಿಕೆ ಇಲ್ಲ. ಹಾಗಾದರೆ ಮೀಕ 5:2ರಲ್ಲಿ ಹೇಳಿದುದರ ಅರ್ಥವಾದರೂ ಏನು? ಅವನ್ನು ಈ ರೀತಿಯಾಗಿ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದೆಂದು ನಾವು ಹೇಳುತ್ತೇವೆ – "ಹೊರಡೋಣದ ಮೂಲವು ಪುರಾತನವೂ (ಮುಂಚಿತವಾಗಿಯೇ ತಿಳಿಸಲ್ಪಟ್ಟದ್ದು) ಅನಾದಿಯೂ ಆದದ್ದು [ಆತನ ಆಗಮನ ಮತ್ತು ಮೆಸ್ಸೀಯತನವು ದೇವರ ಯೋಜನೆಯ ಉದ್ದೇಶವೂ ಮತ್ತು ಒದಗಿಸುವಿಕೆಯೂ ಆಗಿದೆ]

(7) ಯೆಶಾಯ 25:6–9ರಲ್ಲಿ ನಾವು ಮಿಲಿಯಾಂತರ ಯುಗದ ರಾಜ್ಯದ ಬಗ್ಗೆ ಇರುವ ಪ್ರವಾದನೆಯೊಂದನ್ನು ನೋಡುತ್ತೇವೆ. ಇದು ನಾವು ಯೆಹೋವನೆಂಬ ನಾಮವನ್ನು ಕರ್ತನಾದ ಯೇಸುವಿಗೆ ಅನ್ವಯಿಸಲು ಇರುವ ರುಜುವಾತಾಗಿದೆ ಎಂದು ಹೇಳಲಾಗುತ್ತಿದೆ. ಯಾಕೆಂದರೆ, ಅದರಲ್ಲಿ **"ಈ ಪರ್ವತದಲ್ಲಿ (ರಾಜ್ಯದಲ್ಲಿ) ಸಕಲಜನಾಂಗಗಳಿಗೂ ಸಾರವತ್ತಾದ ವ್ಯೃಷ್ಟಾನ ಭೋಜನವನ್ನು ಅಣಿಮಾಡುವನು . . . . ಮರಣವನ್ನು ಶಾಶ್ವತವಾಗಿ ನಿರ್ನಾಮಮಾಡುವನು. ಕರ್ತನಾದ ಯೆಹೋವನು ಎಲ್ಲರ ಮುಖದಲ್ಲಿನ ಕಣ್ಣೀರನ್ನು ಒರೆಸಿಬಿಡುವನು"** ಎಂದು ಹೇಳಲಾಗಿದೆ.

'ಇಲ್ಲ, ಇದು ರುಜುವಾತಿಗೆ ದೂರವಾದುದು' ಎಂದು ನಾವು ಉತ್ತರಿಸುತ್ತೇವೆ. ನಮ್ಮಕರ್ತನು, ಮಹಿಮೆಯುಳ್ಳ ಕ್ರಿಸ್ತನು ಅಲ್ಲಿ ಸಂಭಾಷಿಸುವ ವಕ್ತಾರನಾಗಿ ಕಾಣಿಸಿಕೊಂಡಿದ್ದಾನೆ ಮತ್ತು ಮಿಲಿಯಾಂತರ ಯುಗದಲ್ಲಿನ ಆತನ ಕಾರ್ಯಗಳನ್ನು **"ಕರ್ತನೇ, ಯೆಹೋವನೇ ನೀನೇ ನನ್ನ ದೇವರು; ನಿನ್ನ ಸತ್ಯಪ್ರಮಾಣಿಕತೆಗಳನ್ನು ಅನುಸರಿಸಿ ಆದಿಸಂಕಲ್ಪಗಳನ್ನು ನೆರವೇರಿಸುತ್ತಾ ಅದ್ಭುತಗಳನ್ನು ನಡಿಸಿದ ಕಾರಣ ನಿನ್ನ ನಾಮವನ್ನು ಮಹಿಮೆಪಡಿಸುವೆನು"** ಎಂಬ ಈ ಅಧ್ಯಾಯದ ಮೊದಲನೆಯ ವಾಕ್ಯದಲ್ಲಿ ಸಂಕ್ಷಿಪ್ತವಾಗಿ ಸಾರಾಂಶಗೊಳಿಸಲಾಗಿದೆ. ಇದುವೇ ಮಿಲಿಯಾಂತರ ಯುಗದ ಆಳ್ವಿಕೆಯ ಫಲಿತಾಂಶ. ಇದರ ಅಂತ್ಯದಲ್ಲಿ ಎಲ್ಲಾ ಸಂಗತಿಗಳೂ ಯೆಹೋವನ ಅಧೀನಕ್ಕೆ ಒಳಗಾಗುವುದು. ಆತನ ಶಕ್ತಿಯೇ ಕ್ರಿಸ್ತನಲ್ಲಿ ತನ್ನ ಕಾರ್ಯವೆಸಗುತ್ತಿದೆ. ಅದುವೇ ಎಲ್ಲವುಗಳನ್ನು ಆತನ ಅಡಿಯಲ್ಲಿ ಹಾಕಲಿದೆ. ಮೆಸ್ಸಿಯನು ಯೆಹೋವನ ಬಲಶಾಲಿ ಸೇವಕನಾಗಿ, ಉಪಸ್ಥಿತನಾಗಿ/ಪ್ರತಿನಿಧಿಯಾಗಿ ಈ ಲೋಕಕ್ಕೆ ಬರುತ್ತಾನೆ. ಆತನು **'ಇಮ್ಮಾನುವೇಲ್'** (ದೇವರು ನಮ್ಮ ಸಂಗಡ ಇದ್ದಾನೆ). ಈ ದೃಷ್ಟಿಕೋನವನ್ನು ಅಪೋಸ್ತಲನಾದ ಪೌಲನು ನಿರ್ಬಂಧವಿಲ್ಲದೆ ಸಮರ್ಥಿಸಿದನು. ಆತನು ಈ ಪ್ರವಾದನೆಯಿಂದ ಉಲ್ಲೇಖಿಸಿದ ನಂತರ ಮತ್ತು ಮಿಲಿಯಾಂತರ ಯುಗದಲ್ಲಿ ಅದಾಮನಿಂದುಂಟಾದ ಮರಣವನ್ನು ನಾಶಪಡಿಸುವ ಬಗ್ಗೆ ಗಮನವನ್ನು ಹರಿಸಿದ ನಂತರ ಆತನು ಹೇಳಿದ್ದೇನೆಂದರೆ – **"ಆದರೆ, ದೇವರು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನಮಗೆ ಜಯವನ್ನು (ಬಿಡುಗಡೆ) ಕೊಟ್ಟಿದ್ದಾನೆ; ಆತನಿಗೆ ಸ್ತೋತ್ರ"** – 1 ಕೊರಿ. 15:57 ಎಂಬುದಾಗಿ ಹೇಳಿದ್ದಾನೆ.

(8) **"ಅದ್ಭುತ ಸ್ವರೂಪನು, ಆಲೋಚನಾ ಕರ್ತನು (ಮಾರ್ಗದರ್ಶಿ ಅಥವಾ ಪವಾಡದ ಮಾದರಿ) ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಆತನ ಹೆಸರು"** (ಯೆಶಾಯ 9:6) ಎಂದು ಬರೆದದೆ ಆದುದರಿಂದ **'ಯೆಹೋವ'** ಎಂಬ ನಾಮವು ನಮ್ಮ ಕರ್ತನಾದ ಯೇಸುವಿಗೆ ಸಮರ್ಪಕವಾಗಿ ಅನ್ವಯವಾಗುತ್ತದೆಂಬ ರುಜುವಾತುಗಳನ್ನು ನಾವು ಪರಿಗಣಿಸಬೇಕು ಎಂದು ಹೇಳಲಾಗುತ್ತಿದೆ.

ಈ ವಾಕ್ಯಭಾಗದ ಸಂಪೂರ್ಣವಾದ ಅರ್ಥವನ್ನು ನಾವು ನಂತರದಲ್ಲಿ ಪರೀಕ್ಷೆ ಮಾಡಲಿದ್ದೇವೆ. ಕೇವಲ ಈ ಶಿರೋನಾಮೆಯ ಅಡಿಯಲ್ಲಿ ಇದನ್ನು ಲಕ್ಷಿಸುವುದರಿಂದ ಇದರಲ್ಲಿ ಯಾವುದೂ ಯೆಹೋವನ ನಾಮವನ್ನು ನಮ್ಮ ಪೂಜನೀಯ ಪ್ರಭುವಾದ ಯೇಸುಕ್ರಿಸ್ತನಿಗೆ ಅನ್ವಯಿಸುವಂತೆ ನಮ್ಮನ್ನು ಸಮರ್ಥಿಸುವುದಿಲ್ಲ. ಹೀಗಿದ್ದಾಗ್ಯೂ, ಅಂಥಾಃ ಆಲೋಚನೆ ಏನಾದರೂ ಇದ್ದಲ್ಲಿ, ಬೇರೆ ಹೆಸರುಗಳೊಂದಿಗೆ ಯೆಹೋವ ಎಂಬ ನಾಮವನ್ನು ಕೂಡಿಸುವುದಕ್ಕೆ ಇದಕ್ಕಿಂತ ಉತ್ತಮವಾದ ಸ್ಥಳ ಬೇರೆ ಎಲ್ಲೂ ಕಂಡುಬರುವುದಿಲ್ಲ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ, ಇದರ ಮುಂದಿನ ವಚನದಲ್ಲಿ **"ಸೇನಾಧೀಶ್ವರನಾದ ಯೆಹೋವನ ಆಗ್ರಹವು ಇದನ್ನು** (ಈ ಪ್ರವಾದನೆಯನ್ನು) **ನೆರವೇರಿಸುವುದು"** (ವಚನ 7) ಎಂದು ಓದುತ್ತೇವೆ.

(9) **"ಯೆಹೂದದ ಪಟ್ಟಣಗಳಿಗೆ – ಇಗೋ ನಿಮ್ಮ ದೇವರು! ಆಹಾ, ನನ್ನ ಕರ್ತನಾದ ದೇವರು (Adonai) ಶೂರನಾಗಿ ಬರುವನು, ತನ್ನ ಭುಜಬಲದಿಂದಲೇ ಆಳುವನು; . . . . . ಆತನು ಕುರುಬನಂತೆ ತನ್ನ ಮಂದೆಯನ್ನು ಮೇಯಿಸುವನು, ಮರಿಗಳನ್ನು ಕೈಯಿಂದ ಕೂಡಿಸಿ ಎದೆಗೆತ್ತಿಕೊಳ್ಳುವನು, ಹಾಲುಕುಡಿವ ಕುರಿಗಳನ್ನು ಮೆಲ್ಲಗೆ ನಡಿಸುವನು ಎಂದು ಸಾರು"** – ಯೆಶಾಯ 40:9–11.

ನಮ್ಮ ವಿಮೋಚಕನನ್ನು **'ಯೆಹೋವ'** ಎಂಬುದಾಗಿ ಕರೆಯುವ ಮಾತುಗಳು ಖಂಡಿತವಾಗಿಯೂ ಈ ಮೇಲಿನ ವಚನದಲ್ಲಿ ನಮಗೆ ದೊರೆಯುತ್ತದೆ ಎಂದು ಹೇಳಲಾಗುತ್ತದೆ. ಆದರೆ, ನಾವು ಉತ್ತರಿಸುವುದೇನೆಂದರೆ, 'ಇಲ್ಲ – ಇಲ್ಲಿ ಆತನನ್ನು ಯೆಹೋವನ 'ಭುಜ' ಎಂಬುದಾಗಿ ಕರೆಯಲಾಗಿದೆ – ಇತರ ವಚನಗಳಲ್ಲಿ ಯೆಹೋವನಿಗೆ ವಿರೋಧವಾದ ಎಲ್ಲಾ ಅಧಿಕಾರವನ್ನೂ, ಶಕ್ತಿಯನ್ನೂ ಆತನ (ಯೆಹೋವನ) ಪಾದಗಳ (ಭೂಮಿಯು ಆತನ ಪಾದಪೀಠ) ಕೆಳಗೆ ಹಾಕುವ ತನಕ ಯೆಹೋವನು ತನ್ನ ಭುಜಬಲದಿಂದಲೂ, ನೀತಿಯುಳ್ಳ ಶಾಸನಗಳ ಮೂಲಕವೂ ಆಳುವನು'– 1 ಕೊರಿ. 15:24–28 ಮತ್ತು ಮತ್ತಾಯ 12:20 ಇವುಗಳನ್ನು ನೋಡಿರಿ.

ನಮ್ಮ ಕರ್ತನಾದ ಯೇಸುವನ್ನು ಉಚಿತವಾಗಿ ಪ್ರವಾದನಾ ರೂಪದಲ್ಲಿ ಯೆಹೋವನ "ಬಲಗೈ' ಅಥವಾ "ಭುಜ ಬಲ" ಎಂದು ಕರೆದಿರುವ ಸಂಧರ್ಭಗಳೆಂದರೆ :–

**"ನಾವು ಕೇಳಿದ ಸಂಗತಿಯನ್ನು (ನಮ್ಮಲ್ಲಿ) ಯಾರು ನಂಬಿದ್ದರು? ಯೆಹೋವನ ಬಾಹುವು ಯಾರಿಗೆ ಗೋಚರವಾಗಿತ್ತು?"** (ಯೆಶಾಯ 53:1 ಮತ್ತು ಯೋಹಾನ 12:38) [ಕೆಲವರು ಮಾತ್ರವೇ ಕರ್ತನ ಬಾಹುವನ್ನು ಈ ದಿನಗಳಲ್ಲಿ ಗುರುತಿಸುತ್ತಾರೆ – ಹೆಚ್ಚಿನವರಲ್ಲ] – **"ಅವನು ಧಿಕ್ಕರಿಸಲ್ಪಟ್ಟವನು, ಮನುಷ್ಯರು ಸೇರಿಸಿಕೊಳ್ಳದವನೂ"** (ಯೆಶಾಯ 53:3) ಆಗಿದ್ದನು.

**"ನನ್ನ ಹಸ್ತವು ಜನಾಂಗಗಳಿಗೆ ನ್ಯಾಯ ತೀರಿಸುವುದು; ದ್ವೀಪನಿವಾಸಿಗಳು ನನ್ನನ್ನು ನಿರೀಕ್ಷಿಸಿಕೊಂಡು ನನ್ನ ಹಸ್ತಕಾರ್ಯಕ್ಕೆ ಕಾದಿರುವರು"** – ಯೆಶಾಯ 51: 5–9.

**"ಯೆಹೋವನು ಸಕಲ ಜನಾಂಗಗಳ ಕಣ್ಣೆದುರಿನಲ್ಲಿ ತನ್ನ ದಿವ್ಯ ಬಾಹುವನ್ನು ತೆರೆದು ತೋರಿಸಿದ್ದಾನೆ; (ತನ್ನ ರಾಜ್ಯವನ್ನು ಸ್ಥಾಪನೆ ಮಾಡುವದು) ಭೂಮಿಯೂ ಎಲ್ಲಾ ದಿಕ್ಕಿನವರೂ ನಮ್ಮ ದೇವರ ರಕ್ಷಣಾ ಕಾರ್ಯವನ್ನು ನೋಡುವರು"** – ಯೆಶಾಯ 52: 10.

**"ಆತನ (ಯೆಹೋವನ) ಸ್ವಹಸ್ತವೇ ಆತನಿಗೆ ರಕ್ಷಣಾ ಸಾಧನವಾಯಿತು . . . ಚಿಯೋನಿಗೂ ದ್ರೋಹವನ್ನು ಬಿಟ್ಟುಬಿಟ್ಟ ಯಾಕೋಬ್ಯರ ಬಳಿಗೂ ವಿಮೋಚಕನಾಗಿ ಬರುತ್ತಾನೆ"** – ಯೆಶಾಯ 59: 15–20.

(10) ಯೋಹಾನ 12:41 ರಲ್ಲಿ **"ಯೆಶಾಯನು ಆತನ ಮಹಿಮೆಯನ್ನು ನೋಡಿದ್ದರಿಂದ ಆತನ ವಿಷಯದಲ್ಲಿ ಮಾತನಾಡುತ್ತಿರುವಾಗ ಆ ಮಾತನ್ನು ಯೆಶಾಯನಿಗೆ ನುಡಿದನು"** ಎಂಬುದಾಗಿ ಓದುತ್ತೇವೆ. ಇದನ್ನು ಯೆಶಾಯ 6:1 ರಲ್ಲಿ ಹೇಳಿರುವ **"ಕರ್ತನು ಉನ್ನತೋನ್ನತ ಸಿಂಹಾಸನಾ ರೂಢನಾಗಿರುವುದನ್ನು ಕಂಡೆನು"** ಎಂಬ ಮಾತು ಗಳೊಂದಿಗೆ ಒಪ್ಪಿಕೊಳ್ಳಬೇಕೆಂದು ನಮಗೆ ಹೇಳಲಾಗಿದೆ. ನಾವು ಇದನ್ನು ನಂಬುತ್ತೇವೆ. ಆದರೆ ಇಲ್ಲಿ ತರ್ಜುಮೆಗೊಂಡಿರುವ **'ಕರ್ತನು'** ಎಂಬ ಪದವು **'ಯೆಹೋವ'** ಎಂದಲ್ಲ ಆದರೆ **'ಅದೋನೈ'** ಎಂಬುದನ್ನು ನಾವು ಗಮನಿಸುತ್ತೇವೆ. **'ಯೆಹೋವ'** ಎಂಬ ನಾಮವು ಆತನ ವಿಶೇಷ ಪ್ರತಿನಿಧಿಗಳಿಗೆ ಅವರು ಆತನ ಪರವಾಗಿ ಮಾತನಾಡುವಾಗ ಅಥವಾ ಆತನ ಹೆಸರಿನಲ್ಲಿ ಪ್ರತಿನಿಧಿಸಿ ಕಾರ್ಯನಿರ್ವಹಿಸುವಾಗ ಕೆಲವೆಡೆ ಅನ್ವಯಿಸಲ್ಪಟ್ಟಿರ ಬಹುದಾದರೂ ಆ ನಾಮವನ್ನು ಪರಲೋಕದ ತಂದೆಯ ಹೊರತಾಗಿ ಬೇರೆ ಯಾರಿಗೂ ಅನ್ವಯಿಸಲಾಗದು ಎಂಬುದೇ ನಮ್ಮ ಪ್ರಸ್ತುತವಾದ ಹೆಣಗಾಟದ ವಿಷಯವಾಗಿದೆ.

**'ಅದೋನೈ'** ಎಂಬ ಹೆಸರನ್ನು ಬೇರೆ ಅನೇಕ ಹೆಸರುಗಳೊಂದಿಗೆ ಪರಲೋಕದ ತಂದೆಗೂ ಉಪಯೋಗಿಸಲ್ಪಟ್ಟಿದೆ ಎಂಬುದರ ಬಗ್ಗೆ ನಮಗೆ ಯಾವ ವಿವಾದವೂ ಇಲ್ಲ. ಆದರೆ ಮೇಲಿನ ವಾಕ್ಯಭಾಗದಲ್ಲಿ ಈ ಹೆಸರು ಮಗನಿಗೆ ಅನ್ವಯಿಸಲ್ಪಟ್ಟಿದೆಯೇ ಹೊರತು ತಂದೆಗಲ್ಲ. ಅದೇ ರೀತಿಯಲ್ಲಿ **'ಅದೋನೈ'** ಎಂಬ ಅದೇ ಹೆಸರನ್ನು ಕೀರ್ತನೆ 2:4–9ನೇ ವಚನಗಳಲ್ಲಿ ಕ್ರಿಸ್ತನು ಮತ್ತು ಆತನ ಮಿಲಿಯಾಂತರ ಯುಗ ರಾಜ್ಯದ ಬಗ್ಗೆ ಉಲ್ಲೇಖಿಸುವಾಗ ಬಳಸಿಕೊಳ್ಳಲಾಗಿದೆ. **"ಕರ್ತನು ಅವರನ್ನು ಪರಿಹಾಸ್ಯ ಮಾಡುವನು. ಅನಂತರ ಸಿಟ್ಟಾಗಿ ನಾನು ನೇಮಿಸಿದ ಅರಸನನ್ನು ಚಿಯೋನೆಂಬ ನನ್ನ ಪರಿಶುದ್ಧ ಪರ್ವತದಲ್ಲಿಯೇ ಸ್ಥಾಪಿಸಿದ್ದಾಯಿತು ಎಂದು ಹೇಳಿ ಕೋಪಾವೇಶದಿಂದ ಅವರನ್ನು ಕಳವಳಗೊಳಿಸುವನು . . . . ನಾನು ಕರ್ತನ ಆಜ್ಞೆಯನ್ನು ತಿಳಿಸುತ್ತೇನೆ, ಕೇಳಿರಿ: ಆತನು ನನಗೆ – ನನಗೆ ನೀನು ಮಗನು ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ"** (ಕೀರ್ತನೆ 2:4–7 ನೋಡಿರಿ) ಎಂದು ಹೇಳಿದನು.

ಆದರೆ ಯೆಶಾಯ 6:1ರಲ್ಲಿ ಹೇಳಿರುವ **'ಅದೋನೈ'** ಎಂಬಾತನೂ ಅದೇ ಅಧ್ಯಾಯದ 3–5ರಲ್ಲಿ ಕಂಡುಬರುವ **'ಯೆಹೋವನು'** ಒಬ್ಬನೇ ಎಂದು ಕೆಲವರು ಹೇಳಬಹುದು. 'ಹಾಗಲ್ಲ' ಎಂಬುದಾಗಿ ನಾವು ಉತ್ತರಿಸುತ್ತೇವೆ. "ಒಡಂಬಡಿಕೆಯ ದೂತನು". **"ಯೆಹೋವನ ಪ್ರತಿನಿಧಿ"**ಯು ಆತನು ಪ್ರತಿನಿಧಿಸುವ ತಂದೆಯ ಹೆಸರಿನಲ್ಲಿ ವಂದನೆ ಸ್ವೀಕರಿಸುತ್ತಿರಬಹುದು. 8ನೇ ವಚನದಲ್ಲಿ ಪುನಃ ಸಂದೇಶ ನೀಡುವವನು, ತೀರ್ಪು ಪ್ರಕಟಿಸುವವನು ಯೆಹೋವನಲ್ಲ **'ಅದೋನೈ'** ಎಂದು ಗಮನಿಸಬಹುದು, ಯಾಕೆಂದರೆ ತಂದೆಯೂ ಎಲ್ಲಾ ನ್ಯಾಯವಿಚಾರಣೆಯನ್ನು ಆತನಿಗೆ ಒಪ್ಪಿಸಿಕೊಟ್ಟಿದ್ದಾನೆ – ಮತ್ತಾಯ 23:34, 36, 38: ಯೋಹಾನ 5:22,27.

**'ಯೆಹೋವ'** ಎಂಬ ಹೆಸರಿನೊಂದಿಗೆ ನಮ್ಮ ಕರ್ತನಾದ ಯೇಸುವನ್ನು ನಿಕಟವಾಗಿ ಸಂಬಂಧಿಸುವ

ಮತ್ತೊಂದು ಸಂಧರ್ಭವೆಂದರೆ ಇಬ್ರಿಯ ಭಾಷೆಯಲ್ಲಿ ಉಪಯೋಗಿಸುವ ಮತ್ತೊಂದು ಹೆಸರು. ಈ ಹೆಸರನ್ನು 'ಕರ್ತನು' ಎಂಬುದಾಗಿ ನಮ್ಮ ಸಾಮಾನ್ಯ ಭಾಷಾಂತರದ ಸತ್ಯವೇದಗಳಲ್ಲಿ ಉಪಯೋಗಿಸಿರುವುದನ್ನು ನಾವು ಉಲ್ಲೇಖಿಸಬಹುದು. ಮಲಾಕಿಯು ತನ್ನ ಪುಸ್ತಕದಲ್ಲಿ **"ಇಗೋ, ನನ್ನ ದೂತನನ್ನು ಕಳುಹಿಸುತ್ತೇನೆ, ಆತನು ನನ್ನ ಮುಂದೆ ದಾರಿಯನ್ನು ಸಿದ್ಧಮಾಡುವನು; ನೀವು ಹಂಬಲಿಸುವ ಕರ್ತನು** (ಅದೋನ್, ಅದೋನೈ ಎಂಬ ಮೂಲದಿಂದ ಬಂದ ಮತ್ತೊಂದು ಪದ) **ಫಕ್ಕನೆ ತನ್ನ ಆಲಯಕ್ಕೆ ಬರುವನು. ಅಹಾ, ನಿಮಗೆ ಇಷ್ಟನಾದ ಒಡಂಬಡಿಕೆಯ ದೂತನು ಬರುತ್ತಾನೆ; ಇದು ಸೇನಾಧೀಶ್ವರ ಕರ್ತನ** (ಯೆಹೋವನ) **ನುಡಿ . . . . ಆತನು ಲೇವಿ ವಂಶದವರನ್ನು ಶೋಧಿಸಿ ಬೆಳ್ಳಿ ಬಂಗಾರಗಳನ್ನೋ ಎಂಬಂತೆ ಶುದ್ಧೀಕರಿಸುವನು; ಅವರು ಸದ್ಧರ್ಮಿಗಳಾಗಿ ಕರ್ತನಿಗೆ** (ಯೆಹೋವನಿಗೆ) **ನೈವೇದ್ಯಗಳನ್ನು ತಂದೊಪ್ಪಿಸುವರು"** – ಮಲಾಕಿ 3: 1–4.

ಈ ರೀತಿಯ ಮತ್ತೊಂದು ಚಿರಪರಿಚಿತವಾದ ಉಲ್ಲೇಖವನ್ನು ನಾವು ಶ್ರೇಷ್ಟವಾದ ಮೆಸ್ಸೀಯನ ಕೀರ್ತನೆಯಲ್ಲಿ ಹೀಗೆ ನೋಡಬಹುದು – **"ನೀನು ಎಲ್ಲಾ ಮನುಷ್ಯರಿಗಿಂತಲೂ ಸುಂದರನು ; ನಿನ್ನ ಮಾತುಗಳು ಬಹಳ ಮಧುರ; ಇದರಿಂದಲೇ ದೈವಾನುಗ್ರಹವು ಯಾವಾಗಲೂ ನಿನ್ನ ಮೇಲಿದೆ . . . . ದೇವರೇ ನಿನ್ನ ಸಿಂಹಾಸನವು ಯುಗಯುಗಾಂತರಗಳಲ್ಲಿಯೂ ಇರುವುದು ; ನಿನ್ನ ರಾಜದಂಡವು ನ್ಯಾಯಸ್ಥಾಪಕವಾದದ್ದೇ. ನೀನು ಧರ್ಮವನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ; ಆದದರಿಂದ ದೇವರು, ನಿನ್ನ ದೇವರೇ ನಿನ್ನನ್ನು ನಿನ್ನ ಜೊತೆಗಾರರಿಗಿಂತ ಉನ್ನತ ಸ್ಥಾನಕ್ಕೆ ಏರಿಸಿ ಪರಮಾನಂದ ತೈಲದಿಂದ ಅಭಿಷೇಕಿಸಿದ್ದಾನೆ"** (ಕೀರ್ತನೆ 45:2–7). ನಂತರದಲ್ಲಿ ಸಭೆಯನ್ನು ತಂದೆಯ ಕುಮಾರಿಯೆಂದು, ಕುರಿಮರಿಯ ಪತ್ನಿಯಾದ ವಧುವೆಂದು ಉಲ್ಲೇಖಿಸಲಾಗಿದೆ. ಆಕೆಯು ರಾಜಕುಮಾರನನ್ನು ತನ್ನ ಕರ್ತನೆಂದು ಅಂಗೀಕರಿಸುವಂತೆ ಬುದ್ಧಿಹೇಳಲಾಗಿದೆ **"ಆಗ ರಾಜನು ನಿನ್ನ ಲಾವಣ್ಯವನ್ನು ನೋಡಲಪೇಕ್ಷಿಸುವನು. ಆತನೇ ನಿನಗೆ ಒಡೆಯನು** (ಅದೋನ್, ಯೆಹೋವನಲ್ಲ); **ನಮಸ್ಕರಿಸು"** – 11ನೇ ವಚನ; ಇಬ್ರಿಯ 1:8,9, 1 ಕೊರಿ 11:03 ; ಎಫೆಸ 5:23; ಯೋಹಾನ 5:23.

(11) ನಮ್ಮ ಕರ್ತನಾದ ಯೇಸುವಿಗೆ ಅನ್ವಯಿಸಬಹುದಾದ ಯೆಶಾಯನ ಈ ಹೇಳಿಕೆಯನ್ನು ಪರಿಗಣಿಸುವಂತೆ ನಮಗೆ ಹೇಳಲಾಗಿದೆ – **"ಸೇನಾಧೀಶ್ವರನಾದ ಕರ್ತನನ್ನೇ ಪ್ರತಿಷ್ಠೆ ಪಡಿಸಿರಿ; ಆತನಿಗೇ ಹೆದರಿಕೊಳ್ಳಿರಿ, ನಡುಗಿರಿ. ಆತನು ಅಶ್ರಯವಾಗುವನು"** – ಯೆಶಾಯ – 8:13–14. ಮುಂದಿನ ವಾಕ್ಯದ ಬಗ್ಗೆ ಒತ್ತು ನೀಡಲಾಗಿದ್ದು ಅದರಲ್ಲಿ **'ಯಾರು'** ಎಂಬುದನ್ನು ತಿಳಿಸದೆ **"ಆತನು ಇಸ್ರಾಯೇಲಿನ ಎರಡು ಮನೆತನಕ್ಕೆ ಎಡವುವ ಕಲ್ಲೂ, ಮುಗ್ಗರಿಸುವ ಬಂಡೆಯೂ ಯೆರೂಸಲೇಮಿನ ನಿವಾಸಿಗಳಿಗೆ ಬಲೆಯೂ ಬೋನೂ ಆಗುವನು"** (ವ. 14) ಎಂದಿದೆ. ನಾವು ಇದನ್ನು ರುಜುವಾತೆಂದು ಒಪ್ಪಿಕೊಳ್ಳುವುದಿಲ್ಲ ; ತೀರಾ ವ್ಯತಿರಿಕ್ತವಾಗಿ, ಸನ್ನಿವೇಶವು ಮೂರನೆಯ ವ್ಯಕ್ತಿ ಯೆಹೋವ ಮತ್ತು ಪ್ರವಾದಿ ಹೊರತಾಗಿ ಒಬ್ಬನನ್ನು ತೋರಿಸುತ್ತದೆ, ನಮ್ಮ ಕರ್ತನಾದ ಯೇಸುವೂ ಸಹಾ – **"ಬೋಧನೆಯನ್ನು ಕಟ್ಟಿಡು, ನನ್ನ ಶಿಷ್ಯರೊಳಗೆ ಉಪದೇಶವನ್ನು ಮುಚ್ಚಿ ಮುದ್ರಿಸು. . ಕರ್ತನಿಗಾಗಿ ನಾನು ಕಾದುಕೊಂಡು ಎದುರು ನೋಡುತ್ತಿರುವೆನು. ಆಹಾ, ನಾನೂ ನನಗೆ ಕರ್ತನು ದಯಪಾಲಿಸಿರುವ ಮಕ್ಕಳೂ . . ."** – ಯೆಶಾಯ 8:16–17, ಇದನ್ನು ಇಬ್ರಿಯ 2–13ರೊಂದಿಗೆ ಹೋಲಿಸಿರಿ.

(12) 110ನೆಯ ಕೀರ್ತನೆಯು ನಮ್ಮ ಕರ್ತನಾದ ಯೇಸುವೇ ದೇವರ ವಾಕ್ಯದಲ್ಲಿ ಕರೆಯಲ್ಪಟ್ಟ **'ಯೆಹೋವ'**ನಾಗಿದ್ದಾನೆ ಎಂಬುದಕ್ಕೆ ಸಾಕ್ಷಿ ಎಂದು ಹೇಳಲಾಗುತ್ತದೆ. ಇದಕ್ಕೆ ನಾವು ಉತ್ತರಿಸಿ ಹೇಳುವುದೇನೆಂದರೆ ಯಾವುದೇ ವಾದವೂ ಇದಕ್ಕಿಂತ ಹೆಚ್ಚಾಗಿ ದೂರವೂ, ಅಸತ್ಯವೂ ಆಗಿರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾದುದನ್ನು ಇದು ರುಜುವಾತುಪಡಿಸುತ್ತದೆ **"ಯೆಹೋವನು ಅದೋನಿಗೆ** ಹೇಳಿದ್ದೇನೆಂದರೆ, **"ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವನ್ನಾಗಿ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು"** (ಕೀರ್ತನೆ 110:1) . . . ಪುನಃ **"ನೀನು (ಅದೋನಿ) ಸದಾಕಾಲವೂ ಮೆಲ್ಕಿಜೆದೇಕನ ತರಹದ ಯಾಜಕನು ಎಂದು ಕರ್ತನು (ಯೆಹೋವನು) ಆಣೆ ಇಟ್ಟು ನುಡಿದಿದ್ದಾನೆ.. . . ನಿನ್ನ ಬಲಗಡೆಯಲ್ಲಿರುವ ಕರ್ತನು ತನ್ನ ಕೋಪದ ದಿನದಲ್ಲಿ ರಾಜರನ್ನು ದಂಡಿಸುವನು"** (ವಚನ 4 ಮತ್ತು 5) ಎಂದಿದೆ.

ಯೆಹೋವನ ಬಲಪಾರ್ಶ್ವದಲ್ಲಿ ಕುಳಿತುಕೊಳ್ಳುವಂತೆ ಉನ್ನತ ಸ್ಥಿತಿಗೆ ಏರಿಸಲ್ಪಟ್ಟಾತನನ್ನು, ಆತನ ಮಹಾ ಕೃಪೆಗೆ ಪಾತ್ರನಾದಾತನನ್ನು ಮತ್ತು ನೂತನ ವರ್ಗದ ಮಹಾಯಾಜಕನಾಗಿ ನೇಮಿಸಲ್ಪಟ್ಟವನನ್ನು ನೋಡದೇ ಇರುವ ಯಾರೇ ಆಗಲಿ ತನ್ನ ಪೂರ್ವ ಕಲ್ಪಿತ ಅಭಿಪ್ರಾಯಗಳಿಂದ ಕುರುಡನಾಗಿದ್ದಾನೆ. ಹೀಗಿದ್ದಾಗ್ಯೂ ನಾವು ಅಂಥವರಿಗೆ ನಮ್ಮ ಕರ್ತನು ಈ ಮಾತುಗಳಿಗೆ ನೀಡಿದ ಅರ್ಥವಿವರಣೆಯನ್ನು ಮತ್ತು ಅದನ್ನು ತನಗೇ ಅನ್ವಯಿಸಿಕೊಂಡ ಬಗ್ಗೆ ಹೇಳುವವರಾಗಿದ್ದೇವೆ. ಆತನು ಈ ಮೂಲಕ ತಾನೇ 'ಅದೋನ್', ದಾವೀದನ ಕರ್ತನು', 'ಆತನೇ ದೇವರಾದ ಯೆಹೋವನಿಂದ ಉನ್ನತ ಸ್ಥಿತಿಗೆ ಏರಿಸಲ್ಪಟ್ಟವನು' ಎಂದು ತೋರಿಸಿಕೊಂಡಿದ್ದಾನೆ – ಮತ್ತಾಯ 22:44–45.

ಪಂಚಾಶತ್ತಮ ದಿನದಂದು ಪವಿತ್ರಾತ್ಮ ಪ್ರೇರಿತನಾಗಿ ಮಾತನಾಡಿದ ಅಪೋಸ್ತಲನಾದ ಪೇತ್ರನು ಈ ಮಾತುಗಳನ್ನು ಇದೇ ರೀತಿಯಾಗಿ ಅನ್ವಯಿಸಿದ್ದಾನೆ ಮತ್ತು ಅಪೋಸ್ತಲನಾದ ಪೌಲನು ಸಹಾ ಇದೇ ರೀತಿಯ ಅರ್ಥವನ್ನು ಸೂಚಿಸುವವನಾಗಿದ್ದಾನೆ – ಅ.ಕೃ. 2:24, ಇಬ್ರಿಯ 1:13; 10:12,13.

(13) ನಮ್ಮ ಕರ್ತನಾದ ಯೇಸುವನ್ನು ಮಹಾ ಬೋಧಕನೆಂದು ಅಂಗೀಕರಿಸಿರುವುದರಿಂದ, ಆತನು **"ನಿನ್ನ ಮಕ್ಕಳೆಲ್ಲರೂ ಯೆಹೋವನಿಂದ ಶಿಕ್ಷಿತರಾಗುವರು"** (ಯೆಶಾಯ 54:13) ಎಂಬ ಭವಿಷ್ಯವಾಣಿಯನ್ನು ನೆರವೇರಿಸಿದ್ದಾನೆಂದು ಹೇಳಲಾಗುತ್ತದೆ. ಇದಕ್ಕೆ ಉತ್ತರವಾಗಿಯೂ ಮತ್ತು ವ್ಯತಿರಿಕ್ತವಾಗಿಯೂ ನಾವು ನಮ್ಮ ಕರ್ತನ ಸ್ವಂತ ಮಾತುಗಳನ್ನು ಉಲ್ಲೇಖಿಸುತ್ತೇವೆ. ಆತನು ಪ್ರವಾದಿಯು ಇದೇ ಮಾತುಗಳನ್ನು ತನ್ನ ಪ್ರವಚನವೊಂದರಲ್ಲಿ ಉಲ್ಲೇಖಿಸುತ್ತಾ **"ಅವರೆಲ್ಲರೂ ದೇವರಿಂದ ಶಿಕ್ಷಿತರಾಗುವರು ಎಂದು ಪ್ರವಾದಿಗಳ ಗ್ರಂಥದಲ್ಲಿ ಬರೆದದೆ; ತಂದೆಯಿಂದ ಕೇಳಿ ಕಲಿತವರೆಲ್ಲರೂ ನನ್ನ ಬಳಿಗೆ ಬರುತ್ತಾರೆ"** (ಯೋಹಾನ 6:45) ಎಂದು ಹೇಳುವುದರ ಮೂಲಕ ಪ್ರವಾದನೆಯಲ್ಲಿ ಹೇಳಲ್ಪಟ್ಟಿರುವ ಯೆಹೋವನು ತಾನಲ್ಲ ಎಂದು ಸ್ಪಷ್ಟಪಡಿಸಿದ್ದಾನೆ.

ತಂದೆಯು ತಾನೇ ಮಹೋನ್ನತನಾದ 'ಯೆಹೋವ'ನಾಗಿದ್ದು 'ಧರ್ಮಶಾಸ್ತ್ರ'ವನ್ನು ನೀಡಿದ್ದು ಮಾತ್ರವಲ್ಲ ತನ್ನ ಧರ್ಮಶಾಸ್ತ್ರವನ್ನು ಉಪದೇಶಿಸುವ ಮಹಾ ಬೋಧಕನೂ ಆಗಿದ್ದಾನೆ. ಮಾನವ ರಕ್ಷಣೆಯ ಆತನ ಸ್ವಂತ ಮಹಾ ಯೋಜನೆಯಲ್ಲಿರುವ ನ್ಯಾಯ, ಪ್ರೀತಿ ಮತ್ತು ಜ್ಞಾನ ಇವುಗಳು ಸಂಯೋಜನೆಗೊಂಡಿದ್ದರೂ ಪ್ರತಿಯೊಂದೂ ಸರ್ವ ಸಂಪೂರ್ಣವೂ, ಅದೂಷಿತವೂ ಆಗಿದ್ದು ಆಗಿರುವ ಸಾಧ್ಯವಾದಷ್ಟು ಭವ್ಯವಾದ ನಿದರ್ಶನವನ್ನು ಆತನ ಎಲ್ಲಾ ಬುದ್ಧಿವಂತ ಮಕ್ಕಳು ಇನ್ನೂ ಕಂಡುಕೊಳ್ಳಬೇಕಾಗಿದೆ.

ನಮ್ಮ ಕರ್ತನಾದ ಯೇಸುಕ್ರಿಸ್ತನು ಎಲ್ಲರಿಗಿಂತಲೂ ಅತ್ಯುನ್ನತವಾಗಿ ತನ್ನ ತಂದೆಯಿಂದ ನೇಮಿಸಲ್ಪಟ್ಟ ಮಹಾ ಬೋಧಕನು ಆಗಿದ್ದವನು, ಇನ್ನೂ ಆಗಿರುವವನು. ಇದನ್ನೇ ನಮ್ಮ ಪ್ರೀತಿಯ ವಿಮೋಚಕನು ನಿಖರವಾಗಿ ಹೇಳಿಕೊಂಡಿದ್ದಾನೆ ಮತ್ತು ಬೋಧಿಸಿದ್ದಾನೆ. **"ನಾನು ಹೇಳುವ ಬೋಧನೆಯು ನನ್ನದಲ್ಲ, ನನ್ನನ್ನು ಕಳುಹಿಸಿದಾತನದು. ಆತನ ಚಿತ್ತದಂತೆ ನಡೆಯುವುದಕ್ಕೆ ಯಾರಿಗೆ ಮನಸ್ಸುಂಟೋ ಅವರಿಗೆ ಈ ಬೋಧನೆಯು ದೇವರಿಂದ ಬಂದದ್ದೋ ನಾನೇ ಕಲ್ಪಿಸಿ ಹೇಳಿದ್ದೋ ಗೊತ್ತಾಗುವುದು . . . . . ತನ್ನನ್ನು ಕಳುಹಿಸಿದವನಿಗೆ ಮಾನಬರಬೇಕೆಂದು ಅಪೇಕ್ಷಿಸುವವನು ಸತ್ಯವಂತನು"** (ಯೋಹಾನ 7:16–18) **"ನಾನೂ ತಂದೆಯ ಬಳಿಯಿಂದ ನೋಡಿದ್ದನ್ನು ಹೇಳುತ್ತೇನೆ; ನೀವೂ ತಂದೆಯಿಂದ ಕೇಳಿದ್ದನ್ನು ಮಾಡಿರಿ"** (ಯೋಹಾನ 8:38) **"ನೀವು ಆಲಿಸುವ ಮಾತುಗಳು ನನ್ನದಲ್ಲ, ನನ್ನನ್ನು ಕಳುಹಿಸಿದ ತಂದೆಯ ಮಾತೇ"** (ಯೊಹಾನ 14:24) **"ಲೋಕದೊಳಗಿಂದ ನೀನು ನನಗೆ ಕೊಟ್ಟ ಮನುಷ್ಯರಿಗೆ ನಿನ್ನ ಹೆಸರನ್ನು ತಿಳಿಯಪಡಿಸಿದೆನು"** (ಯೋಹಾನ 17:6) **"ನಾನು ನಿನ್ನ ವಾಕ್ಯವನ್ನು ಇವರಿಗೆ ಕೊಟ್ಟಿದ್ದೇನೆ"** (ಯೋಹಾನ 17:14) **"ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆ ಪಡಿಸು; ನಿನ್ನ ವಾಕ್ಯವೇ ಸತ್ಯವು"** (ಯೋಹಾನ 17:17) ಇವೇ ಮುಂತಾದ ಮಾತುಗಳಿಂದ ತನ್ನ ಎಲ್ಲಾ ಬೋಧನೆಗಳನ್ನು ತಾನು ಈಗಾಗಲೇ ತಂದೆಯಿಂದ ಕಲಿತುಕೊಂಡಿದ್ದು ಎಂದು ಆತನು ತಾನೇ ಸಾರ್ವಜನಿಕವಾಗಿ ಪ್ರಕಟಿಸಲಿಲ್ಲವೇ?

ಇದರಂತೆ ನಮ್ಮ ಕರ್ತನು 'ಅಪೋಸ್ತಲರನ್ನು' ವಿಶೇಷ ಬೋಧಕರುಗಳನ್ನಾಗಿಯೂ ಮತ್ತು ಸಭೆಯಲ್ಲಿ ಇನ್ನೂ ಕೆಲವರನ್ನು ಬೋಧಕರುಗಳನ್ನಾಗಿಯೂ, ಕರ್ತನ ಮಂದೆಯನ್ನು ಕಾಯುವ ಪಾಲಕರನ್ನಾಗಿಯೂ ತನ್ನ ಕೆಳಗೆ ನೇಮಿಸಿಕೊಂಡನು ಮತ್ತು ಅವರಿಗೆ **"ನನ್ನ ಕುರಿಗಳನ್ನು ಮೇಯಿಸಿರಿ' "ನನ್ನ ಕುರಿ ಮರಿಗಳನ್ನು ಮೇಯಿಸಿರಿ" "ದೇವರು ಸ್ವರಕ್ತದಿಂದ (ಪ್ರಿಯ ಕುಮಾರನು) ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವುದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ"** (ಅ.ಕೃ. 20:28) ಎಂಬಿತ್ಯಾದಿ ಅದೇಶಗಳನ್ನಿತ್ತನು. ಹೀಗಿದ್ದಾಗ್ಯೂ, ಯಾರೂ ತಮ್ಮ ತಮ್ಮ ಸ್ವಂತ ಸಿದ್ಧಾಂತಗಳನ್ನು ಬೋಧಿಸುವಂತಿಲ್ಲ. ಅವುಗಳು ಕೇವಲ ಈ ಲೋಕದ ಜ್ಞಾನವಾಗಿವೆ. ದೇವಜನರು ಯೆಹೋವನ ಬಗ್ಗೆ ಅಷ್ಟೇ ಬೋಧಿಸಬೇಕು. ಈ ಲೋಕದ ಜನರಿಗೆ ಯೆಹೋವನ ಮಾತುಗಳನ್ನು, ಯೋಜನೆಯನ್ನು ಮತ್ತು ಗುಣಲಕ್ಷಣಗಳನ್ನು ಸತ್ಯ ಮತ್ತು ಉತ್ಕೃಷ್ಟತೆಯ ಮಟ್ಟದಲ್ಲಿ ಬೋಧಿಸುವವರನ್ನು ಹೊರತಾಗಿ ಬೇರೆ ಯಾರೂ ಸತ್ಯ ಬೋಧಕರು ಎನ್ನಿಸಿಕೊಳ್ಳಲಾರರು. ಹೀಗೆ ಮಾಡುವಾಗ ಅವರು ಅಗತ್ಯವಾಗಿ 'ಕ್ರಿಸ್ತನ ಸಿದ್ಧಾಂತ'ಗಳಿಗೆ ಮತ್ತು 'ಅಪೋಸ್ತಲರ ಸಿದ್ಧಾಂತ'ಗಳಿಗೆ ಗಮನ ಕೊಡುತ್ತಾರೆ. ಇವುಗಳೆಲ್ಲವೂ ತಂದೆ ದೇವರ ಭವ್ಯವಾದ ಮತ್ತು ನಿತ್ಯನಿರಂತರವಾದ ನಿಯಮದ ಪದ ವಿನ್ಯಾಸ ಮತ್ತು ಉಪದೇಶಗಳಾಗಿವೆಯೇ ಹೊರತು ಮತ್ತೇನೂ ಅಲ್ಲ.

ಇದು ತಮ್ಮನ್ನು ಬೋಧಕರು ಎಂದು ಸೋಗು ಹಾಕುವವರಂತಲ್ಲದೆ ನಮ್ಮ ಕರ್ತನಾದ ಯೇಸು ಕ್ರಿಸ್ತನಾಗಲೀ ಆತನ ಅಪೋಸ್ತಲರುಗಳಾಗಲೀ ಮೂಲಭೂತತೆಯ ಹಕ್ಕನ್ನು ಸಾಧಿಸಲಿಲ್ಲ. **"ನೀವು ಮನುಷ್ಯಕುಮಾರನನ್ನು ಎತ್ತರದಲ್ಲಿಟ್ಟಾಗ ಇವನೇ ಆತನೆಂದೂ, ತನ್ನಷ್ಟಕ್ಕೆ ತಾನೇ ಏನೂ ಮಾಡದೆ ತಂದೆಯು**

**ತನಗೆ ಬೋಧಿಸಿದ ಹಾಗೆ ಅದನ್ನೆಲ್ಲಾ ಮಾತಾಡಿದನೆಂತಲೂ ನನ್ನ ವಿಷಯವಾಗಿ ನಿಮಗೆ ತಿಳಿಯುವುದು"** (ಯೋಹಾನ 8:28) ಎಂಬ ನಮ್ಮ ಕರ್ತನ ದೀನತೆಯ ಮಾತುಗಳಿಗಿಂತ ಸುಂದರವಾಗಿ ಏನೂ ಇಲ್ಲ ಎಂಬುದನ್ನು ಗುರುತಿಸಿರಿ. ಈ ರೀತಿಯಲ್ಲಿ ಯೆಹೋವನಿಗೆ ದೀನನೂ, ವಿನಯಶೀಲನೂ ಆಗಿ ಕಂಡುಬಂದಾತನಿಗೆ ಅಂಥಾಃ ಮಹತ್ತಾದ ಮತ್ತು ಅಧಿಕಾರಯುಕ್ತ ಸ್ಥಾನವನ್ನು ವಹಿಸಿಕೊಟ್ಟು ಆತನು ಕರ್ತನ ಬಲಪಾರ್ಶ್ವಕ್ಕೆ ಏರಿಸಲ್ಪಟ್ಟದ್ದು ಹೇಗೆ? ಎಂದು ಯಾರಾದರೂ ಆಶ್ಚರ್ಯಪಡಬಹುದೇ. ಈ ರೀತಿಯಲ್ಲಿ ನಮ್ಮ ಕರ್ತನು ಕಲಿಸಿದ ಬೋಧನೆಗಳನ್ನು ತಾನು ಸ್ವತಃ ಸಮರ್ಪಕವಾಗಿ ಕಲಿತಿದ್ದನು ಎಂಬದರಲ್ಲಿ ನಾವು ಸ್ಫೂರ್ತಿಗೊಂಡಿದ್ದೇವೆ. – **"ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು"** (ಇಬ್ರಿಯ 5:8) – **"ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು"** (ಫಿಲಿಪ್ಪಿ 2:8).

ಇನ್ನೂ ಹೆಚ್ಚಾಗಿ, ಕರ್ತನು ಪ್ರವಾದಿಗಳ ಮೂಲಕ ಮಹಾ ಬೋಧಕನಾದ ಯೇಸುವು ಯೆಹೋವನಿಂದ ನೇಮಕಗೊಂಡಿದ್ದು, ಮಾನವ ಜನಾಂಗಕ್ಕೆ ಓರ್ವ ಕರುಣಾಮಯಿ ಮತ್ತು ನಿಷ್ಠಾವಂತ ಮಹಾ ಯಾಜಕನಾಗುವ ಸಲುವಾಗಿ ಮತ್ತು ನಮ್ಮ ರಕ್ಷಣೆಯ ನಾಯಕನಾಗುವಂತೆ ಯೆಹೋವನಿಂದಲೇ ಬೋಧಿಸಲ್ಪಟ್ಟನು ಎಂಬುದನ್ನು ತೋರಿಸಿದ್ದಾನೆ. ಆತನು ಅನುಭವಿಸಿದ ಶ್ರಮೆಯ ಮೂಲಕವಾಗಿ ಅನುಭವದಲ್ಲಿ ಸರ್ವ ಸಮರ್ಪಕನಾಗುವ ಅಗತ್ಯವಿತ್ತು (ಇಬ್ರಿಯ 2:8–9) ನಮ್ಮ ಕರ್ತನು ಯೆಹೋವನಿಂದ ಬೋಧನೆ ಹೊಂದಿಕೊಳ್ಳುವುದಕ್ಕಿಂತ ಬಹಳ ಹಿಂದೆಯೇ ಈ ಪ್ರವಾದನೆಗಳಲ್ಲಿ ಆತನು ಬೋಧನೆಗಳನ್ನು ಚೆನ್ನಾಗಿ ಕಲಿತುಕೊಳ್ಳುವನು ಮತ್ತು ಅದರಲ್ಲಿನ ನಿಯಮಗಳಿಗೆ ಪ್ರೀತಿಯನ್ನೂ ನಿಯಮ ನೀಡಿದಾತನಿಗೆ ಗೌರವವನ್ನೂ ಪ್ರಕಟಿಸಿದ್ದನ್ನು ಗಮನಿಸಿರಿ :

**"ಬಳಲಿಹೋದವರನ್ನು ಮಾತುಗಳಿಂದ ಸುಧಾರಿಸುವುದಕ್ಕೆ ನಾನು ಬಲ್ಲವನಾಗುವಂತೆ ಕರ್ತನಾದ ದೇವರು (Adonai Jehovah) ಶಿಕ್ಷಿತರ ನಾಲಿಗೆಯನ್ನು ನನಗೆ ದಯಪಾಲಿಸಿದ್ದಾನೆ; ಬೆಳಬೆಳಗೂ ನನ್ನನ್ನು ಎಚ್ಚರಿಸಿ ಶಿಕ್ಷಿತರಂತೆ ನಾನು ಕೇಳುವ ಹಾಗೆ ನನ್ನ ಕಿವಿಗಳನ್ನು ಜಾಗರಗೊಳಿಸುತ್ತಾನೆ. ಕರ್ತನಾದ (ಅದೋನೈ ಯೆಹೋವನಾದ) ನನ್ನ ದೇವರು ನನ್ನ ಕಿವಿಯನ್ನು ತೆರೆದಿದ್ದಾನೆ. ನಾನು ಎದುರು ಬೀಳಲಿಲ್ಲ, ವಿಮುಖನಾಗಲೂ** ಇಲ್ಲ (ಆತನ ಬೋಧನೆಗಳಿಂದ). **ಹೊಡೆಯುವವರಿಗೆ ಬೆನ್ನುಕೊಟ್ಟು ಕೂದಲು ಕೀಳುವವರಿಗೆ ಗಡ್ಡವನ್ನು ಒಡ್ಡಿದೆನು; ಉಗುಳಿಸಿಕೊಳ್ಳುವ ಅವಮಾನಕ್ಕೆ ನನ್ನ ಮುಖವನ್ನು ಮರೆಮಾಡಲಿಲ್ಲ"** – ಯೆಶಾಯ 50:4–7, ಮತ್ತಾಯ 26:67; 27:26, 30 ಮತ್ತು ಯೆಶಾಯ 53:11..

ಈ ಪ್ರಸ್ತಾಪದ ಮುಂದುವರಿಕೆಯಲ್ಲಿ ನಮ್ಮ ಕರ್ತನಾದ ಯೇಸುವನ್ನು ಮಹಿಮೆಯುಳ್ಳ ರಾಜವಂಶಸ್ಥ ಯಾಜಕನ ಸ್ಥಾನಕ್ಕೆ ಸಿದ್ಧಮಾಡುವಂತೆ ಕರ್ತನ ಸಾಕ್ಷ್ಯವನ್ನು ಕೇಳಿಸಿಕೊಳ್ಳಿ :

**"ಆ ಅಂಕುರದ ಮೇಲೆ ಜ್ಞಾನ ವಿವೇಕದಾಯಕ ಆತ್ಮ, ಆಲೋಚನಪರಾಕ್ರಮಗಳನ್ನು ಹುಟ್ಟಿಸುವ ಆತ್ಮ, ತಿಳುವಳಿಕೆಯುನ್ನೂ ಭಯುವನ್ನೂ** (ಭಯುಭಕ್ತಿ) **ಉಂಟುಮಾಡುವ ಆತ್ಮ, ಅಂತೂ ಕರ್ತನ ಆತ್ಮವೇ ನೆಲೆಗೊಂಡಿರುವುದು; ಕರ್ತನ ಭಯವು** (ಭಯಭಕ್ತಿ) **ಅವನಿಗೆ ಪರಿಮಳಿಸುವುದು; ಅವನು ಕಣ್ಣಿಗೆ ಕಂಡಂತೆ ತೀರ್ಪು ಮಾಡುವುದಿಲ್ಲ"** (ಯೆಶಾಯ 11:2–3) – ಯಾಕೆಂದರೆ ಆತನು ನಮ್ಮ ದೌರ್ಬಲ್ಯಗಳ ಭಾವನೆಯಿಂದ ಮನಕರಗಿದವನಾಗಿದ್ದಾನೆ. ಆದುದರಿಂದ ಯಾರು ಆತನ ಮೂಲಕ – ಈಗ ಸಭೆಯ ಮೂಲಕ ದೇವರ ಬಳಿಗೆ ಬರುತ್ತಾರೋ ಈ ಆತನ ಸಭೆ, ನಂತರ ಲೋಕಕ್ಕೆ ಅವರಿಗೆ ಮಿಲಿಯಾಂತರ ಯುಗದಲ್ಲಿ ಉತ್ತಮವಾಗಿ ನೆರವಾಗುತ್ತಾನೆ – **"ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವುದರಿಂದ ಶೋಧಿಸಲ್ಪಡುವವರಿಗೆ ಸಹಾಯಮಾಡುವುದಕ್ಕೆ ಶಕ್ತನಾಗಿದ್ದಾನೆ"** – ಇಬ್ರಿಯ 2:18.

ಪುನಃ ಪ್ರವಾದನಾ ರೂಪದಲ್ಲಿ ಮೆಸ್ಸೀಯನು ಹೀಗೆ ಹೇಳುವಂತೆ ಪ್ರತಿನಿಧಿಸಲ್ಪಟ್ಟಿದ್ದಾನೆ – **"ಯೆಹೋವನು ನನಗೆ ಆಲೋಚನೆಗಳನ್ನು (ನನಗೆ ಅವರ ಬಗ್ಗೆ ಜ್ಞಾನ ಹೊಂದುವಂತೆ) ಹೇಳಿಕೊಡುತ್ತಾನೆ; ಆತನನ್ನು ಕೊಂಡಾಡುವೆನು"** – ಕೀರ್ತನೆ 16:7.

**"ನೀನು ನನಗೆ ಜೀವಮಾರ್ಗವನ್ನು ತಿಳಿಯಪಡಿಸುವಿ"** (ಕೀರ್ತನೆ 16:11) ಅಪೋಸ್ತಲನ ಇಂಥಾಃ ಹೇಳಿಕೆಗಳು ನಮ್ಮ ಕರ್ತನಾದ **"ಮಾನವನಾದ ಯೇಸುಕ್ರಿಸ್ತ"**ನ ಬಗ್ಗೆ ಅನ್ವಯವಾಗುತ್ತವೆ. ಈ ರೀತಿಯಲ್ಲಿ ಸುವಾರ್ತಿಕನಾದ ಲೂಕನ ಹೇಳಿಕೆಗಳು – **"ಆ ಬಾಲಕನು ಬೆಳೆದು ಬಲಗೊಂಡು ಜ್ಞಾನದಿಂದ ತುಂಬಿದವನಾದನು; ಮತ್ತು ಆತನ ಮೇಲೆ ದೇವರ ದಯವಿತ್ತು"** (ಲೂಕ 2:40) ಮತ್ತು **"ಯೇಸು ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು. ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು"** (ಲೂಕ 2:52) ಹೀಗೆ ದೃಢಗೊಳ್ಳುತ್ತವೆ.

ಈ ವಿಷಯದ ಬಗ್ಗೆ ಸತ್ಯವೇದದ ಅತ್ಯಂತ ಬಲಯುತವಾದ ಹೇಳಿಕೆಗಳನ್ನು ಪರೀಕ್ಷಿಸಿದ ಮೇಲೆ,

ದೇವರ ವಾಕ್ಯವು ನಮಗೆ **'ಯೆಹೋವ'**ನೆಂಬ ಮಹಾ ನಾಮವನ್ನು ಪರಲೋಕದ ತಂದೆಯ ಹೊರತಾಗಿ ಬೇರೆ ಯಾರಿಗೂ ಹೊರಿಸುವ ಅಧಿಕಾರವನ್ನು ನೀಡಿರುವುದಿಲ್ಲ ಎಂಬುದು ನಮಗೆ ದೃಢವಾಗುತ್ತದೆ; ಬೇರೆ ಯಾರಿಗೂ ಇದನ್ನು ಉಪಯೋಗಿಸುವುದಾಗಲೀ ಅನ್ವಯಿಸುವುದಾಗಲೀ ನಿಷಿದ್ಧವೆಂದು ನಮಗೆ ಸಂಪೂರ್ಣ ಭರವಸವಿದೆ.

ತಾನು ಎಲ್ಲಾ ಅಧಿಕಾರ, ಜ್ಞಾನ ಮತ್ತು ನ್ಯಾಯ. ಪ್ರೀತಿ ಮತ್ತು ಶಕ್ತಿಯ ಕೇಂದ್ರ ಎಂಬುದಾಗಿ ಮಾನ್ಯತೆ ಹೊಂದಿಕೊಳ್ಳಬೇಕೆಂಬ ಸರ್ವಶಕ್ತನ ನಿರ್ಣಯದ ಔಚಿತ್ಯದ ಬಗ್ಗೆ ಎಲ್ಲರೂ ನೋಡಬಹುದಾಗಿದೆ; ಯಾಕೆಂದರೆ ಇದು ಸತ್ಯ ಮತ್ತು ಇದಕ್ಕಿಂತ ಬೇರೆಲ್ಲವೂ ಅಸತ್ಯವಾಗಿದ್ದು ಕೆಡುಕನ್ನೂ, ಹಾನಿಯನ್ನೂ ಉಂಟುಮಾಡುವುದಾಗಿದೆ. ನಾವು ಕರ್ತನ ಸ್ವಂತ ಮಾತುಗಳ ಮೇಲಿನ ಹೇಳಿಕೆಗಳಲ್ಲಿ ಮತ್ತು ಆತನು ತನ್ನ ಮಾತುಗಳ ಮೂಲಕ ವಿಶೇಷವಾಗಿ ಕಲಿಸಿಕೊಟ್ಟ, ಪಂಚಾಶತ್ತಮ ಹಬ್ಬದ ನಂತರ ಪರಿಶುದ್ಧಾತ್ಮನಿಂದ ಸ್ಫೂರ್ತಿಹೊಂದಿದ ಅಪೋಸ್ತಲರ ಮಾತುಗಳ ಮೂಲಕ ಕಂಡುಕೊಳ್ಳುವುದೇನೆಂದರೆ ಯಾರೊಬ್ಬರೂ ಪರಲೋಕದ ತಂದೆಯೂ, ಪರಲೋಕದ ಕುಮಾರನೂ ಒಂದೇ ಆಗಿದ್ದಾರೆಂದು, ಅವರು ಒಂದೇ ರೀತಿಯ ಮಹಿಮೆ ಮತ್ತು ಶಕ್ತಿಗಳನ್ನು ಹೊಂದಿದ್ದಾರೆಂದು ಎಂದೂ ಹೇಳಿಲ್ಲ. ಹೀಗಾಗಿ ದೈವಿಕ ಅಧಿಕಾರವಿಲ್ಲದೆ ಇದನ್ನು ಮಾನವರ ವಿಶ್ವಾಸ ಸೂತ್ರದಲ್ಲಿ ಹಾಗೂ ಪ್ರಶ್ನೋತ್ತರ ರೂಪದ ಗ್ರಂಥಗಳಲ್ಲಿ ಸೇರಿಸಲಾಗಿದೆ.

ಪರಂತು, ಪರಲೋಕದ ತಂದೆಯು ತನ್ನ ಮುಖ್ಯ ಸೇವಕನ, ನಿಮಗೆ ಇಷ್ಟನಾದ ಒಡಂಬಡಿಕೆಯ ದೂತನ ಶ್ರೇಷ್ಟತೆಯ ಬಗ್ಗೆ ಎಂದಿಗೂ ಅಸೂಯೆಯನ್ನು ಪ್ರದರ್ಶಿಸಿರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಘನತೆಯಲ್ಲಿಯೂ, ಅಧಿಕಾರದಲ್ಲಿಯೂ ಆತನನ್ನು ತನ್ನ ನಂತರದ ಸ್ಥಾನಕ್ಕೆ ಏರಿಸಿದ್ದಾನೆ. ನಮ್ಮ ಕರ್ತನಾದ ಯೇಸು ತಾನೇ ಹೇಳಿದ ಮಾತುಗಳನ್ನು ಆಲಿಸಿರಿ – **"ತಂದೆಯು ಮಾಡುವುದನ್ನು ಕಂಡು ಮಗನು ಮಾಡುತ್ತಾನೆ ಹೊರತು ತನ್ನಷ್ಟಕೆ ತಾನೇ ಏನೂ ಮಾಡಲಾರನು; ಆತನು (ತಂದೆಯು) ಮಾಡುವದನ್ನೆಲ್ಲಾ ಹಾಗೆಯೇ ಮಗನೂ ಮಾಡುತ್ತಾನೆ. ತಂದೆಯು ಮಗನ ಮೇಲೆ ಮಮತೆಯಿಟ್ಟು ತಾನು ಮಾಡುವವುಗಳನ್ನೆಲ್ಲಾ ಅವನಿಗೆ ತೋರಿಸುತ್ತಾನೆ. ಇದಲ್ಲದೆ ಇವುಗಳಿಗಿಂತ ದೊಡ್ಡ ಕೆಲಸಗಳನ್ನು ಅವನಿಗೆ ತೋರಿಸುವನು; ಅವುಗಳನ್ನು ನೋಡಿ ನಿಮಗೆ ಆಶ್ಚರ್ಯವಾಗುವುದು. ತಂದೆಯು ಹೇಗೆ ಸತ್ತವರನ್ನು ಎಬ್ಬಿಸಿ ಬದುಕಿಸುತ್ತಾನೋ ಹಾಗೆಯೇ ಮಗನೂ ಸಹಾ ತನಗೆ ಬೇಕಾದವರನ್ನು ಬದುಕಿಸುತ್ತಾನೆಂದು ತಿಳಿದುಕೊಳ್ಳಿರಿ. ಇದಲ್ಲದೆ ತಂದೆಯು ಯಾರಿಗೂ ತೀರ್ಪುಮಾಡುವುದೂ ಇಲ್ಲ; ತೀರ್ಪುಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ; ಎಲ್ಲರೂ ತನಗೆ ಮಾನಕೊಡುವ ಪ್ರಕಾರವೇ ಮಗನಿಗೂ ಮಾನಕೊಡಬೇಕೆಂದು ತಂದೆಯು ಇಚ್ಛೈಸುತ್ತಾನೆ. ಮಗನಿಗೆ ಮಾನಕೊಡುವವನು ಅವನನ್ನು ಕಳುಹಿಸಿದ ತಂದೆಗೂ ಮಾನಕೊಡುವವನಾಗಿದ್ದಾನೆ"** – ಯೋಹಾನ 5 :19–23.

ಈಡುಬಲಿ ಯೋಜನೆಯ ಮಹಾ ಕತೃವಿನ ಕುರಿತಾದ ದೇವರ ವಾಕ್ಯದಲ್ಲಿನ ಪ್ರಕಟನೆಯನ್ನು ನಮ್ಮ ಮನಸ್ಸಿಗೆ ಸ್ಪಷ್ಟವಾಗಿ ತಂದುಕೊಳ್ಳುವಾಗ ಮಾತ್ರವೇ, ಮತ್ತು ಈ 'ಪ್ರಾಯಶ್ಚಿತ್ತ ಯಜ್ಞ' ಅಥವಾ 'ಪಾಪ ನಿವೃತ್ತಿ'ಯಲ್ಲಿ ಆತನ ಮತ್ತು ಆತನ ಗೌರವಾನ್ವಿತ ಮಹಾ ಸೇವಕನೂ 'ದೇವರು ಪಡೆದ ಏಕೈಕ ಕುಮಾರ'ನೂ, ಪ್ರಿಯ ಕುಮಾರನೂ ಆದಾತನ ವ್ಯತ್ಯಾಸವನ್ನು ಕಂಡುಕೊಂಡಾಗ ಮಾತ್ರವೇ ನಾವು ಯಥಾರ್ಥವಾಗಿ 'ಪಾಪನಿವೃತ್ತಿ'ಯ ತತ್ವಜ್ಞಾನವನ್ನು ಅರಿತುಕೊಳ್ಳಲು ಸಾಧ್ಯ. ಇದು ತಂದೆ ಮತ್ತು ಕುಮಾರನ ಬಗ್ಗೆ ಗೊಂದಲಗಳಿರುವ ಕಾರಣ ಬಹಳಷ್ಟು ಮಟ್ಟಿಗೆ ಇಂದಿನ ಹೆಚ್ಚಿನ ಕ್ರೈಸ್ತ ಜನರು ಈಡುಬಲಿಯೆಂಬ 'ಪಾಪನಿವೃತ್ತಿ'ಯ ಬಗ್ಗೆ ಗಲಿಬಿಲಿ ಗೊಂಡಿದ್ದಾರೆ. ಹೀಗಾಗಿ ಅವರುಗಳು ಮೂಲಭೂತ ಹಾಗೂ ಮಹತ್ವವಾದ ದೈವಿಕ ಪ್ರಕಟನೆಯ ನಂಬಿಕೆಯಲ್ಲಿ ಜಾರಿಬೀಳುವ ಅಪಾಯಕ್ಕೊಳಗಾಗಿದ್ದಾರೆ.

ಅಪೋಸ್ತಲನಾದ ಪೌಲನು ವಿಮೋಚನೆಯ ಪ್ರಸ್ತಾಪದ ಬಗ್ಗೆ ತಂದೆ ಮತ್ತು ಮಗನ ಸಂಬಂಧದಲ್ಲಿ ಸ್ಪಷ್ಟವಾಗಿಯೂ, ಬಲಯುತವಾಗಿಯೂ ಹೇಳುವುದೇನೆಂದರೆ **"ಒಬ್ಬ ದೇವರಿದ್ದಾನೆ ಹೊರತು ಬೇರೆ ದೇವರಿಲ್ಲವೆಂದು ಬಲ್ಲೆವು . . . ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ತಂದೆಯೆಂಬಾತನೇ; ಆತನು ಸಮಸ್ತಕ್ಕೂ ಮೂಲಕಾರಣನು; ನಾವು ಆತನಿಗಾಗಿ ಉಂಟಾದೆವು. ಮತ್ತು ನಮಗೆ ಒಬ್ಬನೇ ಕರ್ತ; ಆತನು ಯೇಸು ಕ್ರಿಸ್ತನೇ; ಆತನ ಮೂಲಕ ಸಮಸ್ತವೂ ಉಂಟಾಯಿತು, ನಾವೂ ಆತನ ಮೂಲಕ ಉಂಟಾದೆವು"** (1 ಕೊರಿ. 8:3,6). ಇದು ಹೇಳುವುದೇನೆಂದರೆ ಒಬ್ಬನೇ ಆದ ನಿತ್ಯ ನಿರಂತರವಾದ ದೇವರಿದ್ದಾನೆ. ಆತನು ಎಲ್ಲವುಗಳ ಕಾರಣ ಕರ್ತನು/ಕತೃವೂ, ಮೂಲವೂ ಆಗಿದ್ದಾನೆ ಮತ್ತು ನಾವು ಆತನವರಾಗಿದ್ದೇವೆ. ಮತ್ತು ಒಬ್ಬನೇ ಕರ್ತನು ಇದ್ದಾನೆ. ಆತನು ಯೇಸುಕ್ರಿಸ್ತನು. ಆತನ ಮೂಲಕವಾಗಿ ಪರಲೋಕದ ತಂದೆಯು ಆತನ ಯೋಜನೆಯ ವಿವಿಧ ವೈಶಿಷ್ಟ್ಯಗಳನ್ನು ನಿರ್ವಹಿಸುವವನಾಗಿದ್ದಾನೆ. ಆತನಿಂದ ಮತ್ತು ಆತನ ಮೂಲಕವಾಗಿ ಮಾತ್ರವೇ ನಮಗೆ ಪಾಪಪರಿಹಾರವು ಆತನ ರಕ್ತದಲ್ಲಿ ವಿಶ್ವಾಸ ವಿಡುವುದರಿಂದ ದೊರೆಯುತ್ತದೆ. ಆತನು ತಂದೆ ದೇವರನ್ನು ಮತ್ತು ನಾವು ನೆಲೆಗೊಂಡಿರುವ ದೇವರ ಕೃಪೆಯನ್ನು ಸಮೀಪಿಸುವ, ಮತ್ತು ದೇವರ ಮಹಿಮೆಯ ನಿರೀಕ್ಷೆಯಲ್ಲಿ ಉಲ್ಲಾಸಿಸುವ ಮಾರ್ಗವೂ ಆಗಿದ್ದಾನೆ – **"ನಾವು ಈಗ ನೆಲೆಗೊಂಡಿರುವ ದೇವರ ಕೃಪಾಶಯದಲ್ಲಿ**

**ಆತನ ಮೂಲಕವೇ ನಂಬಿಕೆಯಿಂದ ಪ್ರವೇಶವಾಯಿತು ಮತ್ತು ದೇವರ ಮಹಿಮೆಯನ್ನು ಹೊಂದುವೆವೆಂಬ ಭರವಸದಿಂದ ಉಲ್ಲಾಸವಾಗಿದ್ದೇವೆ"** – ರೋಮಾ. 5:2.

## ಸುಳ್ಳು ಸ್ಪಷ್ಟನೆಯಿಂದ ಬೆಂಬಲಿತವಾದ ಪಿತೃಗಳ ಸಂಪ್ರದಾಯ – ಪ್ರಕ್ಷಿಪ್ತತೆ (ಮೂಲಗ್ರಂಥದಲ್ಲಿ ಇಲ್ಲದ ಮಾತು ಸೇರಿಸಿರುವುದು)

## Tradition of the Fathers Supported by a Forgery - An Interpolation

ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ಪಾಪನಿವೃತ್ತಿಯು ಕಾರ್ಯವು ಯಶಸ್ವಿಯಾಗಿ ಪೂರ್ಣಗೊಂಡಿದ್ದು ಮುಂದೆಯೂ ನೆರವೇರಲಿರುವಾಗ ಆತನ ಶ್ರೇಷ್ಟತೆ ಮತ್ತು ಅರ್ಹತೆಯ ಕುರಿತಾದ ಕೆಳಕಂಡ ಅಧ್ಯಾಯಗಳನ್ನು ನಾವು ನಿಮ್ಮ ಪರಿಗಣನೆಗೆ ಬಿಡುತ್ತೇವೆ. ಆತನಿಗೆ ಪ್ರಾಪ್ತವಾಗಿರುವ ಮಹಾ ಗೌರವ ಮತ್ತು ಘನತೆಗಳು ಆತನ ವಿಮೋಚನಾ ಕಾರ್ಯದ ನಿಮಿತ್ತದಿಂದ ಮಾತ್ರವಲ್ಲ ಈ ಲೋಕದ ವಿಮೋಚಕನಾಗುವ ಮುನ್ನ ಅವುಗಳು ಆತನದಾಗಿದ್ದವು. ನಾವೀಗ ಯೋಜನೆಯ ಮಹಾ ಕರ್ತೃವಿನ ಕುರಿತಾದ ಕೆಲವನ್ನು ಸ್ಪಷ್ಟವಾಗಿ ಗುರುತಿಸಲಿದ್ದೇವೆ. ಆದರೆ ಕ್ರೈಸ್ತ ಪ್ರಪಂಚದ ಸಾಮಾನ್ಯ ಆಲೋಚನೆಯು **'ತ್ರೈಯೇಕತ್ವ ಸಿದ್ಧಾಂತ'** ಎಂಬ ಭ್ರಮೆಯಲ್ಲಿ ಹೆಚ್ಚಾಗಿ ಮುಣುಗಿ ಹೋಗಿದೆ. ಈ ಸಿದ್ಧಾಂತವನ್ನು ಹೆಚ್ಚಾಗಿ ಇದನ್ನು ಉಚ್ಚರಿಸುವ ಪ್ರತಿಪಾದಕರುಗಳು ತಾವು ಇದನ್ನು ಸರಿಯಾಗಿ ಅರ್ಥಮಾಡಿಕೊಂಡಿರುವುದಿಲ್ಲ ಮತ್ತು ಇದನ್ನು ಗ್ರಹಿಸಿಕೊಳ್ಳಲು ಮತ್ತು ವಿವರಿಸಲು ಸಾಧ್ಯವಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಆದುದರಿಂದ ನಾವು ಮಾನವರ ಈ ಗೊಂದಲಮಯ ಸಿದ್ಧಾಂತಕ್ಕೆ ಬಣ್ಣಕೊಡುವುದೆಂದು, ಬೆಂಬಲಿಸುವುದೆಂದು ಹೇಳಲಾಗುವ ದೇವರ ವಾಕ್ಯಭಾಗವನ್ನು ಪರೀಕ್ಷೆ ಮಾಡುವವರಾಗಿದ್ದೇವೆ. ದೇವರ ವಾಕ್ಯದಲ್ಲಿ ಇದಕ್ಕೆ ಯಾವ ಪ್ರಮಾಣವೂ ಕಂಡುಬರುವುದಿಲ್ಲ. ನಾವೀಗಾಗಲೇ ಸರ್ವಶಕ್ತನಾದ ಒಬ್ಬನೇ ದೇವರಿದ್ದಾನೆ, ಇಬ್ಬರಾಗಲೀ, ಮೂವರಾಗಲೀ ಅದಕ್ಕಿಂತ ಹೆಚ್ಚಾಗಲೀ ಇಲ್ಲ ಎಂಬುದನ್ನು ನಿಶ್ಚಯಪೂರ್ವಕವಾಗಿ ತಿಳಿಸಿಯಾಗಿದೆ. **'ತ್ರೈಯೇಕತ್ವ'** ಎಂಬ ಪದವಾಗಲೀ ಅದಕ್ಕೆ ಸರಿಸಮಾನವಾದ ಬೇರೆ ಯಾವುದೇ ಪದವಾಗಲೀ ದೇವರ ವಾಕ್ಯದಲ್ಲಿ ಎಲ್ಲಿಯೂ ಕಂಡು ಬರುವುದಿಲ್ಲ ಎಂಬ ಸತ್ಯವನ್ನು ನಾವು ನಿಮ್ಮ ಗಮನಕ್ಕೆ ತರುವವರಾಗಿದ್ದೇವೆ. ಯಾವುದೇ ಒಂದು ಹೇಳಿಕೆಯನ್ನು ಅನುಚಿತವಾಗಿಯಾಗಲೀ ಇದನ್ನು ಸೂಚಿಸುವಂತೆ ಅರ್ಥಮಾಡಿಕೊಳ್ಳಲಾಗದು. ನಿಜವಾಗಿಯೂ, ತ್ರೈಯೇಕತ್ವ ಸಿದ್ಧಾಂತವನ್ನು ಎತ್ತಿಹಿಡಿಯುವವರು ತಮ್ಮ ಸ್ವಂತ ಆಲೋಚನೆಯನ್ನು ವಿವರಿಸುವ ಪ್ರಯತ್ನದಲ್ಲಿ ನಿರಾಶಾದಾಯಕವಾಗಿ ತಮ್ಮನ್ನು ಸಿಲುಕಿಸಿಕೊಳ್ಳುತ್ತಾರೆ ಮತ್ತು ಕೇಳುವವರನ್ನು ಸಹಾ ಸಿಲುಕಿಸಿಹಾಕುತ್ತಾರೆ. ಅವರು ಒಂದೇ ಉಸುರಿನಲ್ಲಿ 'ಒಬ್ಬನೇ ದೇವರಿದ್ದಾನೆ' (ಯಾಕೆಂದರೆ ದೇವರ ವಾಕ್ಯವು ಈ ಅಂಶಕ್ಕೆ ಒತ್ತುಕೊಡುವುದಾಗಿದ್ದು ಇದನ್ನು ನಿರ್ಲಕ್ಷಿಸುವಂತಿಲ್ಲ) ಎಂದು ಹೇಳುವವರಾಗಿದ್ದರೂ ಅದೇ ಉಸುರಿನಲ್ಲಿ ಮೂರು ದೇವರುಗಳು ಇದ್ದಾರೆಂದು ಸಹಾ ಹೇಳುತ್ತಾರೆ (ಯಾಕೆಂದರೆ ಈ ವಿಚಾರ ಸರಣಿಗೆ ಅವರು ಪಿತೃಗಳ ಸಂಪ್ರದಾಯಕ್ಕೆ ಬದ್ಧರಾಗಿದ್ದಾರೆ ಮತ್ತು ಇದು ಆದಿಕಾಲದ ಪೋಪರಿಂದ ಇಳಿದುಬಂದಿದೆ).

ಆದಾಗ್ಯೂ, ಮೂರು ದೇವರುಗಳಿದ್ದರೂ, ಆತನು ಒಬ್ಬನೇ ದೇವರಾಗಿರುವುದು ಹೇಗೆ? ಪ್ರಶ್ನೋತ್ತರ ರೂಪದ ಗ್ರಂಥದಲ್ಲಿ ವಿವರಿಸಿರುವಂತೆ ಶಕ್ತಿ ಮತ್ತು ಮಹಿಮೆಗಳಲ್ಲಿ ಸಮಾನರಾದ ಮೂರು ದೇವರುಗಳಿದ್ದರೆ, ಒಬ್ಬನೇ ದೇವರಿದ್ದಾನೆ ಎಂದು ಹೇಳುವುದು ಅಸತ್ಯವಾಗುತ್ತದೆ. ಸಂತ ಪೌಲನು ಪ್ರಕಟಿಸಿರುವಂತೆ **"ಒಬ್ಬನೇ ತಂದೆಯಾದ ದೇವರು ಮತ್ತು ಆತನ ಮೂಲಕವೇ ಸಮಸ್ತವೂ"** ಎಂದಾದರೆ, ಮತ್ತು ಯೇಸು ಕ್ರಿಸ್ತನು ತಾನೇ ಪ್ರಕಟಿಸಿರುವಂತೆ **"ತಂದೆಯು ತನ್ನ ಗೌರವಾನ್ವಿತ ಮಗನಿಗಿಂತಲೂ ಹೆಚ್ಚಿನವನು"** ಎನ್ನುವುದಾದರೆ, ತಂದೆಯು ತನ್ನ ಪ್ರಿಯ ಮಗನನ್ನು ಸತ್ತವರೊಳಗಿಂದ ಎಬ್ಬಿಸುವುದಾದರೆ ಮತ್ತು ಆತನು ಉನ್ನತ ಸ್ಥಾನಕ್ಕೆ ಏರಿಸುವುದಾದರೆ, ಗೌರವಿಸುವುದಾದರೆ, ಆತನಿಗಾಗಿ ಒಂದು ರಾಜ್ಯವನ್ನೇ ನೇಮಿಸುವುದಾದರೆ, ಅಂತಿಮವಾಗಿ ಮಗನು ಆ ರಾಜ್ಯವನ್ನು ತನ್ನ ತಂದೆಗೆ ಒಪ್ಪಿಸಿಕೊಡುವುದಾದರೆ, ತಂದೆಯು ಸಮಸ್ತದಲ್ಲಿ ಸಮಸ್ತನೂ ಆಗುವುದಾದರೆ, ಸಮಾನ ಅಧಿಕಾರವುಳ್ಳ ಅನೇಕ ದೇವರುಗಳು ಇದ್ದಾರೆ ಎಂಬುದು ಸತ್ಯವೆನಿಸದು. ಪರಂತು ಮುಂದಿನ ಅಧ್ಯಾಯದಲ್ಲಿ ನಮ್ಮ ಕರ್ತನಾದ ಯೇಸು ಕ್ರಿಸ್ತನು ಒಬ್ಬ ದೇವರು, ತಂದೆಯನ್ನು ಗೌರವಿಸುವಾಗ ಆತನನ್ನೂ ಗೌರವಿಸಬೇಕು ಮತ್ತು ಆತನನ್ನು ಗೌರವಿಸುವಾಗ ಆತನನ್ನು ಉನ್ನತ ಸ್ಥಿತಿಗೆ ಏರಿಸಿದ ತಂದೆಯನ್ನೂ ನಾವು ಗೌರವಿಸಿದಂತಾಗುತ್ತದೆ ಎಂಬುದನ್ನು ನಾವು ನಿರ್ಧಾರಾತ್ಮಕವಾಗಿ ತೋರಿಸುತ್ತೇವೆ. ಹೀಗಿದ್ದರೂ ಪರಿಶುದ್ಧ ಗ್ರಂಥಗಳ ಐಕ್ಯತಾ ಧ್ವನಿಯು ಖಡಾಖಂಡಿತವಾಗಿ ಒಬ್ಬನೇ ಸರ್ವಶಕ್ತನಾದ ದೇವರಿದ್ದಾನೆ, ಆತನು. ಎಲ್ಲರ ತಂದೆಯಾಗಿದ್ದಾನೆ ಎಂಬುದನ್ನು ಒತ್ತಿಹೇಳುತ್ತದೆ. ಅಪೋಸ್ತಲನು ಹೇಳುವಂತೆ **"ಪ್ರತಿ ಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ, ಕ್ರಿಸ್ತನಿಗೆ ದೇವರು ತಲೆಯಾಗಿದ್ದಾನೆ"** – 1 ಕೊರಿ. 11:3.

ಪರಿಶುದ್ಧ ಗ್ರಂಥದಲ್ಲಿ ಒಂದು ಹೇಳಿಕೆಯಿದೆ, ಇದು ಸ್ವಲ್ಪ ಮಟ್ಟಿಗೆ ದೇವರ ತ್ರೈಯೇಕತ್ವದ ಅರ್ಥವನ್ನು ನೀಡುತ್ತದೆ; ಈ ವಾಕ್ಯವೃಂದವನ್ನು ಎಲ್ಲಾ ವೇದಪಂಡಿತರುಗಳೂ ಕೃತಕವಾದುದ್ದೆಂದು, ಪ್ರಕ್ಷಿಪ್ತ ವಚನ (ಮೂಲಗ್ರಂಥದಲ್ಲಿ ಇಲ್ಲದ್ದನ್ನು ಸೇರಿಸಿರುವುದು) ಎಂದು ಒಪ್ಪಿಕೊಳ್ಳುತ್ತಾರೆ, ಆದುದರಿಂದ ಈ ಪುನರಾವೃತ್ತಿಯ ಭಾಷಾಂತರ ಕಾರರೆಲ್ಲರೂ ತ್ರೈಯೇಕತ್ವವಾದಿಗಳಾದರೂ ಇದನ್ನು ನೂತನ ಒಡಂಬಡಿಕೆಯ ಪುನರಾವೃತ್ತಿಯಲ್ಲಿ ಕೈಬಿಡಲಾಗಿದೆ. ಅವರು ತ್ರೈಯೇಕತ್ವಕ್ಕೆ ಬೆಂಬಲ ನೀಡುವ ಈ ವಾಕ್ಯಭಾಗವನ್ನು ಇಟ್ಟುಕೊಳ್ಳಬೇಕೆಂದು ಅದು ಹೇಳಿಕೆಯಲ್ಲಿ ಅಸಂಪೂರ್ಣವಾದುದರಿಂದ ಅದನ್ನು ಆತ್ಮಸಾಕ್ಷಿಯ ದೆಶೆಯಿಂದ ಉಳಿಸಿಕೊಳ್ಳಲಾಗಲಿಲ್ಲ.

ಈ ಪ್ರಕ್ಷಿಪ್ತ ವಾಕ್ಯಭಾಗವನ್ನು ಸೇರಿಸಿದಕ್ಕಾಗಿ ಸಾಮಾನ್ಯ ಆವೃತ್ತಿಯ ಭಾಷಾಂತರಕಾರರನ್ನು ದೂಷಿಸಲಾಗದು. ಯಾಕೆಂದರೆ ಅದರ ಭಾಷಾಂತರದ ಸಮಯದಲ್ಲಿ ಅದರ ಕೃತಿಮತೆಯನ್ನು ತಿಳಿದುಕೊಳ್ಳಲು ಅಸಾಧ್ಯವಾಗಿತ್ತು. ಅದರ ಭಾಷಾಂತರದಿಂದೀಚೆಗೆ ನೂರಾರು ಪುರಾತನ ಗ್ರೀಕ್ ಕೈಬರಹಗಳು ದೊರೆತವು. ಆದರೆ ಏಳನೆಯ ಶತಮಾನದ ಹಿಂದಿನ ಬರಹಗಳಲ್ಲಿ ತ್ರೈಯೇಕತ್ವದ ಪರವಾಗಿ ಏನೂ ದೊರೆಯದು. ಆದುದರಿಂದ ವೇದಪಂಡಿತರುಗಳು ಯಾವುದೇ ಪಂಗಡದ ಪ್ರವೃತ್ತಿಗೆ ಮಣಿಯದೆ ಈ ಮಾತುಗಳನ್ನು ತ್ರೈಯೇಕತ್ವ ಸಿದ್ಧಾಂತಕ್ಕೆ ಅ ಸಂಬಂಧವಾದ ಚರ್ಚೆಗಳು ಸಭೆಯಲ್ಲಿ ವ್ಯಾಪಿಸಿರುವ ಕಾಲದಲ್ಲಿ ಮತ್ತು ತ್ರೈಯೇಕತ್ವವನ್ನು ಪ್ರತಿಪಾದಿಸುವವರು ಅವರ ವಿರೋಧಿಗಳೆದುರು ಗಾಭರಿಗೊಂಡಿರುವಾಗ ಅದನ್ನು ತ್ರೈಯೇಕತ್ವವನ್ನು ಬೆಂಬಲಿಸುವ ಸಲುವಾಗಿಯೇ ಸೇರಿಸಲಾಗಿತ್ತೆಂಬುದನ್ನು ಅಲ್ಲಗಳೆಯಲಿಲ್ಲ. ಯಾಕೆಂದರೆ ತಮ್ಮ ವಿಚಾರಸರಣಿಯನ್ನು ಪುರಾವೆಗೊಳಿಸಲು ಅವರ ಬಳಿ ಯಾವುದೇ ದೇವರ ವಾಕ್ಯಭಾಗಗಳು ಇರಲಿಲ್ಲ. ಇಂಥಾಃ ಕೃತಿಮ ವಚನಗಳನ್ನು ಸೇರಿಸುವಲ್ಲಿ ಮಿತಿಮೀರಿತ ಉತ್ಸಾಹವುಳ್ಳ ಸನ್ಯಾಸಿಗಳು (Monks) ಕಾರಣವೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಯಾಕೆಂದರೆ, ಆತನ ಸಿದ್ಧಾಂತವೇ ಖಚಿತವಾದುದ್ದೆಂದೂ, ಪವಿತ್ರಾತ್ಮನು ವೇದದಲ್ಲಿ ಇದನ್ನು ಹೇಳದೆ ಘೋರ ಅಪರಾದವೆಸಗಿದ್ದಾನೆ ಎಂದು ಆತನು ಭಾವಿಸಿದ್ದಿರಬಹುದು. ಆತನ ಉದ್ದೇಶವು, ನಿಸ್ಸಂಧೇಹವಾಗಿ ದೇವರು ಮತ್ತು ಸತ್ಯವನ್ನು ಒಂದು ಸುಳ್ಳು ನಿರೂಪಣೆಮಾಡುವ ಪ್ರಮಾದದ ಕಾರ್ಯವೆಸಗಿ ಸೈತಾನನೆಂಬ ವಿರೋಧಿಯ ಸಲಹೆಯಂಥೆ ಒಳ್ಳೆಯದನ್ನು ಮಾಡಲು ತಪ್ಪನ್ನು ಮಾಡುವುದು, ಸುಳ್ಳು ಸ್ಪಷ್ಟನೆ ಮಾಡಿ ದೇವರು ಮಾಡಿರುವ ತಪ್ಪನ್ನು ಸರಿಪಡಿಸುವ ಕಷ್ಟದಿಂದ ಹೊರತರಲು ಸಹಾಯ ಮಾಡಿರುವನೆಂದು ಭಾವಿಸಿದನು. ಆದರೆ ಈ ಎಲ್ಲಾ ಸಲಹೆಗಳೂ "ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧ"ನಾಗಲು ದೇವರು ನಮಗೆ ಪೂರ್ಣವಾದ ಪ್ರಕಟನೆ ನೀಡಿರುವುದಿಲ್ಲ ಆದುದರಿಂದ ಒಳ್ಳೆಯದಕ್ಕಾಗಿ ಮತ್ತು ದೇವರ ತಪ್ಪನ್ನು ಸರಿಪಡಿಸುವುದಕ್ಕಾಗಿ ಈ ರೀತಿ ತಪ್ಪು ಮಾಡುವುದು ಸರಿಯಾಗಿಯೇ ಇದೆ ಎಂಬ ಅಭಿಪ್ರಾಯ ವನ್ನುಂಟುಮಾಡುತ್ತದೆ. ಈ ಸುಳ್ಳುಸ್ಪಷ್ಟನೆ ಎಸಗಿದ ಸನ್ಯಾಸಿಗಳು (Monks) ಅಥವಾ ಪಾದ್ರಿಗಳು, ಸುವ್ಯಕ್ತವಾಗಿ ಏಳನೆಯ ಶತಮಾನದ ಆದಿಭಾಗದಲ್ಲಿ ಮಾಡಿರುವ ದೇವರ ವಾಕ್ಯಕ್ಕೆ ಈ ಸುಳ್ಳುಸ್ಪಷ್ಟನೆಯನ್ನು ಸೇರಿಸುವ ಮೂಲಕ ಅನೇಕರನ್ನು ತಪ್ಪು ಮಾರ್ಗಕ್ಕೆ ಎಳೆದಿರುವುದಕ್ಕಾಗಿ ಮತ್ತು ಇದು ದೇವಜನರಿಗೆ ಉಂಟುಮಾಡಿರುವ ಕೇಡಿನ ಪ್ರಭಾವಕ್ಕಾಗಿ ಬಹಳಷ್ಟು ಉತ್ತರಿಸಬೇಕಾಗುತ್ತದೆ.

ಈ ಕೃತಿಮವಾದ ಪ್ರಕ್ಷಿಪ್ತವಚನವನ್ನು ನಾವು 1 ಯೋಹಾನ 5:7ರಲ್ಲಿ ಕಾಣುತ್ತೇವೆ. ಇದು ಈ ಮಾತುಗಳನ್ನು ಒಳಗೊಂಡಿದೆ "In heaven the Father, the word and the Holy Spirit and these three are one, And there are three that bear witness in earth" (ಇದನ್ನು ಕನ್ನಡ ಬಾಷೆಯಲ್ಲಿ **"ಆತ್ಮ ನೀರು ರಕ್ತ ಎಂಬ ಮೂರು ಸಾಕ್ಷಿಗಳುಂಟು : ಈ ಮೂರೂ ಒಂದೇ ಅಭಿಪ್ರಾಯವಾಗಿ ಸಾಕ್ಷಿ ಹೇಳುತ್ತವೆ"** ಎಂದು ತರ್ಜುಮೆ ಮಾಡಲಾಗಿದೆ). ಈ ಮಾತುಗಳನ್ನು ವಾಕ್ಯಭಾಗದಿಂದ ಕೈಬಿಟ್ಟಲ್ಲಿ ಇದನ್ನು ಸುಲಭವಾಗಿ ಅರ್ಥಮಾಡಿ ಕೊಳ್ಳಬಹುದು ಮತ್ತು ಎಲ್ಲವೂ ಪರಿಶುದ್ಧ ಗ್ರಂಥದ ಇತರ ಭಾಗಗಳಲ್ಲಿದ್ದಂತವೆಯೇ ಇವೆ. ಆದರೆ, ಶತಮಾನಗಳಿಂದ ದೇವರ ವಾಕ್ಯದಲ್ಲಿ ಉಳಿದುಹೋಗಿರುವ ಈ ಮಾತುಗಳು ಗೊಂದಲವನ್ನೂ ಅನರ್ಥವನ್ನೂ ಉಂಟು ಮಾಡುವುದಾಗಿದೆ. ಉದಾಹರಣೆಗಾಗಿ, ಈ ಮಾತುಗಳು ದೇವರ ವಾಕ್ಯದಲ್ಲಿ ಉಳುಕೊಳ್ಳುವಾಗ ಅದರ ಅರ್ಥವೇನೆಂದರೆ ತಂದೆ ಮಗ ಮತ್ತು ಪರಿಶುದ್ಧಾತ್ಮರು ಪರಲೋಕದಲ್ಲಿ ಒಂದು ಸಾಕ್ಷಿಯನ್ನು ಹೊಂದಿದ್ದಾರೆ, ಅದುವೇ ಯೇಸು ಕ್ರಿಸ್ತನು. ಇದು ಎಷ್ಟು ಅಸಂಬದ್ಧವಾಗಿದೆ! ಯೇಸು ಕ್ರಿಸ್ತನನ್ನು ಅರಿಯದವರು ಪರಲೋಕದಲ್ಲಿ ಯಾರಿದ್ದಾರೆ? ಯಾರಿಗಾಗಿ ತಂದೆ, ಮಗ ಮತ್ತು ಪರಿಶುದ್ಧಾತ್ಮರು ಸಾಕ್ಷಿ ಹೇಳುವ ಅಗತ್ಯವಿದೆ? ಯಾರಿಗೂ ಇಲ್ಲ. ಆದರೆ, ಇದು ವಿರೋಧಿಗೆ ಅನುಕೂಲಕರ ಸ್ಥಳವಾಗಿದ್ದು ಸತ್ಯದ ಭ್ರಷ್ಟತೆಯನ್ನುಂಟು ಮಾಡುವುದರ ಮೂಲಕ ತನ್ನ ಸೇವೆಮಾಡಲು ಸೇವಕನೊಬ್ಬಾತನನ್ನು ಇಲ್ಲಿ ಇಟ್ಟುಕೊಂಡಿದ್ದಾನೆ. ಪರಿಷ್ಕೃತ ಆವೃತ್ತಿಯಲ್ಲಿ ಇದನ್ನು ಕೈಬಿಟ್ಟಿರುವುದು ಮಾತ್ರವಲ್ಲ, ಎಲ್ಲಾ ಆಧುನಿಕ ಭಾಷಾಂತರಗಳಾದ Young's Bible Translation, The American Bible Union Translation, The Improved Version ಇವುಗಳಲ್ಲಿ ಸ್ಪಷ್ಟವಾದ ಮಾತುಗಳನ್ನು ನೀಡಲಾಗಿದೆ. ಕಡೆಯದು

ಹೇಳುವುದೇನೆಂದರೆ :–

**ಪರಲೋಕದ ಸಾಕ್ಷಿಯ ಕುರಿತಾದ ಈ ಮಾತುಗಳು ಐದನೆಯ ಶತಮಾನಕ್ಕೂ ಹಿಂದೆ ಬರೆಯಲ್ಪಟ್ಟ ಯಾವುದೇ ಗ್ರೀಕ್ ಎ.ಎಸ್. ನಲ್ಲಿ ಇದ್ದಿಲ್ಲ ಇದನ್ನು ಯಾವುದೇ ಗ್ರೀಕ್ ಕ್ರೈಸ್ತ ಧರ್ಮೋಪದೇಶಕನಾಗಲೀ ಅಥವಾ ಯಾವುದೇ ಲ್ಯಾಟಿನ್ ಪಿತೃಗಳು ಬರೆದದ್ದಲ್ಲ. ಅವರು ಆದರಿಸುವ ಪ್ರಸ್ತಾಪವು ಸಹಾ ಸ್ವಾಭಾವಿಕವಾಗಿ ಅವರನ್ನು ಅದರ ಅಧಿಕಾರವನ್ನು ಪ್ರಶ್ನಿಸುವುದಕ್ಕೆ ನಡೆಸುತ್ತದೆ ; ಆದುದರಿಂದ ಇದು ಸ್ಪಷ್ಟವಾಗಿ ಕೃತಿಮವಾದುದು"**

ಈ ಕೃತಿಮ ವಾಕ್ಯಭಾಗದ ಬಗ್ಗೆ Lang's Critical Commentary ಹೇಳುವುದೇನೆಂದರೆ :–

**"ಹೇಳಿರುವಂತ ಮಾತುಗಳು ಎಲ್ಲಾ ಗ್ರೀಕ್ ಅನುಬಂಧಗಳಲ್ಲಿ ಮತ್ತು ಅತ್ಯಂತ ಪುರಾತನವಾದ ಗ್ರೀಕ್ ಹಸ್ತಪ್ರತಿ ಆದ Codex Sinaiticus ನಲ್ಲಿ ಮತ್ತು ಲ್ಯಾಟಿನ್ ಒಳಗೊಂಡಂತೆ ಎಲ್ಲಾ ಪುರಾತನ ಭಾಷಾಂತರಗಳಲ್ಲಿ ಎಂಟನೆಯ ಶತಮಾನದ ವರೆಗೂ ಇಲ್ಲವಾಗಿವೆ. ನಂತರದ ಎಂ.ಎಸ್..ಎಸ್. ಬರಹಗಳಲ್ಲಿ ಅವು ಮೂರು ಮಾರ್ಪಾಟುಗಳಲ್ಲಿ ದೊರತಿವೆ. ತ್ರೈಯೇಕತ್ವದ ವಾಗ್ವಾದವನ್ನು ಎದುರಿಸಲಾಗದೇ ಅದನ್ನು ಯಾರೊಬ್ಬ ಗ್ರೀಕ್ ಪಿತೃವಾಗಲೀ, ಯಾರೊಬ್ಬ ಲ್ಯಾಟಿನ್ ಸಭಾ ಪಿತೃವಾಗಲೀ ಉಲ್ಲೇಖಿಸಿರುವುದಿಲ್ಲ."**

ಹಡ್ಸನ್‌ರ ಗ್ರೀಕ್ ಮತ್ತು ಇಂಗ್ಲಿಷ್ ಹೊಂದಾಣಿಕೆ ಪುಸ್ತಕವು ಹೇಳುವುದೇನೆಂದರೆ :–

**"ಈ ಮಾತುಗಳು 15ನೆ ಅಥವಾ 16ನೇ ಶತಮಾನಗಳ ಹಿಂದಿನ ಯಾವುದೇ ಹಳೆಯ ಗ್ರೀಕ್ ಹಸ್ತಪ್ರತಿಯಲ್ಲಾಗಲೀ ಇನ್ನೂ ಪುರಾತನವಾದ ಭಾಷಾಂತರಗಳಲ್ಲಿಯಾಗಲೀ ಕಂಡುಬರುವುದಿಲ್ಲ"**

ಅನೇಕ ಮಾನ್ಯತೆಪಡೆದ ಈ ಕೆಳಕಂಡ ವೇದ ಪಂಡಿತರುಗಳು ಈ ಮಾತುಗಳನ್ನು ಪ್ರಕ್ಷಿಪ್ತವೆಂದು ಹೇಳಿದ್ದಾರೆ :–

Sir Issac Newton, Benson, Clark, Horne, Griesbach, Tischendorf, Tregelles, Lachman and Alford. ಕಡೆಯವರು ಹೇಳುವುದೇನೆಂದರೆ :–

"ಪವಿತ್ರ ವಾಕ್ಯಭಾಗದ ಟೀಕೆಯಲ್ಲಿ ಅಪ್ಪಟವಾದ ಚಪಲಚಿತ್ತತೆ ಅಥವಾ ಬುದ್ಧಿಚಾಂಚಲ್ಯವನ್ನು ಅನುಸರಿಸಿದವರಿಗೇ ಹೊರತು ಅವುಗಳು ಯಥಾರ್ಥ ವಾದವುಗಳು ಎಂಬುದಕ್ಕೆ ಯಾವುದೇ ಕಾರಣಗಳ ಛಾಯೆಯಾದರೂ ಇರುವುದಿಲ್ಲ"

Dr Constatine Tischendrof ಎಂಬುವವರು ಹೇಳುವಂತೆ :–

**"ಈ ಕೃತಿಮವಾದ ಸೇರಿಸುವಿಕೆಯು ಪತ್ರಿಕೆಯ ಭಾಗವಾಗಿ ಮುಂದುವರೆಯುವುದಾದಲ್ಲಿ ನಾನು ಇದನ್ನು ಭಕ್ತಿಹೀನತೆ ಎಂದೆಣಿಸುತ್ತೇನೆ"**

Prof. T.B.Wolsey ಯವರು ಪ್ರಶ್ನಿಸುವಂತೆ :

"ನಮ್ಮ ಆಂಗ್ಲ ಭಾಷೆಯ ಸತ್ಯವೇದಗಳಲ್ಲಿ ಲೂಥರನು ತನ್ನ ಭಾಷಾಂತರದಲ್ಲಿ ಹೇಳದಿರುವ ಮತ್ತು ಆತನ ಮರಣಾನಂತರ 50ವರ್ಷಗಳವರೆಗೂ ಜರ್ಮನ್ ಭಾಷೆಗೆ ನುಸುಳದಿರುವ ಈ ವಾಕ್ಯಭಾಗವನ್ನು ಹೊಡೆದುಹಾಕಲು ನಮ್ಮ ಸತ್ಯ ಮತ್ತು ನಿಷ್ಟೆಯು ಬೇಕಾಗುವುದಲ್ಲವೇ? "

Dr Adam Clarke ಈ ಬಗ್ಗೆ ವ್ಯಾಖಾನಿಸುತ್ತಾ ಹೇಳಿದ್ದೇನೆಂದರೆ :

**"ಈ ವಚನವು ಅಪ್ಪಟವಾದುದಲ್ಲ ಎಂದು ಕಾಣುತ್ತದೆ. ಮುದ್ರಣವನ್ನು ಕಂಡು ಹಿಡಿಯುವ ಮುನ್ನ ಬರೆದ ಪತ್ರಿಕೆಗಳ ಹಸ್ತಪ್ರತಿಗಳಲ್ಲಿ ಇದರ ಕೊರತೆಯಿದೆ. ಟ್ರಿನಿಟಿ ಕಾಲೇಜ್ ಡಬ್ಲಿನ್‌ನಲ್ಲಿ ಈ codex monfortill ಅನ್ನು ಬಿಟ್ಟುಬಿಟ್ಟಿದ್ದಾರೆ. ಇದನ್ನು ಬಿಟ್ಟಿರುವವರ ಇನ್ನಿತರ ಸಂಖ್ಯೆ ಒಂದು ನೂರಾ ಹನ್ನೆರಡು. ಸಿರಿಯಾಕ್ ಭಾಷೆಯಲ್ಲೂ, ಅರಾಬಿಕ್, ಇಥಿಯೋಪಿಯಾ, ಕೋಪ್ಟಿಕ್, ಸಹಾಡಿಕ್, ಅರ್ಮೀನಿಯನ್, ಸ್ಲಾವೋನಿಕ್ ಮುಂತಾದ ಭಾಷೆ ಗಳಲ್ಲಿಯೂ ಇದು ಇಲ್ಲವಾಗಿದೆ. ಒಂದೇ ಮಾತಲ್ಲಿ ಹೇಳುವುದಾದರೆ ವಲ್ಗೇಟಿನಲ್ಲಿ ಹೊರತು ಪಡಿಸಿ ಎಲ್ಲಾ ಪುರಾತನ ಹಾಗೂ ಸರಿಯಾದ ಭಾಷಾಂತರಗಳಲ್ಲಿ ಇದು ಇಲ್ಲವಾಗಿದೆ. ಇದು ಎಲ್ಲಾ ಪುರಾತನ ಹಾಗೂ ಹೆಚ್ಚಿನ ಲ್ಯಾಟಿನ್ ಪಿತೃಗಳ ಬಳಿ ಇದು ಇರುವುದಿಲ್ಲ"**

ಮೆಥೋಡಿಸ್ಟ್ ಸಭೆಯ ಸಂಸ್ಥಾಪಕನಾದ ಜಾನ್ ವೆಸ್ಲಿ ಎಂಬುವವರು ತ್ರೈಯೇಕತ್ವ ಸಿದ್ಧಾಂತವನ್ನು ಬೆಂಬಲಿಸಲು ಶ್ರಮಿಸಿದರು. ಹೀಗಿದ್ದಾಗ್ಯೂ, ಈ ವಾಕ್ಯಭಾಗದ ಅವರ ಒಂದಾನೊಂದು ಪ್ರಸಂಗದಲ್ಲಿ ಅವರು ಈ ಮಾತುಗಳ ಬಗ್ಗೆ "ನಾನು 'ತ್ರೈಯೇಕತ್ವ' 'ವ್ಯಕ್ತಿಗಳು' ಎಂಬುವ ಪದಗಳನ್ನು ಉಪಯೋಗಿಸುವ ಬಗ್ಗೆ ಅಳುಕುತ್ತೇನೆ. ಯಾಕೆಂದರೆ ನಾನು ಸತ್ಯವೇದದಲ್ಲಿ ಎಲ್ಲಿಯೂ ಈ ಶಬ್ಧಗಳನ್ನು ಕಾಣೆನು" ಎಂದಿದ್ದಾರೆ ಮತ್ತು "ಈ ಮಾತುಗಳಿಗೆ ನಿರೂಪಿಸಲಾಗದವುಗಳು ವಾಕ್ಯದಲ್ಲಿ ಒಳಗೊಂಡಿರುತ್ತದೆ. ವಾಕ್ಯಭಾಗದಲ್ಲಿ ಹೇಳಿರುವ ನೇರವಾದ ಮಾತುಗಳ ಬಗ್ಗೆಯಷ್ಟೇ ನಾನು ಆಗ್ರಹಿಸುತ್ತೇನೆ" ಎಂದಿದ್ದಾರೆ. ಅವರು ತ್ರೈಯೇಕತ್ವ ಸಿದ್ಧಾಂತವನ್ನು ರುಜುವಾತು ಪಡಿಸಲು ಕಠಿಣ ಶ್ರಮ ಪಟ್ಟರು. ಯಾಕೆಂದರೆ, ಈ ಕೃತಿಮವಾದ ವಾಕ್ಯಭಾಗವು ನೈಜವಾದುದೆಂದು, ಪುರಾತನ ಸತ್ಯವೇದದ ಹಸ್ತ ಪ್ರತಿಗಳಿಂದ ಪ್ರಾಪ್ತಿಪಡಿಸಿಕೊಂಡ ಇತ್ತೀಚಿನ ಸಕಾರಾತ್ಮಕವಾದ ಮಾಹಿತಿಯೆಂದು ಅವರು ನಂಬಿದ್ದರು. ಉದಾಹರಣೆಯಾಗಿ, ನಮ್ಮ ಕಿಂಗ್ಸ್ ಜೇಮ್ಸ್ ವರ್ಶನ್

ಅಥವಾ ಕಾಮನ್ ವರ್ಶನ್ ಬೈಬಲ್ (ಕ್ರಿ.ಶ.1611) ಇದರ ಸಿದ್ಧತೆ ಕಾರ್ಯ ಪ್ರಾರಂಭಗೊಂಡಾಗ ಭಾಷಾಂತಕಾರರಿಗೆ ಕೇವಲ ಎಂಟು ಗ್ರೀಕ್ ಹಸ್ತಪ್ರತಿಗಳ ಅನುಕೂಲತೆ ಇತ್ತೇ ಹೊರತು ಹತ್ತನೇ ಶತಮಾನದ ಹಿಂದಿನವುಗಳು ಲಭ್ಯವಿರಲಿಲ್ಲ. ಹೇಗೂ ಈಗ ಸುಮಾರು 700 ಎಂ.ಎಸ್.ಎಸ್.ಗಳು ಲಭ್ಯವಿದ್ದು ಇವುಗಳಲ್ಲಿ ವಿಶೇಷವಾಗಿ ಸಿನೈಟಿಕ್ ಮತ್ತು ವ್ಯಾಟಿಕನ್ ಎಂ.ಎಸ್. ಸಂಖ್ಯೆ 1209 ಇವುಗಳು ಬಹಳ ಪ್ರಾಚೀನವಾದವುಗಳಾಗಿದ್ದು ಕ್ರಿ.ಶ. 350ಕ್ಕೆ ಸೇರಿವೆ.

## ಪರಿಶುದ್ಧ ಗ್ರಂಥವು ತಂದೆ ಮತ್ತು ಮಗ ಹಾಗೂ ಅವರುಗಳ ಅನ್ಯೋನ್ಯತೆಯ ಬಗ್ಗೆ ಬೋಧಿಸುತ್ತವೆ.

## The Scripture Teaching Respecting The Father and The Son and Their Unity

ಪರಲೋಕದಲ್ಲಿರುವ ತಂದೆಯಾದ ಯೆಹೋವನು, ಪರಲೋಕದ ಕುಮಾರನಾದ ನಮ್ಮ ಕರ್ತನಾದ ಯೇಸು ಕ್ರಿಸ್ತನು, ಹಾಗೂ ಪವಿತ್ರಾತ್ಮನು ಇವರುಗಳ ಬಗ್ಗೆ ಇರುವ ತ್ರೈಯೇಕತ್ವದಲ್ಲಿನ ವಿಶ್ವಾಸದ ಅರಿಕೆಯನ್ನು ಮಾಡುವಾಗ ತೀವ್ರವಾದ ಭಿನ್ನತೆಯೊಂದನ್ನು ಮಾಡಿಕೊಳ್ಳಬೇಕಾಗುತ್ತದೆ. ತ್ರೈಯೇಕತ್ವ ಸಿದ್ಧಾಂತವು ತಂದೆ, ಕುಮಾರ ಮತ್ತು ಪರಿಶುದ್ಧಾತ್ಮರು ಸಭೆಯ ವಿಶ್ವಾಸ ಸೂತ್ರದಲ್ಲಿ ಹೇಳುವಂತೆ ವ್ಯಕ್ತಿತ್ವದಲ್ಲಿ ಒಂದಾಗಿದ್ದು ಸಮಾನವಾದ ಮಹಿಮೆ ಮತ್ತು ಅಧಿಕಾರಗಳನ್ನು ಹೊಂದಿದ್ದಾರೆ ಎಂದು ಹೇಳುತ್ತದೆ. ತಂದೆ, ಮಗ ಮತ್ತು ಪರಿಶುದ್ಧಾತ್ಮನ ರಕ್ಷಣಾ ಯೋಜನೆಯ ವಿವಿಧ ಹಂತಗಳಲ್ಲಿ ನಿರಪೇಕ್ಷವಾದ ಅನ್ಯೋನ್ಯತೆಯ ಬಗ್ಗೆ ತೋರಿಸುವಾಗ, ಖಂಡಿತವಾಗಿ ತಂದೆ ಹಾಗೂ ಮಗ ಒಂದೇ ವ್ಯಕ್ತಿ ಅಲ್ಲವೆಂದು, ಮಹಿಮೆ ಮತ್ತು ಶಕ್ತಿಯಲ್ಲಿ ತಂದೆಗೆ ಸರಿಸಮನಲ್ಲವೆಂದು ನಿರಾಕರಿಸಿದ್ದಾನೆ. ಈ ಮೊದಲು ತೋರಿಸಿದಂತೆ ತಂದೆಯು ಮಗನನ್ನು ಮಹಿಮೆ ಪಡಿಸಿದ್ದಾನೆ ಮತ್ತು ಆತನನ್ನು ಅತ್ಯುನ್ನತ ಸ್ಥಿತಿಗೆ ಏರಿಸಿದ್ದಾನೆ, ಮತ್ತು ಆತನಿಗೆ ತನ್ನ ಹೆಸರನ್ನು ಹೊರತುಪಡಿಸಿ ಎಲ್ಲಾ ಹೆಸರುಗಳಿಗಿಂತ ಉನ್ನತವನ್ನು ಹೆಸರನ್ನು ದಯಪಾಲಿಸಿದ್ದಾನೆ, ಪರಲೋಕ ಭೂಲೋಕಗಳಲ್ಲಿರುವ ತನ್ನ ಎಲ್ಲಾ ಅಧಿಕಾರಗಳನ್ನು ಕಾರ್ಯಗತಗೊಳಿಸುವಲ್ಲಿ ಆತನನ್ನು ತನ್ನ ಕಾರ್ಯಕರ್ತನನ್ನಾಗಿಯೂ ಪ್ರತಿನಿಧಿಯನ್ನಾಗಿಯೂ ನೇಮಿಸಿದ್ದಾನೆ. ವಿವಿಧ ಗ್ರಂಥಗಳು ತಂದೆಯಾದ ದೇವರು ತನ್ನ ಮಗನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು, ಮತ್ತು ಆ ಮಗನು ತನ್ನ ಮುಂದೆ ತಂದೆಯು ಇಟ್ಟಿರುವ ಸಂತೋಷದ ಸಲುವಾಗಿ ಕ್ರೂಜೆಯನ್ನು ಸಹಿಸಿಕೊಂಡನು ಅವಮಾನವನ್ನು ನಿರ್ಲಕ್ಷಿಸಿದನು; ಮತ್ತು ಆತನು ಪರಲೋಕದ ತಂದೆಯು ಪಡೆದ ಏಕೈಕ ಕುಮಾರನಾಗಿದ್ದಾನೆ ಮತ್ತು ತಂದೆಯು ತನಗೆ ನೇಮಿಸಿದ ಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸಿದ ಮೇಲೆ, ಆತನು ಈ ಲೋಕದ ತನ್ನ ರಾಜ್ಯವನ್ನು ಮಿಲಿಯಾಂತರ ಯುಗದ ಅಂತ್ಯಕಾಲದಲ್ಲಿ ತನ್ನ ತಂದೆಗೆ ಒಪ್ಪಿಸಿಕೊಡುವನು ಎಂಬ ಸತ್ಯವನ್ನು ಒಪ್ಪುತ್ತದೆ. ಮತ್ತು ನಮ್ಮ ಗಮನಕ್ಕೆ ಬಂದಿರುವ ಆತನ ಇನ್ನೂ ಅಧಿಕವಾದ ಹೇಳಿಕೆಗಳಾದ **"ಮಗನು ಸಂತೋಷವಾಗಿ ಹಾಗೂ ಪೂರ್ಣವಾಗಿ 'ನಾನು ತಂದೆಯಿಂದ ಬಂದವನು'** ಮತ್ತು **'ನನ್ನ ಇಚ್ಚೆಯ ಪ್ರಕಾರ ಮಾಡಲು ಬಂದಿಲ್ಲ, ತಂದೆಯ ಚಿತ್ತವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ'** ಎಂಬ ಮಾತುಗಳನ್ನೂ ಮತ್ತು ಆತನು ಉಪಯೋಗಿಸಿದ ಶಕ್ತಿಯು ಆತನ ಸ್ವಂತದ್ದಲ್ಲ, ಆದರೆ ಅದು ತಂದೆಯದು ಎಂಬುದನ್ನು ಅಂಗೀಕರಿಸುತ್ತದೆ ಮತ್ತು **'ತಂದೆಯು ನನಗಿಂತ ಹೆಚ್ಚಿನವನಾಗಿದ್ದಾನೆ'** ಎಂಬ ಪ್ರವಾದನಾ ಹೇಳಿಕೆಗಳನ್ನು ಮತ್ತು ಆತನು ಒಡಂಬಡಿಕೆಯ ದೂತನೂ, ಸೇವಕನೂ ಆಗಿದ್ದಾನೆ, ಆದರೆ ಆತನು ಅದರ ನಿರ್ಮಾಣಿಕನಲ್ಲ; "ಆತನು ನೂತನ ಒಡಂಬಡಿಕೆಯ ಮಧ್ಯಸ್ಥನಾಗಿದ್ದಾನೆ – ದೇವರು ಮತ್ತು ಮನುಷ್ಯರ ನಡುವೆ ಇರುವ ಏಕೈಕ ಮಧ್ಯಸ್ಥಗಾರ" ಎಂಬ ಹೊಸ ಒಡಂಬಡಿಕೆಯಲ್ಲಿ ಪುನರಾವರ್ತನೆಗೊಂಡ ಹೇಳಿಕೆಗಳು ಇವೆಲ್ಲವುಗಳನ್ನೂ ಒಪ್ಪಿಕೊಳ್ಳುತ್ತವೆ. ಈ ವಿವಿಧ ದೇವರ ವಾಕ್ಯಗಳು ನಮಗೆ ಏಕರೂಪವಾಗಿ ಮತ್ತು ಸಾಮರಸ್ಯಕ್ಕನುಗುಣವಾಗಿ ಪರಲೋಕದ ತಂದೆ, ಪರಲೋಕದ ಕುಮಾರ ಇವರುಗಳ ನಡುವಣ ವ್ಯಕ್ತಿತ್ವ, ಮಹಿಮೆ ಮತ್ತು ಅಧಿಕಾರಗಳಲ್ಲಿರುವ ಭಿನ್ನತೆಗಳನ್ನು ನಮಗೆ ಬೋಧಿಸುತ್ತವೆ. ಆದರೆ ಇದು ಅತ್ಯಂತ ನಿರಪೇಕ್ಷವಾದ ಮತ್ತು ಅಗಾಧವಾದ ಅನ್ಯೋನ್ನತಾ ಯೋಜನೆ, ಚಿತ್ತ ಮತ್ತು ಉದ್ದೇಶಗಳಾಗಿವೆ. ತಂದೆಯಾದ ಯೆಹೋವನ ಮಹಾ ಯೋಜನೆಯನ್ನು ಕಾರ್ಯಗತಗೊಳಿಸಲು ಅರ್ಹನಾಗಿದ್ದಾನೆ. ಯಾಕೆಂದರೆ ಆತನಿಗೆ ತನ್ನದೇ ಆದ ಯಾವುದೇ ಚಿತ್ತವಿಲ್ಲ. ಯಾಕೆಂದರೆ ತಾನು ತನ್ನ ತಂದೆಯ ಆತ್ಮನಿಂದ ತುಂಬಿಕೊಳ್ಳುವ ಸಲುವಾಗಿ ಆತನು ತನ್ನ ಚಿತ್ತವನ್ನು ವರ್ಜಿಸಿ ಬಿಟ್ಟಿದ್ದಾನೆ. ಮತ್ತು ಎಲ್ಲಾದುದರಲ್ಲಿಯೂ ತಂದೆಯ ಚಿತ್ತವನ್ನೇ ನೆರವೇರಿಸುವವನಾಗಿದ್ದಾನೆ – **"ನನ್ನ ಚಿತ್ತದಂತೆ ನಡೆಯುವುದಕ್ಕಾಗಿ ನಾನು ಬಂದಿಲ್ಲ. ನನ್ನನ್ನು ಕಳುಹಿಸಿದಾತನ ಚಿತ್ತವನ್ನೇ ನೆರವೇರಿಸುವುದಕ್ಕೆ ಪರಲೋಕದಿಂದ ಬಂದೆನು. ನನ್ನನ್ನು ಕಳುಹಿಸಿದಾತನ ಚಿತ್ತವು ಏನೆಂದರೆ ಆತನು ನನಗೆ ಕೊಟ್ಟವರಲ್ಲಿ ಒಬ್ಬನನ್ನೂ ನಾನು ಕೆಡಗೊಡಿಸದೆ ಅವನನ್ನು ಕಡೇ ದಿವಸದಲ್ಲಿ ಎಬ್ಬಿಸಬೇಕೆಂಬುದೇ"** – ಯೋಹಾನ 6: 38–39.

ಮೇಲಾಗಿ **'ತಂದೆ'** ಮತ್ತು **'ಮಗ'** ಎಂಬ ಪದಗಳಲ್ಲಿ ವ್ಯತ್ಯಾಸಗಳ ಅರ್ಥ ಸೂಚಿತವಾಗುತ್ತದೆ ಮತ್ತು 'ತ್ರೈಯೇಕತ್ವದ' 'ವ್ಯಕ್ತಿಗಳ ಏಕತೆ' ಎಂಬ ಆಲೋಚನೆಗಳನ್ನು ವಿರೋಧಿಸುತ್ತದೆ. ಯಾಕೆಂದರೆ 'ತಂದೆ'

ಎಂಬ ಪದವು ಜೀವದಾಯಕನನ್ನು ಮತ್ತು 'ಮಗ' ಎಂಬ ಪದವು 'ಬೇರೆಯವನಿಂದ ಜೀವ ಹೊಂದಿಕೊಂಡವನು'ಎಂಬ ಅರ್ಥಗಳನ್ನು ಸೂಚಿಸುತ್ತವೆ. ಪರಲೋಕದ ತಂದೆಯು ಯಾರಿಂದಲೂ ಜೀವ ಪಡೆದುಕೊಳ್ಳಲಿಲ್ಲ; ಮತ್ತು ತಾನು ಪಡಕೊಂಡ ಏಕೈಕ ಕುಮಾರನೂ ನಮ್ಮ ಕರ್ತನೂ ಆದ ಯೇಸುವಿಗೆ ಮಾತ್ರವಲ್ಲ ಆತನ ಮೂಲಕವಾಗಿ ತನ್ನ ಸಮಸ್ತ ಸೃಷ್ಟಿಗೆ ಆತನು ಜೀವದ ಬುಗ್ಗೆಯೂ ಮೂಲವೂ ಆಗಿದ್ದಾನೆ. ಇವೆಲ್ಲವೂ ಪರಿಶುದ್ಧ ಗ್ರಂಥಗಳ ಪ್ರಕಾರವೇ ಆಗಿದ್ದು ಈ ಅಧ್ಯಾಯದ ಶಿರೋನಾಮೆಯಾಗಿದೆ. ಇದರಲ್ಲಿ ಅಪೋಸ್ತಲನು ತಂದೆ ಮತ್ತು ಮಗನು ವ್ಯಕ್ತಿತ್ವದಲ್ಲಿ ಮತ್ತು ಅಧಿಕಾರದಲ್ಲಿ ಒಂದೇ ಆಗಿದ್ದಾರೆ ಎಂಬುದನ್ನು ಅಲ್ಲಗಳೆಯುತ್ತಾ – **"ನಮಗೆ ಸಮಸ್ತವನ್ನೂ ಉಂಟುಮಾಡಿದ ಒಬ್ಬನೇ ದೇವರಾದ ತಂದೆಯೂ, ಅತನ ಮೂಲಕ ಸಮಸ್ತವೂ ಇರುವ ಒಬ್ಬನೇ ಕರ್ತನಾದ ಯೇಸುವೂ ಇದ್ದಾರೆ"** ಎಂದು ಹೇಳುತ್ತಾನೆ.

ಆಲೋಚನಾಶೀಲನಾದ ಓದುಗನು ದೇವರ ವಾಕ್ಯದಲ್ಲಿರುವ ಸಾಮರಸ್ಯತೆಯನ್ನು ಮತ್ತು ಇಲ್ಲಿ ನೀಡಿರುವುದರ ನಿರಾಡಂಬರತೆಯನ್ನು ಗ್ರಹಿಸುತ್ತಾನೆ ಹಾಗೂ ಎಲ್ಲರೂ ತ್ರೈಯೇಕತ್ವ ಸಿದ್ಧಾಂತದ ವಿವೇಚನಾಶೀಲ ತಿಳುವಳಿಕೆ ಅಥವಾ ವಿವರಣೆಯು ಅಸಾಧ್ಯವೆಂದು ಒಪ್ಪಿಕೊಳ್ಳುವರು. ಹಾಗೂ ಎಲ್ಲರಿಗೂ ತ್ರೈಯೇಕತ್ವ ಇದರ ಅತ್ಯಂತ ನಿಷ್ಠಾವಂತ ಪ್ರತಿಪಾದಕರು ಇದನ್ನು ಒಪ್ಪಿಕೊಳ್ಳುತ್ತಾರೆ ಮತ್ತು ಇದನ್ನು ವಿವರಿಸುವ ಅಸಾಧ್ಯ ಕಾರ್ಯಕ್ಕಾಗಿ ಹೆಣಗಾಡದೆ, ಅವರು ಚರ್ಚೆಯಿಂದ ತಪ್ಪಿಸಿಕೊಳ್ಳುತ್ತಾರೆ ಮತ್ತು ಇದೊಂದು ವಿವರಿಸಲಾಗದ **"**ಮಹಾರಹಸ್ಯ**"** ಎನ್ನುತ್ತಾರೆ. ಆದರೆ, ಹೇಳಲು ಆಶ್ಚರ್ಯಕರ ಸಂಗತಿ ಏನೆಂದರೆ, 'ಒಂದೇ ದೇವರಲ್ಲಿ ಮೂರು ದೇವರುಗಳು' ಎಂಬುದಕ್ಕೆ ಯಾವುದೇ ದೇವರ ವಾಕ್ಯದ ಆಧಾರವಿಲ್ಲ ಮತ್ತು ಆದಿಕಾಂಡದಿಂದ ಪ್ರಕಟನೆಯ ಗ್ರಂಥದವರೆಗೆ ಇದಕ್ಕೆ ಪರೋಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ವಿರೋಧಗಳು ಕಂಡು ಬರುತ್ತವೆ. ಇದು ವಿವೇಚನಾರಹಿತವಾದುದು, ಪರಂತು ಕ್ರೈಸ್ತರಲ್ಲಿ, ಸತ್ಯವೇದದಲ್ಲಿ ತಮ್ಮ ವಿಶ್ವಾಸವನ್ನು ಪ್ರಕಟಿಸುವ, ಹಾಗು ಸತ್ಯವೇದದಲ್ಲಿ ಇಲ್ಲದ್ದನ್ನು ಬೋಧಿಸುವವರನ್ನು ವಿರೋಧಿಸುವ ಪ್ರಾಟೆಸ್ಟಂಟ್ ಕ್ರೈಸ್ತರಲ್ಲಿಯೂ ಸಹಾ ಇದು ಸುತ್ತಲೂ ಪ್ರಬಲವಾಗಿ ಕಂದಕ ತೋಡಿಕೊಂಡಿರುವ ಸಿದ್ಧಾಂತವಾಗಿ ಬಿಟ್ಟಿದೆ. ಇದು ಹೀಗೇಕೆ? ಇದಕ್ಕೆ ನಾವು ಉತ್ತರಿಸುವುದೇನೆಂದರೆ ಇದು ಸೈತಾನನ ಒಂದು ಕರಾಳ ರಹಸ್ಯವಾಗಿದ್ದು, ಆತನು ಪೋಪರ ಮೂಲಕ, ವಾಕ್ಯವನ್ನು, ದೇವರ ಗುಣಲಕ್ಷಣಗಳನ್ನು ಮತ್ತು ಯೋಜನೆಗಳನ್ನು ಮೋಡದಂತೆ ಕವಿದಿದ್ದಾನೆ. ಬರೆದಿರುವಂತೆ – **"ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು"** (2 ಕೊರಿ. 4:4). ಆತನು ಬಡ ಲೋಕದ ಮೇಲೆ ಅಂಧತ್ವ ಮತ್ತು ಸಿದ್ಧಾಂತಗಳ ಪರದೆಯನ್ನು ಹಾಕಿದ್ದು, ಅವರು ಕರ್ತನನ್ನು ಕಂಡುಕೊಳ್ಳದಂತೆ ಆತನ ಬಗ್ಗೆ ಸ್ಪಷ್ಟವಾದ ಮತ್ತು ಸತ್ಯವಾದ ಜ್ಞಾನವನ್ನು ಹೊಂದುಕೊಳ್ಳದಂತೆ ಕತ್ತಲೆಯ ಸಮಾಲೋಚನೆಗಳನ್ನೂ, ತಪ್ಪನ್ನುಂಟುಮಾಡುವ ರಹಸ್ಯಗಳನ್ನು ಬರಮಾಡಿದ್ದಾನೆ.

ಆದರೆ, ನಮ್ಮ ಕರ್ತನಾದ ಯೇಸುವಿಗೆ ಮಹಿಮೆಯ ತೇಜಸ್ಸನ್ನುಂಟುಮಾಡುವಲ್ಲಿ ಸೈತಾನನು ಹೇಗೆ ಆಸಕ್ತನಾಗಿದ್ದಾನೆ? ಬದಲಾಗಿ ಕ್ರಿಸ್ತನನ್ನು ಮಹಿಮೆಯಿಂದ ಬೇರೆಡೆಗೆ'ಸೆಳೆಯುವುದು ಆತನ ಕಾರ್ಯವಲ್ಲವೇ? ನಾವು ಇದಕ್ಕೆ ಉತ್ತರಿಸಿ ಹೇಳುವುದೇನೆಂದರೆ, ಸತ್ಯವನ್ನು ತಪ್ಪಾಗಿ ನಿರೂಪಿಸುವುದು, ಸತ್ಯವೇದವನ್ನು ತಪ್ಪಾಗಿ ವಿವರಿಸುವುದು ಮತ್ತು ಅದರ ಬೋಧನೆಗಳನ್ನು ಅನುಚಿತವನ್ನಾಗಿ, ಪರಸ್ಪರ ವಿರೋಧಾತ್ಮಕವನ್ನಾಗಿ ಮಾಡುವುದೇ ಸೈತಾನನ ನಿತ್ಯವಾದ ವಿಚಾರಸರಣಿಯಾಗಿದೆ. ಈ ರೀತಿಯಲ್ಲಿ ಆತನು ದೇವರ ಯೋಜನೆಯಲ್ಲಿ ಮತ್ತು ವಾಕ್ಯಗಳಲ್ಲಿರುವ ಮಹಾ ಸೌಂದರ್ಯವನ್ನೂ ಮತ್ತು ಪರಿಜ್ಞಾನವನ್ನೂ ಮತ್ತು ಸಾಮರಸ್ಯವನ್ನೂ ಜನರು ನೋಡದಂತೆ ಮರೆಮಾಚುತ್ತಾನೆ. ಸೈತಾನನು ಉಂಟುಮಾಡುವ ಹೆಚ್ಚಿನ ಅಸಂಬದ್ಧತೆಗಳು ಸೃಷ್ಟಿಕರ್ತನ ಕಡೆಗಿರುವ ಮಾನವರ ದೃಷ್ಟಿಕೋನದಲ್ಲಿ ಹಣೆದುಕೊಳ್ಳುವಾಗ ಸೈತಾನನು ಉತ್ತಮವಾಗಿ ವಿವೇಚನಾಶೀಲರನ್ನೂ ಮತ್ತು ತಾರ್ಕಿಕ ಬುದ್ಧಿಯುಳ್ಳವರನ್ನೂ ದೇವರ ಸೇವೆಯಿಂದ ಬೇರೆಮಾಡುವಲ್ಲಿ ಜಯಹೊಂದುತ್ತಾನೆ; ಇದಕ್ಕೆ ಅನುಪಾತವಾಗಿ ಮಾನವರ ವಿಶ್ವಾಸಸೂತ್ರಗಳನ್ನು ಹೆಚ್ಚು ವಿವೇಚನಾರಹಿತವಾಗಿ ಮಾಡುವುದರಲ್ಲಿಯೂ ಜಯಶೀಲನಾಗುತ್ತಾನೆ. ಆತನು ಮಾನವರ ನಿಜವಾದ ವಿಶ್ವಾಸವನ್ನು ಎಷ್ಟರ ಮಟ್ಟಿಗೆ ಹಾಳುಮಾಡುತ್ತಾನೋ ಅಷ್ಟರ ಮಟ್ಟಿಗೆ ಅವರ ನೈಜವಾದ ನಂಬಿಕೆಯ ಬದಲಾಗಿ ಅಂಧಶ್ರದ್ಧೆಯ ಬಗ್ಗೆ ಅವರಲ್ಲಿ ಒಲವನ್ನುಂಟುಮಾಡುತ್ತಾನೆ.

ಈ ರೀತಿಯಲ್ಲಿ, ಶತಮಾನಗಳ ಕಾಲದಿಂದಲೂ ಸೈತಾನನೆಂಬ ಈ ಮಹಾ ವಿರೋಧಿಯು ಸಭೆಗೆ ದಯಪಾಲಿಸಿರುವ ಎಲ್ಲಾ ವಿವೇಚನೆಯುಳ್ಳ ಸಂಗತಿಗಳನ್ನು ತೊಲಗಿಸಿ ಅದರೊಳಗೆ ಹೆಚ್ಚು ಸುಲಭವಾಗಿ ಮೋಸಹೋಗುವ, ಮೂಢನಂಬಿಕೆಗಳಿಗೆ ಕಾರಣವಾಗುವ ಅವಿವೇಚನಾ ಸಂಗತಿಗಳನ್ನು ತುಂಬುತ್ತಾ ಬಂದಿದ್ದಾನೆ. ಆತನು ಕೆಲವೊಂದು ಅಮೂಲ್ಯವಾದ ಸತ್ಯಗಳನ್ನು ತೋರಿಕೆ ಮತ್ತು ಅಸಹ್ಯಕಾರಕ ಸಂಗತಿಗಳಿಂದ ಮುಚ್ಚಿ ಬಿಟ್ಟಿದ್ದಾನೆ ಮತ್ತು ದೇವ ಜನರ ಪ್ರಗತಿಯನ್ನು ಈ ಸಂಬಂಧವಾಗಿ ಕುಂಠಿತವನ್ನಾಗಿ ಮಾಡಿದ್ದಾನೆ. ಆದರೆ, ದೇವರಿಗೆ

ಸ್ತೋತ್ರವಾಗಲಿ! ನಾವೀಗ ಅಜ್ಞಾನದ ಪರದೆಯು ವಿಸರ್ಜಿಸಿ ಹೋಗುವ ಸಮಯದಲ್ಲಿ ಜೀವಿಸುತ್ತಿದ್ದೇವೆ. ಹಿಂದೆ ದೇವಜನರು ಅಂಧಕಾರದ ಯುಗದಲ್ಲಿ ಅವರನ್ನು ಅಡಿಯಾಳುಗಳನ್ನಾಗಿ ಮಾಡುವಂತೆ ಸೃಷ್ಟಿಸಲ್ಪಟ್ಟ ಆ ಸಂಗತಿಗಳಿಂದ ಹೊರಬಂದು ದೇವರ ವಾಕ್ಯವನ್ನೇ ನೇರವಾಗಿ ನೋಡುವ ಕಾಲದಲ್ಲಿ ಈಗ ಜೀವಿಸುತ್ತಿದ್ದೇವೆ. ಅಯ್ಯೋ! ಇದು ಕೆಲವರಿಗೆ, ವಿಶೇಷವಾಗಿ ಈ ಲೋಕದ ಬುದ್ಧಿವಂತರಿಗೆ ಬಹಳ ತಡವಾಗಿ ಬರುತ್ತದೆ. ಅವರು ಈಗಾಗಲೇ ತಮ್ಮ ವಿಶ್ವಾಸಸೂತ್ರವನ್ನು ಸತ್ಯವೇದದೊಂದಿಗೆ ಹೊಂದಿಸಿ ಕೊಂಡಿದ್ದಾರೆ. ಮೊದಲನೆಯದನ್ನು ತಿರಸ್ಕರಿಸುವಲ್ಲಿ ಅವರು ಎರಡನೆಯದನ್ನು ಸಹಾ ತಿರಸ್ಕರಿಸುವವರಾಗಿದ್ದಾರೆ; ದೇವರ ವಾಕ್ಯದಿಂದ ನಿಜವಾದ ಬೆಳಕನ್ನು ಹುಡುಕುವ ಬದಲಾಗಿ ಅವರು ಅದನ್ನು ನಿರ್ಲಕ್ಷಿಸುವಲ್ಲಿ ಅಥವಾ ತಿರಸ್ಕರಿಸುವುದರಲ್ಲಿ ಒಲವು ತೋರಿಸುತ್ತಿದ್ದಾರೆ ಮತ್ತು ತಮ್ಮ ಸ್ವಂತ ತಿಳುವಳಿಕೆಗಳಿಗೆ ಅಂದರೆ ಮಾನವ ತತ್ವಜ್ಞಾನಕ್ಕೆ ಅಂಟಿಕೊಳ್ಳುತ್ತಿದ್ದಾರೆ.

ಆದುದರಿಂದ ಮೇಲ್ಮಟ್ಟದ ವಿಮರ್ಶೆಗಳು, ವಿಕಾಸ, ಕ್ರೈಸ್ತ ವಿಜ್ಞಾನ, ದೈವಜ್ಞಾನ ವಿದ್ಯೆ ಮತ್ತು ಸತ್ಯವೇದವನ್ನು ಅಲ್ಲಗಳೆಯುವ ಇತರ ವಿಚಾರಸರಣಿಗಳು ಇಂದಿನ ದಿನಗಳಲ್ಲಿ ನಾಗಾಲೋಟದಲ್ಲಿ ಪ್ರಗತಿಹೊಂದಿಕೊಳ್ಳುತ್ತಿವೆ. ಆದರೆ ಹಳೆಯ ಮತಾಭಿಪ್ರಾಯಗಳು ನುಚ್ಚು ನೂರಾಗುತ್ತಿವೆ ಅಥವಾ ತೊರೆಯಲ್ಪಡುತ್ತಿವೆ. ತುಲನಾತ್ಮಕವಾಗಿ ಕೆಲವರು ಮಾತ್ರವೇ ತಪ್ಪುಗಳು ಸತ್ಯವೇದದಲ್ಲಿ ಇಲ್ಲ, ಅದು ನಮ್ಮ ಮತಾಭಿಪ್ರಾಯ ಇಲ್ಲವೇ ವಿಶ್ವಾಸಸೂತ್ರಗಳಲ್ಲಿವೆ ಎಂದು ತಿಳುಕೊಂಡಿದ್ದಾರೆ ಮತ್ತು ಭಕ್ತಜನರಿಗೆ ಪ್ರಕಟವಾಗಿದ್ದ ಹಳೆಯ ಪಥಗಳನ್ನು ಹುಡುಕುತ್ತಿದ್ದಾರೆ – **"ದಾರಿಗಳು ಕೂಡುವ ಸ್ಥಳದಲ್ಲಿ ನಿಂತುಕೊಂಡು ನೋಡಿ ಪುರಾತನ ಮಾರ್ಗಗಳು ಯಾವುವು? ಆ ಸನ್ಮಾರ್ಗವು ಎಲ್ಲಿ ಎಂದು ವಿಚಾರಿಸಿ ಅದರಲ್ಲೇ ನಡೆಯಿರಿ"** (ಯೆರಮೀಯ 6:16: ಯೂದ 3 ಸಹಾ ನೋಡಿರಿ).

ಆದರೆ 'ತ್ರೈಯೇಕತ್ವ' ಸಿದ್ಧಾಂತವು ಪ್ರಾಚೀನ ಸಭೆಗಳಲ್ಲಿ ಬೋಧಿಸಿಲ್ಲವಾದಲ್ಲಿ ಅದು ಕ್ರೈಸ್ತರಲ್ಲಿ ಇಷ್ಟರ ಮಟ್ಟಿಗೆ ವ್ಯಾಪಕವಾದುದಾದರೂ ಹೇಗೆ? ಇದು ಮೂರನೆಯ ಶತಮಾನಕ್ಕೂ ಹಿಂದೆ ಇದ್ದ ಸಭೆಯ ಪುರಾತನ ಸಿದ್ಧಾಂತಗಳಲ್ಲಿ ಒಂದಲ್ಲವೇ? ಹೌದೆಂದು ನಾವು ಉತ್ತರಿಸುತ್ತೇವೆ. ತ್ರೈಯೇಕತ್ವ ಸಿದ್ಧಾಂತವು ಎರಡನೆಯ ಮತ್ತು ಮೂರನೆಯ ಶತಮಾನದಲ್ಲಿಯೇ ಚಿಕ್ಕದಾಗಿ ಪ್ರಾರಂಭಗೊಂಡು ಏರುತ್ತಾ ಬಂತು. ಪರಿಶುದ್ಧಗ್ರಂಥವನ್ನು ಪೂರ್ವಾಗ್ರಹವಿಲ್ಲದೆ ಯಾರಾದರೂ ಹುಡುಕುವುದಾದರೆ, ತ್ರೈಯೇಕತ್ವ ಸಿದ್ಧಾಂತವು ಮೊದಲನೆಯ ಶತಮಾನದಲ್ಲಿ ಇದ್ದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇವುಗಳು ಅಪೋಸ್ತಲರ ಬರಹಗಳಲ್ಲಿ ಸ್ಪಷ್ಟವಾಗಿ ತೋರಿಬರುತ್ತದೆ. ತ್ರೈಯೇಕತ್ವ ಸಿದ್ಧಾಂತವು ಸ್ವಾಭಾವಿಕ ರೀತಿಯಲ್ಲಿ ಹುಟ್ಟಿಕೊಂಡಿತು – ಮೊದಲಿಗೆ ಹೊರಾಟ ಸ್ವಭಾವದಲ್ಲಿ.

ಮೊದಲನೆಯ ಶತಮಾನದಲ್ಲಿ ಅಪೋಸ್ತಲರುಗಳು ತಮ್ಮ ಬೋಧನೆಗಳಲ್ಲಿ ಖಡಾಖಂಡಿತವಾಗಿ ಎಲ್ಲಿಯೂ ಆತನೇ ತಂದೆಯಾದ ದೇವರು, ಆತನೇ ಯೆಹೋವನು ಎಂದು ಹೇಳದೆ, ಆತನು ಯೆಹೋವನ ಮಗನು, ಈ ಲೋಕವನ್ನು ಆಶೀರ್ವದಿಸುವ ಮತ್ತು ದೇವರ ರಾಜ್ಯವನ್ನು ಇಲ್ಲಿ ಸ್ಥಾಪಿಸುವ ಸಲುವಾಗಿ ಸಲುವಾಗಿ ಕಳುಹಿಸಲ್ಪಟ್ಟ ಮೆಸ್ಸೀಯನು, ಅಂತಿಮವಾಗಿ ಆತನು ಅವ್ಯವಸ್ಥವಾದ ಪಾಪಮಯ ಸ್ಥಿತಿಯನ್ನು ಕ್ರಮಗೊಳಿಸಲಿರುವನು ಎಂದಷ್ಟೇ ಹೇಳಿದ್ದಾರೆ. ಆತನು ದೇವರ ಕುಮಾರನು ಎಂಬ ಹೇಳಿಕೆಗೆ ಅನೇಕ ಪ್ರತಿಹೇಳಿಕೆಗಳು ಎದ್ದವು. ಕೆಲವರು ಯೇಸುವು ಒಬ್ಬ ಮೋಸಗಾರ, ವಂಚಕ ಎಂದು ಹೇಳತೊಡಗಿದರು; ಕೆಲವರು ಆತನು ಕೇವಲ ಒಬ್ಬ ಒಳ್ಳೆಯ ಮನುಷ್ಯನೆಂದೂ, ಮತ್ತೆ ಕೆಲವರು ಆತನು ಅದ್ಭುತ ರೀತಿಯಲ್ಲಿ ಜನಿಸಲ್ಪಟ್ಟವನು ಆದರೆ ಎಂದೂ ಆತನು ಪೂರ್ವ ಅಸ್ಥಿತ್ವ ಹೊಂದಿರಲಿಲ್ಲ ಎಂದು ಹೇಳಿದರು. ಕೆಲವರು ಮಾತ್ರವೇ ನಿಜವನ್ನು ಕಂಡುಕೊಂಡರು. ಅದೇನೆಂದರೆ, ಆತನು ದೇವರ ಮಗನಾಗಿ ಆತ್ಮೀಕ ನೆಲೆಯಲ್ಲಿ ಪೂರ್ವ ಅಸ್ಥಿತ್ವ ಹೊಂದಿದ್ದು, ಮಾನವ ನೆಲೆಯಲ್ಲಿ ದೇವ ಕುಮಾರನಾಗಿ ಮಾನವರ ವಿಮೋಚನಾರ್ಥವಾಗಿ ಜನಿಸಿ ಬಂದನು. ಈಗ ಆತನು ಅತ್ಯುನ್ನತ ಸ್ಥಿತಿಗೆ ಏರಿಸಲ್ಪಟ್ಟಿದ್ದಾನೆ. ಆದುದರಿಂದ ಎಲ್ಲರೂ ತಂದೆಗೆ ಮಾನ ಕೊಡುವ ಪ್ರಕಾರ ಮಗನಿಗೂ ಮಾನ ಕೊಡಬೇಕೆಂಬ ಆಜ್ಞೆಯನ್ನು ಎಲ್ಲರಿಗೂ ನೀಡಲಾಗಿದೆ. ಆದರೆ, ಎಲ್ಲರಿಗೂ ತಿಳಿದಿರುವಂತೆ ಹೋರಾಟದ ಪ್ರವೃತ್ತಿಯು ಹೇಳಿಕೆಗಳನ್ನು ಅತಿರೇಖಕ್ಕೆ ಕೊಂಡೊಯ್ಯುತ್ತದೆ. ಆದುದರಿಂದ ನಮ್ಮ ಕರ್ತನ ಬಗ್ಗೆ ಇದ್ದ ಅನೇಕ ವಿಧವಾದ ಹೇಳಿಕೆಗಳನ್ನು ಅಲ್ಲಗಳೆಯುವ ಸಲುವಾಗಿ ಕೆಲವರು ಆತನೇ ತಂದೆ ದೇವರು, ಯೆಹೋವನು ಎಂಬ ಮತ್ತೊಂದು ಅತಿರೇಖದ ಹೇಳಿಕೆಯನ್ನು ಹುಟ್ಟುಹಾಕಿದರು.

Rev. Dr. Lyman Abbott ಎಂಬ ಪ್ರಸಿದ್ಧ ತ್ರೈಯೇಕತ್ವ ವಾದಿಯು ತನ್ನ ಧಾರ್ಮಿಕ ನಿಘಂಟಿನ 944ನೇ ಪುಟದಲ್ಲಿ ಹೇಳುವುದೇನೆಂದರೆ :–

**"ನಾಲ್ಕನೆಯ ಶತಮಾನದ ಪ್ರಾರಂಭದವರೆಗೆ ತ್ರೈಯೇಕತ್ವ ದೃಷ್ಟಿಕೋನವು ಇಷ್ಟರಮಟ್ಟಿಗೆ ವಿಸ್ತಾರಗೊಂಡು ಒಂದು ಸಿದ್ಧಾಂತ ರೂಪಕ್ಕೆ ಬಂದಿರಲಿಲ್ಲ ಮತ್ತು ಅದನ್ನು ಸಭೆಯ 'ಒಬ್ಬನೇ ದೇವರೆಂಬ' ವಿಶ್ವಾಸದೊಂದಿಗೆ ರಾಜಿಪಡಿಸುವ ಹೆಣಗಾಟ ಪ್ರಾರಂಭಗೊಂಡಿರಲಿಲ್ಲ. . . . ಈ ಸಮಸ್ಯೆಯನ್ನು ಬಗೆ ಹರಿಸುವ ಪ್ರಯತ್ನದಲ್ಲಿ ಈ ಸಿದ್ಧಾಂತವು ಹೊರಹೊಮ್ಮಿತು . . . ತ್ರೈಯೇಕತ್ವವು ಹಿಂದೂ ಧರ್ಮದ ಗುರುತರವಾದ ಲಕ್ಷಣವಾಗಿದ್ದು ಅದು ಪರ್ಶಿಯನ್,**

ಈಜಿಪ್ಷಿಯನ್, ರೋಮನ್, ಜಪಾನೀಸ್, ಭಾರತೀಯ ಮತ್ತು ಬಹು ಪುರಾತನ ಗ್ರೀಸ್ ಪುರಾಣಗಳಲ್ಲಿ ಇದನ್ನು ಗ್ರಹಿಸಬಹುದಾಗಿದೆ"

ಹಿಂದಿನ ಕಾಲದಲ್ಲಿ ಒಂದಕ್ಕಿಂತ ಹೆಚ್ಚಿನ ದೇವತೆಗಳಿದ್ದಾರೆ ಎಂಬುದು ಇಸ್ರಾಯೇಲಿನ ಹೊರತಾಗಿ ಎಲ್ಲೆಡೆ ಬಹುಸಾಮಾನ್ಯ ಸಂಗತಿಯಾಗಿತ್ತು. ಎಲ್ಲರಿಗೂ ತಿಳಿದಿರುವಂತೆ ಗ್ರೀಸಿನ ಪುರಾಣದ ತುಂಬೆಲ್ಲಾ ದೇವತೆಗಳು ಇದ್ದಾರೆ; ಅವರುಗಳಲ್ಲಿ ಹೆಚ್ಚಿನವುಗಳಿಗೆ ಕ್ರಿಯಾತ್ಮಕವಾದ ಒಂದೇ ಶಕ್ತಿಯಿರುತ್ತದೆ. ಅಂಥವರಿಗೆ ಒಬ್ಬನೇ ದೇವರಿದ್ದಾನೆ ಎಂಬ ಯೆಹೂದಿ ವಿಚಾರವು ಹಾಸ್ಯಾಸ್ಪದವಾಗಿ ತೋರಿಬಂತು ಮತ್ತು ಇದು ದೇವರುಗಳ ಅಭಾವದ ಅರ್ಥ ಸೂಚಿಸುವುದಾಗಿತ್ತು. ಅದುದರಿಂದ ತ್ರೈಯೇಕತ್ವ ದೃಷ್ಟಿಕೋನವು ಅನ್ಯಮತಗಳಿಂದ ಬಂದವರಿಗೆ ಒಪ್ಪಲರ್ಹವಾಗಿತ್ತು. ಇದು ಬಹುದೇವತೆಗಳಿದ್ದಾರೆ ಎಂಬ ಲೋಕದ ಸಾಮಾನ್ಯ ದೃಷ್ಟಿಕೋನಕ್ಕೂ ಮತ್ತು ಒಬ್ಬನೇ ದೇವರಿದ್ದಾನೆ ಎಂಬ ಇಸ್ರಾಯೇಲ್ಯರ ಏಕದೇವತಾ ವಾದಕ್ಕೂ ನಡೆದ ಒಂದು ರೀತಿಯ ಸಂಧಾನವಾಗಿತ್ತು. ಮೂರು ದೇವರುಗಳಿದ್ದಾರೆ, ಆದರೆ ಈ ಮೂರು ದೇವರುಗಳೂ ಒಬ್ಬರೇ ಆಗಿದ್ದಾರೆ ಎಂಬ ಹೇಳಿಕೆಯು ನಿಸ್ಸಂದೇಹವಾಗಿ ದೈವಜ್ಞಾನಶಾಸ್ತ್ರದಲ್ಲಿ ಒಂದು ಚತುರ ಪ್ರಯತ್ನವಾಗಿ ಪರಿಗಣಿಸಲ್ಪಟ್ಟಿತು. ಇದರಿಂದ ಯೆಹೂದ್ಯರಿಂದ ಮತಾಂತರ ಹೊಂದಿದವರ ಹೆಚ್ಚು ವಿಸ್ವಾಸಿಗಳ ದೃಷ್ಟಿಕೋನವನ್ನು ಅನ್ಯಜನರ ಸಾಮಾನ್ಯ ಮನೋಭಾವನೆಗಳ ಸಮೀಪಕ್ಕೆ ತರುವುದು ಸಾಧ್ಯವಾಯಿತು. ಈ ಮೂಲಕ ಅವರನ್ನು ಸಂತೋಷಗೊಳಿಸಿ ಸಭೆಗೆ ತರಬಹುದೆಂದು ಅಪೇಕ್ಷಿಸಲಾಯಿತು. ಅದೇ ರೀತಿಯಲ್ಲಿ Mariolatry – ಅನೇಕ ಅನ್ಯಮತಗಳವರಲ್ಲಿ ಮಿಲಿಯಾಂತರ ಆರಾಧಕರುಗಳನ್ನು ಹೊಂದಿದ್ದ ವಿವಿಧ ದೇವಿಯರಾದ ಐಸಿಸ್, ಡಯಾನರ ಆರಾಧನಾ ಪದ್ಧತಿಯವರನ್ನು ತೃಪ್ತಿಗೊಳಿಸುವ ಸಲುವಾಗಿ 'ಕನ್ಯಾ ಮರಿಯಳ ಆರಾಧನೆ'ಯನ್ನು ಪರಿಚಯಿಸಲಾಯಿತು. ಈ ಸಿದ್ಧಾಂತವನ್ನು ಪರಿಚಯಿಸುವ ಸಮಯದಲ್ಲಿ ಸಭಾ ನಾಯಕರುಗಳು ತನ್ನ ರಾಜ್ಯಸ್ಥಾಪನೆಗಾಗಿ ಕ್ರಿಸ್ತನ ಎರಡನೆಯ ಬರೋಣದ ನಿರೀಕ್ಷೆಯನ್ನು ತ್ಯಜಿಸಿದ್ದಿದರು ಮತ್ತು ತಮ್ಮದೇ ಆದ ನೂತನ ನಿರೀಕ್ಷೆಯೊಂದನ್ನು ಹೊಂದಿಕೊಂಡಿದ್ದರು ಎಂಬುದನ್ನು ನೆನಪುಮಾಡಿ ಕೊಳ್ಳಬೇಕಾಗುತ್ತದೆ. ಈ ನಿರೀಕ್ಷೆಯೆಂದರೆ, ಇಡೀ ಲೋಕವನ್ನು ಪರಿವರ್ತಿಸುವುದು ಮತ್ತು ಭೂಲೋಕದ ಒಂದು ಕ್ರಮಾಗತ ಪಾದ್ರಿ ಪ್ರಭುತ್ವ ಅಥವಾ ದೇವರ ಪ್ರತಿನಿಧಿಯಾಗಿ ಕ್ರಿಸ್ತನ ಬದಲಾಗಿ ದೇವರ ಪ್ರತಿಹಸ್ತಕನಾಗಿ* ಪೋಪ್ ಆಡಳಿತಮಾಡುವ ದೇವರ ರಾಜ್ಯ.

ತ್ರೈಯೇಕತ್ವದ ಸಾಮಾನ್ಯ ಅಂಗೀಕಾರವು ಮತ್ತು ಅದಕ್ಕೆ ಬಲವಾಗಿ ಅಂಟಿಕೊಂಡಿರುವಿಕೆಯು ಮೊದಲಿಗೆ ರೋಮನ್ ನಂತರ ಪ್ರೊಟೆಸ್ಟಂಟ್ ಪಾದ್ರಿಗಳು ಈ ಬಗ್ಗೆ ಯಾರು ಇದನ್ನು ಅಲ್ಲಗಳೆಯುತ್ತಾರೋ ಅವರು ನೇರವಾದ ಚಿತ್ರಹಿಂಸೆಗಳಿಗೆ ತುತ್ತಾಗುತ್ತಾರೆ ಇತ್ಯಾದಿಯಾದ ಅರ್ಥದಲ್ಲಿ ಮನನಾಟುವಂತೆ ಹೇಳಿರುವ ಮೂಢನಂಬಿಕೆಗಳ ಮೇಲೆ ಆಧಾರಗೊಂಡಿದೆ. ಅದೇ ಸಮಯದಲ್ಲಿ ಈ ಸಿದ್ಧಾಂತವು ಸ್ಪಷ್ಟವಾಗಿ ಗ್ರಹಿಸಲಾರದ್ದಾಗಿದೆ ಆದುದರಿಂದ ಯಾರೂ ಇದನ್ನು ನಿಜವಾಗಿಯೂ ನಂಬಲಾರರು ಎಂಬುದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಯಾಕೆಂದರೆ ನಿಜವಾದ ಅರ್ಥದಲ್ಲಿ ಗ್ರಹಿಸಲಾಗದ ಸಂಗತಿಗಳನ್ನು ಯಾರೂ ನಂಬುವುದಿಲ್ಲ. ಮತ್ತು ವಿವಿಧ ಸಿದ್ಧಾಂತಗಳು ಮತ್ತು ಅಭ್ಯಾಸಗಳು ಅವುಗಳು ಪ್ರೊಟೆಸ್ಟಂಟ್ ಮಾತ್ರವಲ್ಲ, ಕೆಥೋಲಿಕರದಾಗಿರಲಿ ಅವುಗಳು ತ್ರೈಯೇಕತ್ವ ಸಿದ್ಧಾಂತವನ್ನು ಅಲ್ಲಗಳೆಯುತ್ತವೆ; ಉದಾಹರಣೆಗಾಗಿ ಗಮನಿಸುವುದಾದರೆ, ಎಲ್ಲಾ ಪ್ರೊಟೆಸ್ಟಂಟ್‌ರು ತಂದೆ ದೇವರಿಗೆ **'ಯೇಸುಕ್ರಿಸ್ತನ ಹೆಸರಿನಲ್ಲಿ',** ಅಥವಾ **'ಯೇಸುವಿಗಾಗಿ'** ಮುಂತಾಗಿ ಪ್ರಾರ್ಥಿಸುತ್ತಾರೆ. ಈ ರೀತಿಯಲ್ಲಿ ಅವರು ಈ ಇಬ್ಬರೂ ಪ್ರತ್ಯೇಕ ವ್ಯಕ್ತಿಗಳು, ಒಂದೇ ವ್ಯಕ್ತಿಗಳಲ್ಲ ಎಂಬ ಸತ್ಯವನ್ನು ಮಾನ್ಯಮಾಡುತ್ತಾರೆ. ರೋಮನ್ ಕೆಥೋಲಿಕರು ಸಹಾ ಇದೇ ರೀತಿಯಲ್ಲಿ ಬೇಡುತ್ತಾರೆ ಮತ್ತು ಭಿನ್ನತೆಯನ್ನು ಗ್ರಹಿಸುತ್ತಾರೆ. ಅವರು ಕೆಳಮಟ್ಟದ ಸಂತರನ್ನು ಅವರಿಗಾಗಿ ತಾಯಿ ಮರಿಯಳೊಡನೆ ಮಧ್ಯಸ್ಥಿಕೆ ಮಾಡುವಂತೆ ವಿಜ್ಞಾಪಿಸುತ್ತಾರೆ. ನಂತರ ಇವರಿಗಾಗಿ ಮರಿಯಳು ಯೇಸುವಿನೊಡನೆ ಮರು ಮಧ್ಯಸ್ಥಿಕೆ ಮಾಡಬಹುದು, ಯೇಸು ನಂತರದಲ್ಲಿ ತನ್ನ ತಂದೆಯೊಡನೆ ಅವರುಗಳಿಗಾಗಿ ಮಧ್ಯಸ್ಥಿಕೆ ಮಾಡಬಹುದು ಎಂದು ನಂಬುತ್ತಾರೆ.

ಈ ರೀತಿಯಾಗಿ ಅಂಧಕಾರಯುಗದಲ್ಲಿ ಪ್ರೊಟೆಸ್ಟಂಟರು ಕೆಥೋಲಿಕರಿಂದ ಪಡೆದುಕೊಂಡ ಈ ಸುಳ್ಳು ಸಿದ್ಧಾಂತವು ತನ್ನ ಸುತ್ತಲೂ ಕಂದಕವನ್ನು ತೋಡಿಕೊಂಡಿದೆ ಮತ್ತು ಈಗಾಲೂ ಜಿಗುಟಿನ ಹಿಡಿತವನ್ನು ಹೊಂದಿದೆ. ಇದರಲ್ಲಿನ ನಂಬಿಕೆಯು ಗ್ರಹಿಸಲಸಾಧ್ಯ ವಾಗಿದ್ದು, ವಿವೇಚನೆಯಿಂದ ಕೂಡಿರುವುದಿಲ್ಲ ಮತ್ತು ದೇವರ ವಾಕ್ಯದ ಮೇಲೆ ಆಧಾರಗೊಂಡಿಲ್ಲವಾಗಿದ್ದು ಸಂಪ್ರದಾಯ ಬದ್ಧತೆಗೆ ಒಂದು ರೀತಿಯ ಪರೀಕ್ಷೆಯಾಗಿದೆ. ಇದನ್ನು ನಂಬದೇ ಇರುವ ಯಾರಾದರೂ ಪಾಷಂಡಿ ಎಂದು ಘೋಷಿಸುತ್ತಾರೆ. ರೋಮ್ ಸಭೆಯವರದೆಂದು ಮಾತ್ರವಲ್ಲ, ಪ್ರೊಟೆಸ್ಟಂಟರ ಉನ್ನತ ಅಧಿಕಾರ

∗ see Scripture Studies Vol II Chapter 9: Vol III Chapter 4

∗ ಗ್ರಂಥಶ್ರೇಣಿ ಅಧ್ಯಯನ ಸಂಪುಟ–2, ಅಧ್ಯಾಯ–9 ಮತ್ತು ಸಂಪುಟ–3, ಅಧ್ಯಾಯ–4 ಇವುಗಳನ್ನು ಪರಿಶೀಲಿಸಿ.

ವರ್ಗದವರಾದ ಕ್ರೈಸ್ತ ಧರ್ಮಬೋಧನಾ ಮೈತ್ರಿಯವರದೆಂದೂ ಸಹಾ ಹೇಳುವವರಾಗಿದ್ದಾರೆ. ಸತ್ಯವು ಶಕ್ತಿಯುತವಾದುದು ಮತ್ತು ಅಂತಿಮವಾಗಿ ಮೇಲುಗೈ ಸಾಧಿಸುವಂಥಾದ್ದು; ಪರಂತು, ಈತನ್ಮಧ್ಯೆ, ದೇವರು ತನ್ನ ಜನರೆಂದು ಹೇಳಿಕೊಳ್ಳುವವರಿಗೆ, ಆತನಿಂದ ಬೋಧಿಸಲ್ಪಟ್ಟವರಿಗೆ ಅನುಮತಿಗೊಳಿಸಿರುವ ಶರತ್ತುಗಳೆಂದರೆ ಗುಣಲಕ್ಷಣಗಳ ಪರೀಕ್ಷೆ, ದೇವರಿಗೆ ನಿಷ್ಠೆ, ಮತ್ತು ಆತನ ವಾಕ್ಯಗಳಿಗೆ ಬದ್ಧತೆ. ಸತ್ಯವನ್ನು ಹುಡುಕುವ ಪ್ರತಿಯೊಬ್ಬರೂ ದೇವರಿಗೆ ಮತ್ತು ಪರಲೋಕದ ಆ ತಂದೆಯ ವಾಕ್ಯಗಳಿಗೆ ನಿಷ್ಠೆಯಿಂದಿರುವುದು ಅಗತ್ಯವಾಗಿದೆ. ಇದು ಮಾತ್ರವೇ ನಮ್ಮನ್ನು ರಕ್ಷಣೆಗೆ ಯೋಗ್ಯರನ್ನಾಗಿ ಮಾಡುತ್ತದೆ. ಸತ್ಯವು ಮಾತ್ರವೇ ಗೌರವಾರ್ಹವಾಗಿದೆ ಮತ್ತು ಇದಕ್ಕೆ ವಿರೋಧವಾಗಿ ತಪ್ಪುಗಳು ಸದಾ ಕೆಡುಕಿಗೆ ಕಾರಣವಾಗುತ್ತದೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳ ಬೇಕಾಗುತ್ತದೆ.

## ತಂದೆಯಾದ ದೇವರು ಮತ್ತು ಮಗನಾದ ದೇವರು

## God the Father and God the Son

ಪರಿಶುದ್ಧಗ್ರಂಥದಲ್ಲಿನ ಕೆಲವು ಭಾಗಗಳು ತ್ರೈಯೇಕತ್ವದ ಬಗ್ಗೆ ಹೇಳದಿದ್ದರೂ ಅವುಗಳು ತ್ರೈಯೇಕತ್ವಕ್ಕೆ ಒಲವು ತೋರುತ್ತವೆಂದು ಹೇಳುವ ಭಾಗಗಳನ್ನು ನಾವೀಗ ಪರೀಕ್ಷಿಸುವುದು ಉಚಿತವೆನಿಸುತ್ತದೆ.

ನಮ್ಮ ಕರ್ತನಾದ ಯೇಸು ಕ್ರಿಸ್ತನು ದೇವರಂತೆ ಮಾತನಾಡಿದನು ಮತ್ತು ದೇವರು ಒಬ್ಬನೇ ಆಗಿರುವುದರಿಂದ ಒಂದೇ ದೇವರಿಗೆ 'ತಂದೆಯಾದ ದೇವರು', 'ಮಗನಾದ ದೇವರು' ಎಂಬ ಎರಡು ಹೆಸರುಗಳು ಇದ್ದಿರಬಹುದೆಂದು ಹೇಳಲಾಗುತ್ತಿದೆ. ಯಾವುದನ್ನು ಒಪ್ಪಿಕೊಳ್ಳಲಾಗಿದೆ ಎಂದು ತಿಳಿಯದೆ, ಪ್ರತಿಯೊಂದು ಹಂತದಲ್ಲಿಯೂ ನಮ್ಮ ರೀತಿಯಲ್ಲಿ ರುಜುವಾತುಪಡಿಸಿಕೊಳ್ಳುವಂತೆ ನಾವು ಈ ಸಮಸ್ಯೆಯನ್ನು ದೇವರ ವಾಕ್ಯದ ಬೆಳಕಿನಲ್ಲಿ ಪರೀಕ್ಷಿಸೋಣ. ಹಳೆಒಡಂಬಡಿಕೆಯು ಹೆಚ್ಚುಕಡಿಮೆ ಎಲ್ಲಾ ಭಾಷಾಂತರಕಾರರಲ್ಲಿ ದೇವತೆಗಳ ಹಲವಾರು ನಾಮಧೇಯಗಳ ಬಗ್ಗೆ ಏಕರೂಪತೆ ಇಲ್ಲದಿರುವದರಿಂದ ನಾವು ಅನಾನುಕೂಲತೆಯ ಕಠಿಣತೆ ಎದುರಿಸಬೇಕಾಗಿದೆ*. ಉದಾಹರಣೆಗಾಗಿ ಕೆಳಗೆ ಟಿಪ್ಪಣಿ ನೋಡಿರಿ.

## ಹಳೆ ಒಡಂಬಡಿಕೆಯಲ್ಲಿ ದೇವತ್ವಕ್ಕೆ ಇರುವ ವಿವಿಧ ನಾಮಧೇಯಗಳು

## Appellations of Deity in the Old Testament

(1) **'ಯೆಹೋವ'** ಎಂಬ ಹೆಸರನ್ನು ಕೇವಲ ನಾಲ್ಕು ಬಾರಿ ಸರಿಯಾಗಿ ತರ್ಜುಮೆಗೊಳಿಸಲಾಗಿದೆ. ಅಲ್ಲಿ ಹಾಗಲ್ಲದೆ ಬೇರೆ ವಿಧಿಯಿರಲಿಲ್ಲ (ವಿಮೋ. 6:3, ಕೀರ್ತನೆ 83:18. ಯೆಶಾಯ 12:2, 26:4). ಇದನ್ನು **'ದೇವರು'** ಎಂದು 298 ಸಾರಿ, **'ಕರ್ತನು'** ಎಂದು 5,000 ಸಾರಿ ತರ್ಜುಮೆಮಾಡಲಾಗಿದೆ.

(2) **'ಅದೋನೈ'** ಎಂಬುದನ್ನು **'ಕರ್ತನು'** ಎಂದು ಉಚಿತವಾಗಿ ಭಾಷಾಂತರಿಸಬೇಕಾಗಿರುವಾಗ, ಒಂದು ಕಡೆಯಲ್ಲಿ ಅದನ್ನು **'ದೇವರು'** ಎಂದು ಭಾಷಾಂತರಿಸಲಾಗಿದೆ.

(3) **'ಅದೋನ್'** ಎಂಬ ಹೆಸರನ್ನು **'ಸ್ವಾಮಿ'**, **'ಪ್ರಭು'** ಇಲ್ಲವೆ **'ಒಡೆಯ'** ಎಂದು ಭಾಷಾಂತರಿಸಲಾಗಿದೆ.

(4) **'ಎಲೋಹಿಂ' (Elohim)** ಎಂಬ ನಾಮಧೇಯವು **'ಎಲೋಹ್' (Eloh), 'ಎಲಾ' (Ela,) 'ಏಲ್' (El)** ಎಂಬಿತ್ಯಾದಿ ಬದಲಾವಣೆಗಳೊಂದಿಗೆ ಸತ್ಯವೇದದಲ್ಲಿ 2.500ಕ್ಕೂ ಹೆಚ್ಚುಬಾರಿ ಕಂಡುಬರುತ್ತದೆ. ಇದು ಅಗಾಗ್ಗೆ **'ಯೆಹೋವ'**ನನ್ನು ಸೂಚಿಸುತ್ತದೆ. ಆದರೆ, ಹೆಚ್ಚಿನ ಸಂಧರ್ಭಗಳಲ್ಲಿ ಸ್ಪಷ್ಟವಾದ ಔಚಿತ್ಯದಿಂದ ಇತರರಿಗೂ ಅನ್ವಯಿಸುತ್ತದೆ. ಆದುದರಿಂದ ಯಾರಿಗೆ ಅನ್ವಯವಾಗುತ್ತದೆ ಎಂಬುದನ್ನು ಸಂದರ್ಭಗಳೇ ನಿರ್ಣಯಿಸುತ್ತವೆ. ನಾವು ಈ ವಿಷಯವು ಸ್ಪಷ್ಟವಾಗುವಂತೆ ಮತ್ತು ಸಂಶಯಾತೀತವಾಗಿ **'ಎಲೋಹಿಂ'** ಎಂಬುದು **'ಸರ್ವಶಕ್ತ'**ನಿಗೆ ಅನ್ವಯವಾಗುತ್ತದೆ ಎಂಬುದಕ್ಕೆ ದೇವರ ವಾಕ್ಯದಲ್ಲಿನ ಉದಾಹರಣೆಗಳನ್ನು ನೀಡುತ್ತೇವೆ. ಇದು ಉಚಿತವಾದ ರೀತಿಯಲ್ಲಿ **'ಯೆಹೋವ'**ನಿಗೆ ಅನ್ವಯವಾಗುತ್ತದೆ. ಯಾಕೆಂದರೆ ಆತನು 'ಸರ್ವಶಕ್ತ'ನು. ಇದು ಯಾವುದೇ ದೇವದೂತನಿಗೂ ಉಚಿತವಾಗಿ ಅನ್ವಯವಾಗುತ್ತದೆ. ಯಾಕೆಂದರೆ ಅವರುಗಳೂ ಶಕ್ತರು ಮತ್ತು ಸರ್ವಶಕ್ತನಾದ ಯೆಹೋವನನ್ನು ಪ್ರತಿನಿಧಿಸುವವರು. ಅತ್ಯಂತ ಪ್ರಭಾವಶಾಲಿ ಮನುಷ್ಯರನ್ನು ಸಹಾ **'ಎಲೋಹಿ–ಶಕ್ತರು'** ಎಂದು ಕರೆಯಬಹುದು. ನಮ್ಮ

* ಇಲ್ಲಿ ಕಂಡುಬರುವುದೇನೆಂದರೆ, ನಮ್ಮ ಸತ್ಯವೇದದ ಸಾಮಾನ್ಯ ಭಾಷಾಂತರದ ಭಾಷಾಂತರಕಾರರೆಲ್ಲರೂ ತ್ರೈಯೇಕತ್ವವಾದಿಗಳಾಗಿದ್ದು 'ಯೆಹೋವ' ಎಂಬ ಹೆಸರನ್ನು ಪ್ರತಿಯೊಂದು ಸಂಧರ್ಭಗಳಲ್ಲಿಯೂ ನಾಮಪದವನ್ನಾಗಿ ಬಳಿಸಲು ಹಿಂಜರಿದರು. ಇಲ್ಲವಾದಲ್ಲಿ ಜನರು 'ನಾನೇ ಆಗಿದ್ದಾನೆ' (I AM) ಎಂಬ ಹೆಸರು ತಂದೆಯಾದ ದೇವರಿಗೆ ಅಂದರೆ ಯೆಹೋವನಿಗೆ ಮಾತ್ರವೇ ಅನ್ವಯವಾಗುವುದಾಗಿದೆ ಎಂದು ದೈವಜ್ಞಾನ ಶಾಸ್ತ್ರವು ನಿರಾಕರಿಸುತ್ತಿದೆ ಎಂದು ತಿಳಿದುಕೊಳ್ಳುತ್ತಿದ್ದರು. ಇದೇ ರೀತಿಯಲ್ಲಿ ಲೀಸರನ ಅಂಗ್ಲ ಭಾಷಾಂತನು ಯೆಹೂದ್ಯರಿಗಾಗಿಯೇ ಸಿದ್ಧಪಡಿಸಿದ ಭಾಷಾಂತರದಲ್ಲಿ ಈ ಪದವನ್ನು ಮುಚ್ಚಿಹಾಕಲಾಗಿದೆ. ಬಹುಶಃ ಇದು ಕೆಲವು ಯೆಹೂದ್ಯರು ಈ ಪದದ ಪುನರಾವಲೋಕದಲ್ಲಿನ ಕೆಲವೊಂದು ಬಳಕೆಯ ಬಗ್ಗೆ ಮುಗ್ಗರಿಸಬಹುದೆಂಬ ಕಾರಣದಿಂದ ಇದ್ದಿರಬಹುದು. (contd on next page).

ಆಂಗ್ಲ ಪದವಾದ `Sheep' ಎಂಬುದನ್ನು ಸಂಧರ್ಭಕ್ಕನುಸಾರವಾಗಿ ಏಕವಚನವನ್ನಾಗಿಯೂ, ಬಹುವಚನವನ್ನಾಗಿಯೂ ಉಪಯೋಗಿಸುವಂತೆ **'ಎಲೋಹಿಂ'**ಎಂಬ ಪದವನ್ನೂ ಉಪಯೋಗಿಸ ಬಹುದಾಗಿದೆ.

**ಎಲೋಹಿಂ (ಶಕ್ತನು) ಎಂಬುದನ್ನು 'ದೇವದೂತರು' ಎಂದು ಭಾಷಾಂತರಿಸಲಾಗಿದೆ :**

**Elohim (Mighty) Translated "Angels"**

**"ನಮ್ಮ ಕರ್ತನಾದ ಯೆಹೋವನೇ"** – ಕೀರ್ತನೆ 8:1.

**"ಅವನನ್ನು ದೇವದೂತ (ಎಲೋಹಿಂ) ರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ, ಪ್ರಭಾವವನ್ನೂ ಮಾನವನ್ನೂ ಆತನಿಗೆ ಕಿರೀಟವಾಗಿ ಇಟ್ಟೀ"** – ಕೀರ್ತನೆ 8:5.

ಇದುವೇ 'ಎಲೋಹಿಂ'ನ ಸರಿಯಾದ ತರ್ಜುಮೆಯಾಗಿದೆ ಯೆಂಬುದು ಸ್ಪೂರ್ತಿಗೊಂಡ ಅಪೋಸ್ತಲನು ಇದನ್ನು ನಮ್ಮ ಕರ್ತನು ಯಾವ ರೀತಿಯಲ್ಲಿ ತನ್ನನ್ನು ಕುರಿಯಂತೆ ತಗ್ಗಿಸಿಕೊಂಡದ್ದನ್ನು ಹೇಳುವಾಗ ಗ್ರೀಕ್ ಭಾಷೆಯಲ್ಲಿ 'Angelos' ಎಂದಿದ್ದಾನೆ ಎಂಬ ಸತ್ಯದಲ್ಲಿ ರುಜುವಾತಾಗುತ್ತದೆ. ಆತನು ಹೇಳಿದ್ದೇನೆಂದರೆ – **"ಅವನನ್ನು ದೇವದೂತರರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದೆಯಲ್ಲಾ, ಪ್ರಭಾವವನ್ನೂ ಮಾನವನ್ನೂ ಆತನಿಗೆ ಕಿರೀಟವಾಗಿ ಇಟ್ಟೀ" "ಆದರೂ ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟ ಒಬ್ಬಾತನು. ಅಂದರೆ ಯೇಸುವು, ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ ಹೊಂದಿರುವುದನ್ನು ನಾವು ನೋಡುತ್ತೇವೆ"** – ಇಬ್ರಿಯ 2:7,9.

**ಎಲೋಹಿಂ ಎಂಬುದನ್ನು 'ದೇವರುಗಳು" ಎಂದು ಭಾಷಾಂತರಿಸಲಾಗಿದೆ :**

**Elohim (Mighty) Translated "Gods"**

ಅನ್ಯಜನರ ಸುಳ್ಳು ದೇವತೆಗಳ ಬಗ್ಗೆ ಉಲ್ಲೇಖಿಸುವಾಗ **'ಎಲೋಹಿಂ'** (ಶಕ್ತನು) ಎಂಬ ಪದವನ್ನು 196 ಸಾರಿ ಉಪಯೋಗಿಸಲಾಗಿದೆ; ಇದು ಸ್ವಭಾವಿಕವಾಗಿಯೂ, ಉಚಿತವಾಗಿಯೂ ಅದೆ. ಯಾಕೆಂದರೆ ಅವುಗಳು ತಮ್ಮ ಭಕ್ತಜನರಿಗೆ ಶಕ್ತಿಯುತವೂ, ಪ್ರಭಾವಯುಕ್ತವೂ ಆಗಿದ್ದವು.

**'ಯೆಹೋವ' ಎಂಬ ಸರ್ವಶಕ್ತನಾದ 'ಎಲೋಹಿಂ' ಇತರ ಎಲೋಹಿಂ(ಶಕ್ತರು)ಗಿಂತ ಭಿನ್ನನು:**

**Jehovah The (Al-mighty) Elohim Contrasted with other Elohim (Mighty-ones)**

**"ಯೆಹೋವನೇ, ನನ್ನ ಪ್ರಾರ್ಥನೆಗೆ ಕಿವಿಗೊಡು; ನನ್ನ ವಿಜ್ಞಾಪನೆಗಳ ಶಬ್ಧವನ್ನು ಲಾಲಿಸು . . . ಕರ್ತನೇ ದೇವರುಗಳಲ್ಲಿ ನಿನಗೆ ಸಮಾನನೇ ಇಲ್ಲ"**–ಕೀರ್ತನೆ 86:6, 8.

**"ಯೆಹೋವನು, ಮಹಾ ದೇವರೂ (ಸರ್ವ ಶಕ್ತನು) ಎಲ್ಲಾ ದೇವರು (ಎಲೋಹಿಂ – ಶಕ್ತರುಗಳು) ಗಳಲ್ಲಿ ಮಹಾರಾಜನೂ ಆಗಿದ್ದಾನೆ"** – ಕೀರ್ತನೆ 95 : 3.

**"ದೇವದೇವನಾದ ಯೆಹೋವನು (ಎಲೋಹಿಂ – ಶಕ್ತರಲ್ಲಿ ಶಕ್ತನು) . . . . ತನ್ನ ಸನ್ನಿಧಿಗೆ ಬರಬೇಕೆಂದು ಆಜ್ಞಾಪಿಸುತ್ತಾನೆ"** – ಕೀರ್ತನೆ 50:1.

**"ಪರಮಪ್ರಭಾವವು ಯೆಹೋವನದೇ ಯೆಹೋವನದೇ ಎಂದು ಹೇಳಿ ಕೊಂಡಾಡಿರಿ. ಯೆಹೋವನ ನಾಮಕ್ಕೆ ಯೋಗ್ಯವಾದ ಘನವನ್ನು ಸಲ್ಲಿಸಿರಿ; ಪರಿಶುದ್ಧತ್ವವೆಂಬ ಭೂಷಣದೊಡನೆ ಯೆಹೋವನಿಗೆ ಅಡ್ಡಬೀಳಿರಿ"** – ಕೀರ್ತನೆ 29:1.

**"ಯೆಹೋವನು ಅಬ್ರಹಾಮನಿಗೆ ದರ್ಶನಕೊಟ್ಟು– ನಾನು ಸರ್ವಶಕ್ತನಾದ ದೇವರು (ಎಲ್) ಅಂದನು"** – ಆದಿ 17:1.

**"ಯೆಹೋವನೇ ದೇವರುಗಳಲ್ಲಿ ನಿನಗೆ ಸಮಾನರು ಯಾರು"**? – ವಿಮೋ. 15:11.

**"ಭೂಮ್ಯಾಕಾಶಗಳನ್ನು ನಿರ್ಮಾಣಮಾಡಿದ ಪರಾತ್ಪರ ದೇವರಾಗಿರುವ ಯೆಹೋವನ (ಎಲ್) ಕಡೆಗೆ ಕೈಯೆತ್ತಿ ಪ್ರಮಾಣಮಾಡುತ್ತೇನೆ"** – ಆದಿ. 14:22.

**"ಯೆಹೋವನು ದೊಡ್ಡವನೂ ಬಹಳವಾಗಿ ಸ್ತುತ್ಯನೂ ಆಗಿದ್ದಾನೆ; ಎಲ್ಲಾ ದೇವರುಗಳಲ್ಲಿ (ಎಲೋಹಿಂ–ಶಕ್ತರು) ಆತನೇ ಭಯಂಕರನು"** – ಕೀರ್ತನೆ 96:4.

ನಮೂನೆಗಳಾಗಿ ಈ ಉದಾಹರಣೆಗಳು ಸಾಕು. ಉಳಿದವುಗಳು ಇಷ್ಟಪಟ್ಟು ಹುಡುಕುವವರಿಗೆ ದೊರೆಯುತ್ತವೆ.

---

ಯೆಹೂದ್ಯರುಗಳು ಸಹ 'ಕರ್ತನು' ಎಂಬ ಈ ಪದವು ಕೇವಲ ಯೆಹೋವನಿಗೆ ಮಾತ್ರವೇ ಉಪಯೋಗಿಸಲ್ಪಡುತ್ತದೆ ಎಂದು ತಿಳಿಯುತ್ತಾರೆ ಮತ್ತು ಯೇಸುವನ್ನು ತಮ್ಮ ಕರ್ತನು ಮತ್ತು ವಿಮೋಚಕನು ಎಂದು ಹೇಳುವವರ ಮೇಲೆ ಇದು 'ದೇವದೂಷಣೆ' ಎಂದು ಅಸಮಾಧಾನಗೊಳ್ಳುತ್ತಾರೆ ಎಂಬ ಭಾವನೆಯಿಂದ ಯೆಹೂದ್ಯರು 'ಕರ್ತನು' ಎಂಬ ಪದವನ್ನು ಉಪಯೋಗಿಸ ಬಯಸುತ್ತಾರೆ.

ಕ್ರೈಸ್ತರು ತಮ್ಮ ರಕ್ಷಕನಿಗೆ 'ಕರ್ತನು' ಎಂಬ ಹೆಸರನ್ನು ಬಳಸುವುದನ್ನು ರೂಢಿಪಡಿಸಿಕೊಳ್ಳಲಿ, ಮತ್ತು ಹಳೆ ಒಡಂಬಡಿಕೆಯನ್ನು ಓದುವಾಗ ಆ ಪದವು ಯೆಹೋವನಿಗಲ್ಲ ಯೇಸುವಿಗಾಗಿ ಬಳಸಲಾಗಿದೆ ಎಂದು ತಿಳುಕೊಳ್ಳಲಿ ಎಂಬ ಕಾರಣದಿಂದ ತ್ರೈಯೇಕತ್ವವಾದಿ ಭಾಷಾಂತರಕಾರರುಗಳು 'ಯೆಹೋವ' ಎಂಬ ಪದದ ಬದಲಾಗಿ 'ಕರ್ತನು' (Lord) ಎಂಬ ಪದವನ್ನು ಬಳಸಿದರು.

ಇವುಗಳು ಸತ್ಯಾಂಶಗಳಾಗಿದ್ದು, ಕಾಮನ್ ವರ್ಶನ್ ಬೈಬಲ್‌ನಿಂದ ನಾವು ನೀಡುವ ಉಲ್ಲೇಖಗಳು ಅವುಗಳನ್ನು ಸಾದ್ಯಂತವಾಗಿ ಪ್ರಾಮಾಣೀಕರಿಸುತ್ತವೆ ಮತ್ತು ಈ ರೀತಿಯಾಗಿ ಅವು ನಮ್ಮ ಕರ್ತನಾದ ಯೇಸುಕ್ರಿಸ್ತನನ್ನು ದೇವರು (ಎಲೋಹಿಂ ಮತ್ತು ಆದೋನ್ (ಪ್ರಭು, ಕರ್ತ), ಹಾಗೂ ಅದೋನ್ಯೆ (ನನ್ನ ಕರ್ತ) ಎಂಬಿವುಗಳ ಬಗ್ಗೆ ಮತ್ತು ಎಂದಿಗೂ **'ಯೆಹೋವ'** ಎಂಬುದಾಗಿ ಅಲ್ಲ ಎಂಬುದರ ಬಗ್ಗೆ ದೈವವಾಕ್ಯಕ್ಕನುಸಾರವಾದ ಔಚಿತ್ಯಗಳನ್ನು ಮತ್ತು ನಿರೂಪಿಸುತ್ತವೆ :

## "ಎಲೋಹಿಂ" ಎಂಬ ಪದವನ್ನು ಮನುಷ್ಯರಿಗೂ ಬಳಸಲಾಗಿದೆ :

## Elohim Applied to Men:

ಮೇಲೆ ಹೇಳಿದ 196 ಭಾಷಾಂತರಗಳಲ್ಲಿ ದೇವರುಗಳು ಎಂಬುದನ್ನು **"ಎಲೋಹಿಂ"** ಎಂಬುದಾಗಿ ತರ್ಜುಮೆ ಮಾಡಲಾಗಿದ್ದು ಬಹುಶಃ ಪೂರ್ತಿಯಾದ ಒಂದರ್ಥ ಶಕ್ತಿವಂತ ಮನುಷ್ಯರಿಗೂ – ರಾಜರುಗಳು, ರಾಜಕುಮಾರರುಗಳು, ಶ್ರೀಮಂತರು ಮುಂತಾದವರಿಗೂ ಅನ್ವಯ ವಾಗುತ್ತದೆ. ಆದರೆ ನಾವೀಗ **'ಎಲೋಹಿಂ'** ಎಂಬ ಪದವು ದೇವಜನರಿಗೆ ಅನ್ವಯವಾಗುವುದನ್ನು ಸಹಾ ನೋಡಬಹುದು :

**"ನೀನು ನಮಗೆ ಮಹಾ ಪ್ರಭುವಾಗಿದ್ದಿಯಷ್ಟೆ"** (ಆದಿ. 23:6) ಎಂಬ ಮಾತುಗಳನ್ನು ಅಬ್ರಹಾಮನಿಗೆ ಹೇಳುವುದರಿಂದ ಆತನನ್ನು **'ಎಲೋಹಿಂ'** ಎಂದು ಹೇಳಿದಹಾಗಾಯಿತು.

**"ನಿನ್ನನ್ನು ಫರೋಹನಿಗೆ ದೇವರ ಸ್ಥಾನದಲ್ಲಿ ನೇಮಿಸಿದ್ದೇನೆ"** (ವಿಮೋ. 7:1) ಎಂಬುವ ಮಾತುಗಳಲ್ಲಿ ಮೋಶೆಯನ್ನು **'ಎಲೋಹಿಂ'** ಎಂದು ಹೆಸರಿಸಿ ದಂತಾಯಿತು.

**"ಅವನ ಯಾಜಮಾನನು ದೇವರ** (ನ್ಯಾಯಾಧಿಪತಿ – ಎಲೋಹಿಂ) **ಬಳಿಗೆ ಅವನನ್ನು ಕರಕೊಂಡು ಬಂದು . . . "** (ವಿಮೋ. 21:6) ಎಂಬುದರಲ್ಲಿ ನ್ಯಾಯಸ್ಥಾಪಕರುಗಳನ್ನು **'ಎಲೋಹಿಂ'** ಎಂದು ಕರೆದಂತಾಯಿತು.

**"ಕಳ್ಳನು ಸಿಕ್ಕದೇ ಹೋದರೆ . . . ನಿಶ್ಚಯಿಸುವುದಕ್ಕಾಗಿ ದೇವರ** (ನ್ಯಾಯಾಧಿಪತಿ – ಎಲೋಹಿಂ) **ಸನ್ನಿಧಾನದಲ್ಲಿ ಕಾಣಿಸಿಕೊಳ್ಳಬೇಕು .... ಆ ಇಬ್ಬರ ವ್ಯಾಜ್ಯವೂ ದೇವರ** (ನ್ಯಾಯಾಧಿಪತಿ – ಎಲೋಹಿಂ) **ಸನ್ನಿಧಿಗೆ ಬರಬೇಕು. ದೇವರು** (ನ್ಯಾಯಾಧಿಪತಿ – ಎಲೋಹಿಂ) **ಯಾರನ್ನು ದ್ರೋಹಿಯೆಂದು ನಿರ್ಣಯಿಸುತ್ತಾನೋ ಅವನು ಮತ್ತೊಬ್ಬನಿಗೆ ಎರಡರಷ್ಟನ್ನು ಕೊಡಬೇಕು"** – ವಿಮೋ. 22:8,9.

**"ದೇವರನ್ನು (ಎಲೋಹಿಂ) ದೂಷಿಸಬಾರದು, ನಿಮ್ಮ ಜನರಲ್ಲಿ ಅಧಿಪತಿಯಾಗಿರುವವನನ್ನು ಶಪಿಸಬಾರದು"** ಅಪೋಸ್ತಲನು ಅ.ಕೃ. 23:05ರಲ್ಲಿ **"ನಿನ್ನ ಜನರಲ್ಲಿ ಅಧಿಪತಿಯಾಗಿರುವವನ ವಿಷಯದಲ್ಲಿ ಕೆಟ್ಟದ್ದೇನೂ ಆಡಬಾರದೆಂದು ಬರೆದಿದೆಯಷ್ಟೆ"** ಎಂದು ಬರೆದಿರುವ ಮಾತುಗಳನ್ನು ಇಲ್ಲಿ ಗಮನಿಸಬೇಕಾಗುತ್ತದೆ.

## ಭಕ್ತಜರನ್ನು (ಸಂತರನ್ನು) ಸಹಾ ಎಲೋಹಿಂ ಎಂದು ಕರೆಯಲಾಗಿದೆ.

## The Saints Called Elohim

**"ನೀವು ದೇವರುಗಳು (ಎಲೋಹಿಂ – ಶಕ್ತರುಗಳು), ಎಲ್ಲರೂ ಪರಾತ್ಪರನ ಮಕ್ಕಳು ಎಂದು ನಾನು ಹೇಳಿದೆನು. ಆದರೂ ನರರಂತೆ ಸತ್ತೇ ಹೋಗುವಿರಿ. ಪ್ರತಿಯೊಬ್ಬ ಪ್ರಭುವಿನಂತೆ ನೀವೆಲ್ಲರೂ ಬಿದ್ದುಹೋಗುವಿರಿ"** (ಕೀರ್ತನೆ 82:6,7) ಭಕ್ತಜನರೆಲ್ಲರೂ ಸಾಯಲೇ ಬೇಕು, ಆದರೆ ಅವರು ತಮ್ಮ ಶಿರಸ್ಸಾದ ಯೇಸುಕ್ರಿಸ್ತನಂತೆ ಸಾಯುತ್ತಾರೆಯೇ ಹೊರತು ತನ್ನ ಸ್ವಂತ ಪಾಪಗಳ ಸಲುವಾಗಿ ಸತ್ತ ಆದಾಮಮನಂತಲ್ಲ. ಈ ವಾಕ್ಯಭಾಗವನ್ನು ನಮ್ಮ ಕರ್ತನು ಸಹಾ ಉಲ್ಲೇಖಿಸಿದ್ದಾನೆ ಮತ್ತು ಆತನ ತುಟಿಗಳ ಮಾತುಗಳನ್ನು ಕೇಳಿದವರಿಗೆ – ಕೇಳುವ ಕಿವಿಯುಳ್ಳ ವರ್ಗದವರಿಗೆ* ಅನ್ವಯಿಸಿದ್ದಾನೆ. ಅದು ಇನ್ನೂ ಸಹಾ ಅದೇ ವರ್ಗದವರಿಗೆ ಅನ್ವಯವಾಗುತ್ತದೆ ;

**"ಪ್ರಿಯರೇ, ಈಗ ದೇವರ ಮಕ್ಕಳಾಗಿದ್ದೇವೆ"** (1 ಯೋಹಾನ 3:2) **"ನೀವು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ಧೇಶದಿಂದ ದೇವರು ತನ್ನ ಪ್ರಭಾವಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ"** – 2 ಪೇತ್ರ 1:4 : ಯೋಹಾನ 10;34–35.

## 'ಎಲೋಹಿಂ' ಎಂಬುದನ್ನು 'ಶ್ರೇಷ್ಟ', 'ಶಕ್ತ' ಮುಂತಾಗಿ ತರ್ಜುಮೆಗೊಳಿಸಲಾಗಿದೆ :

## Elohim Rendered "Great", "Strong" Etc.

**"ಎಲೋಹಿಂ"** ಎಂಬ ಈ ಪದವನ್ನು ಜಡವರ್ಗಕ್ಕೆ ಸಂಬಂಧಿಸಿದಂತೆ ಕೆಲವೊಮ್ಮೆ "ಶ್ರೇಷ್ಟ' "ಶಕ್ತ' ಮುಂತಾಗಿ ತರ್ಜುಮೆಗೊಳಿಸಲಾಗಿದೆ – "ಮಹಾ (**ಎಲೋಹಿಂ** – ಶಕ್ತಿಯುತ) ಭೂಕಂಪ" (1 ಸಮು. 14:15) ; "ಬಲವಾದ (**ಎಲೋಹಿಂ** – ಶಕ್ತಿಯುತ) ಹೋರಾಟ" (ಆದಿ 30: 8), "ದಿವ್ಯ (**ಎಲ್**–ಶಕ್ತಿಶಾಲಿ) ಪರ್ವತಗಳು" (ಕೀ 36:6), "ಬಲಿಷ್ಟ (**ಎಲ್**–ಶಕ್ತಿಶಾಲಿ) ಶೂರರು" (ಯೆಹೆಜ್ಕೇಲ 32:21), "ನನ್ನಲ್ಲಿ ಸಾಮರ್ಥ್ಯ(**ಎಲ್**)ವುಂಟು" (ಆದಿ 31:9) ಇತ್ಯಾದಿಯಾಗಿ.

---

* ಈ 82ನೇ ಕೀರ್ತನೆಯಲ್ಲಿ ಸಮಗ್ರವಾಗಿ ನಮ್ಮ ಕರ್ತನಾದ ಯೇಸುವನ್ನು ದೇವರು ನೇಮಿಸಿದ ವಿಮೋಚಕನನ್ನಾಗಿ. ಎರಡನೆಯ ಬರೋಣದ ಕಾಲದಲ್ಲಿ ಕ್ರೈಸ್ತ ಸಾಮ್ರಾಜ್ಯದ ನ್ಯಾಯಾಧಿಪತಿಯನ್ನಾಗಿ ಉಲ್ಲೇಖಿಸಿರುವಂತೆ ತೋರಿಬರುತ್ತದೆ. ಆತನಿಗೆ ನಾವು **"ದೇವರು"** ('ಎಲೋಹಿಂ'– ತಂದೆ ದೇವರು ಈ ಕಾಲದಲ್ಲಿ ಪ್ರಪಂಚದವರಿಗೆ ನ್ಯಾಯ ತೀರಿಸುವಂತೆ ನೇಮಿಸಿದಾತನು) ಎಂಬ ಪದವನ್ನು ಅನ್ವಯಿಸುತ್ತೇವೆ. ಆತನು ಶಕ್ತಿಶಾಲಿಗಳ (ಹಣವಂತ, ರಾಜಕೀಯ, ಧರ್ಮೋಪದೇಶಕ ರಾಜಕುಮಾರರುಗಳ) ಸಮೂಹದಲ್ಲಿ ನಿಂತುಕೊಂಡಿದ್ದಾನೆ. ಆತನು ಈ ನ್ಯಾಯಧಿಪತಿಗಳೊಂದಿಗೆ, ಈ ದೇವರು (ಎಲೋಹಿಂ – ಶಕ್ತಿಶಾಲಿಗಳು) ಇವರುಗಳೊಂದಿಗೆ ನ್ಯಾಯ ತೀರಿಸುವವನಾಗಿದ್ದಾನೆ. ಆತನು ಮೊದಲಿಗೆ ಈ ರಾಜಕುಮಾರರುಗಳನ್ನು ತೆಗಳುವವನಾಗಿ ಸರ್ವಸಮತೆಯನ್ನು ಕೇಳುವವನಾಗಿ ಪ್ರತಿನಿಧಿಸಲ್ಪಡುತ್ತಾನೆ, ಆದರೆ ಅವರು ಲಕ್ಷ್ಯಮಾಡುವುದಿಲ್ಲ. (contd)

## ಹೊಸ ಒಡಂಬಡಿಕೆಯಲ್ಲಿ 'ದೇವರು' ಮತ್ತು 'ಕರ್ತನು'

## God and Lord in the new Testament

ಹೊಸಒಡಂಬಡಿಕೆಯಲ್ಲಿ ಕಡಿಮೆ ಪದಗಳನ್ನು ಉಪಯೋಗಿಸುವುದರ ಮೂಲಕ ಪ್ರಸ್ತಾಪವನ್ನು ಸರಳಗೊಳಿಸಲಾಗಿದೆ. ಆದರೆ, ಉಪಯೋಗಿಸಿದ 'ಕರ್ತನು' ಮತ್ತು ತಂದೆ ಎಂಬ ಪದಗಳಲ್ಲಿ ತಂದೆಯನ್ನು ಮಗನಿಂದ ವ್ಯತ್ಯಾಸಗೊಳಿಸುವ ಯಾವುದೇ ಪದಗಳಿಲ್ಲವಾಗಿದ್ದು ಆ ಪ್ರಸ್ತಾಪದ ಬಗ್ಗೆ ನಿರ್ಣಯವನ್ನು ಸಂಪೂರ್ಣವಾಗಿ ಓದುಗರಿಗೇ ಬಿಡಲಾಗಿದ್ದು 'ಥಿಯೋಸ್' ಎಂಬ ಪದವನ್ನು ಗ್ರೀಕ್ ಉಪಸರ್ಗ ಸಂಬಂಧ ಲೇಖನದ ಒಂದೇ ವಾಕ್ಯಾಂಗದಲ್ಲಿ 'ದೇವರು' ಮತ್ತು 'ಒಬ್ಬ ದೇವರು' ಎಂಬುದರ ವ್ಯತ್ಯಾಸವನ್ನು ತಿಳಿಸುವ ಸಲುವಾಗಿ ಎರಡು ಬಾರಿ ಉಪಯೋಗಿಸಿದ ಸಂದರ್ಭಗಳನ್ನು ಹೊರತುಪಡಿಸಿ ಇದನ್ನು ವಾಕ್ಯರಚನೆಯ ಮೂಲಕ ಮಾತ್ರವಷ್ಟೇ ಸೂಚಿಸಲಾಗಿದೆ. ಇದರ ಒಂದು ಉದಾಹರಣೆಯನ್ನು ನಾವು ಯೋಹಾನ 1:1ರಲ್ಲಿ ಕಾಣಬಹುದು –

**"ಆ ವಾಕ್ಯವು ದೇವರ** (ಹೋ ಥಿಯೋಸ್) **ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು"** (ಥಿಯೋಸ್) ಆದರೆ, ಒಬ್ಬ ಜಾಗರೂಕ ವಿದ್ಯಾರ್ಥಿಗೆ (ಯಾವುದೇ ಪೂರ್ವಾಗ್ರಹಕ್ಕೂ ತುತ್ತಾಗದೇ ಇರುವವನು) ಸಾಮಾನ್ಯವಾಗಿ ಅಪೋಸ್ತಲನ ಆಲೋಚನೆಯನ್ನು ನಿರ್ಧರಿಸುವಲ್ಲಿ ಯಾವುದೇ ಕಷ್ಟವೆನಿಸದು. ನಿಜವಾಗಿಯೂ ಭಾಷೆಯು ಎಷ್ಟೇ ಸ್ಪಷ್ಟವಾಗಿದ್ದರೂ ಇಷ್ಟು ದೀರ್ಘಕಾಲದವರೆಗೆ ನಾವು ಇದಕ್ಕೆ ಗಮನ ಕೊಡದಿರುವುದು ಆಶ್ಚರ್ಯವಾಗಿದೆ.

ನಮ್ಮ ನೂತನ ಒಡಂಬಡಿಕೆಯಲ್ಲಿ 'ದೇವರು' ಎಂಬ ಪದವು ಪರಲೋಕದ ತಂದೆ ದೇವರಿಗೆ ಅನ್ವಯವಾಗಿರಲಿ ಇಲ್ಲವೆ ಪರಲೋಕದ ಮಗನಾದ ನಮ್ಮ ಕರ್ತನಾದ ಯೇಸು ಕ್ರಿಸ್ತನಿಗೆ ಅನ್ವಯವಾಗಿರಲಿ ಅಥವಾ ಯಾವುದೇ ಸುಳ್ಳು ದೇವರಿಗೆ ಅನ್ವಯವಾಗಿರಲಿ ಅದು ಏಕಪ್ರಕಾರವಾಗಿ ಗ್ರೀಕ್ ಪದವಾದ 'ಥಿಯೋಸ್' ಎಂಬುದರ ಭಾಷಾಂತರವಾಗಿದೆ. ಆದರೆ ಒಂದು ಸಂಧರ್ಭದಲ್ಲಿ 'ಕುರಿಯೋಸ್' ಎಂಬ ಪದವನ್ನು 'ಕರ್ತನು' ಅಥವಾ 'ಪ್ರಭು' ಎಂಬುದರ ಬದಲಾಗಿ 'ದೇವರು' ಎಂದು ತರ್ಜುಮೆಗೊಳಿಸಲಾಗಿದೆ (ಅ.ಕೃ 19:20. ಮತ್ತು ಅ.ಕೃ. 17:18ರಲ್ಲಿ ಹೇಳಿರುವ ಅನ್ಯದೇಶದ ದೈವಗಳು (Daimonian). ಇದನ್ನು ದೆವ್ವಗಳು (Demons) ಎಂಬುದಾಗಿ ತರ್ಜುಮೆ ಗೊಳಿಸಬೇಕಾಗಿತ್ತು.

ಕರ್ತನು ಎಂಬ ನಾಮವನ್ನು ಅದು ದೇವರಿಗಾಗಲೀ ಇಲ್ಲವೆ ಯೇಸುವಿಗಾಗಲೀ ಅಥವಾ ಮನುಷ್ಯ ಇಲ್ಲವೇ ದೇವದೂತರಿಗಾಗಲೀ ಅನ್ವಯಿಸುವಾಗ ಸಾಮಾನ್ಯವಾಗಿ ಪ್ರಭು ಅಥವಾ ಕರ್ತನನ್ನು ಸೂಚಿಸುವ 'ಕುರಿಯೋಸ್' ಎಂಬ ಗ್ರೀಕ್ ಪದದ ಭಾಷಾಂತರವನ್ನು ಉಪಯೋಗಿಸಲಾಗುತ್ತದೆ. ಇದನ್ನು ಆಗಿಂದ್ದಾಗ್ಗೆ 'ಸ್ವಾಮಿ' ಅಥವಾ 'ಒಡೆಯ' ಎಂದೂ ತರ್ಜುಮೆಗೊಳಿಸಲಾಗಿದೆ. ಆದರೆ ಐದು ಸ್ಥಳಗಳಲ್ಲಿ 'ಕರ್ತನು' ಎಂಬ ಪದವು `despotes' ಎಂಬುದರ ಭಾಷಾಂತರವಾಗಿದೆ. ಅದನ್ನು 'soverign' ಅಥವಾ 'Autocrat' ಎಂದು ಭಾಷಾಂತರಗೊಳಿಸಿದ್ದರೆ ಒಳ್ಳೆಯದಿತ್ತು. ಇಂಥಾಃ ಪ್ರಕರಣಗಳು ಯಾವುವೆಂದರೆ :–

(1) **"ಒಡೆಯನೇ, ನಿನ್ನ ಮಾತು ನೆರವೇರಿತು; ಈಗ ಸಮಾಧಾನದಿಂದ ಹೋಗುವುದಕ್ಕೆ ನಿನ್ನ ದಾಸನಿಗೆ ಅಪ್ಪಣೆಯಾಯಿತು"** – ಲೂಕ 2:29.

(2) **"ಒಡೆಯನೇ, ಭೂಮ್ಯಾಕಾಶವನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ಉಂಟುಮಾಡಿದಾತನೇ** . . . . (ಅ.ಕೃ. 4:24). ಭೂಪತಿಗಳು ಕರ್ತನ (ಕುರಿಯೋಸ್) ಮತ್ತು ಆತನು ಅಭಿಷೇಕಿಸಿದ ಕ್ರಿಸ್ತನ ವಿರೋಧವಾಗಿ ಸನ್ನದ್ಧರಾಗಿದ್ದರು.

(3) **"ತಮ್ಮನ್ನು ಕಂಡುಕೊಂಡ ಒಡೆಯನನ್ನು ಕೂಡಾ ತಾವು ಅರಿಯೆವು ಎಂದು ಹೇಳುವವರೂ . . . "** – 2 ಪೇತ್ರ 2:1.

(4) **"ನಮ್ಮ ಒಬ್ಬನೇ ಒಡೆಯನೂ ಕರ್ತನೂ ಆಗಿರುವ ಯೇಸುಕ್ರಿಸ್ತನನ್ನು . . "** – ಯೂದ. 4.

(5) **"ಒಡೆಯನೇ, ಪರಿಶುದ್ಧನೂ ಸತ್ಯವಂತನೂ ಆಗಿರುವಾತನೇ . . ."** – ಪ್ರಕಟನೆ 6:10.

(6) **"ರಬ್ಬೂನಿ"(ಗುರುವೇ) ಎಂಬ ಪದವನ್ನು ಒಮ್ಮೆ ಕರ್ತನು ಎಂದು ತರ್ಜುಮೆಗೊಳಿಸಲಾಗಿದೆ** – ಮಾರ್ಕ 10:51.

---

ತಾವು ಬುದ್ಧಿಹೀನರೂ ವಿವೇಕಶೂನ್ಯರೂ ಆಗಿ ಅಂಧಕಾರದಲ್ಲಿ ಅಲೆಯುವವರೂ ಆಗಿದ್ದಾರೆ ಎಂಬುದನ್ನು (ತಮ್ಮ ಈ ವಿಚಾರಣಸರಣಿಯ ಫಲವೇನೆಂಬುದನ್ನು) ತಿಳಿದಿರುವುದಿಲ್ಲ. ಈ ಲೋಕದ (ಸಮಾಜಿಕ ಲೋಕದ) ಅಸ್ತಿವಾರವೆಲ್ಲವೂ ಕದಲುತ್ತವೆ. (ಕ್ರಮವಿಲ್ಲದೇ ಇವೆ) ಎಂಬುದು ಆತನ ನಿರ್ಣಯವಾಗಿದೆ. ಪ್ರಸ್ತುತ ಸಂಸ್ಥೆಗಳಿಗೆ ತೇಪೆಹಾಕುವುದರಿಂದ ಪ್ರಯೋಜನವಿಲ್ಲ. ಅವುಗಳೆಲ್ಲವನ್ನೂ ವಿಸರ್ಜಿಸಲೇ ಬೇಕು. ನೂತನ ಭೂಮ್ಯಾಕಾಶಗಳು, ನೂತನ ಸಮಾಜಿಕ ಪ್ರಪಂಚವೊಂದು ಇದಕ್ಕೆ ಬದಲಾಗಿ ಬರಬೇಕು. 6 ಮತ್ತು 7ನೇ ವಚನಗಳು ಆತನ ಪ್ರೀತಿಪಾತ್ರ ಚಿಕ್ಕ ಹಿಂಡಿಗೆ ಉದ್ದೇಶಿಸಿ ಹೇಳಲಾಗಿದೆ. ಅವರೆಲ್ಲರೂ ಕೂಡಿ ಬರುವಾಗ– ಆಯ್ದ ಸಭೆಯವರೆಲ್ಲರೂ ಮರಣಹೊಂದುವುದರ ಮೂಲಕ ಪರದೆಯನ್ನು ದಾಟಿ ಬರುವಾಗ ಕ್ರಿಸ್ತನನ್ನು ಕರೆಯಲಾಗುವುದು "ದೇವರೇ ಎದ್ದೇಳು; ಭೂಲೋಕದಲ್ಲಿ ನ್ಯಾಯವನ್ನು ಸ್ಥಾಪಿಸು, ನೀನು ಎಲ್ಲಾ ಜನಾಂಗಗಳ ಒಡೆಯನು ಅಲ್ಲವೋ?". ಆತನು ತನ್ನ ರಾಜ್ಯವನ್ನು ಸ್ಥಾಪಿಸುವ ಸಲುವಾಗಿ ನ್ಯಾಯ ತೀರ್ಪನ್ನು ಬಿಡುಗಡೆಗೊಳಿಸುತ್ತಾನೆ. ಇದು ಒಂದು ಜನಾಂಗವಾಗಿದ್ದ ಕಾಲದಲ್ಲಿ ಇಲ್ಲದ ಮಹಾ ಸಂಕಟಕಾಲದಲ್ಲಿ ಉಂಟಾಗುತ್ತದೆ ಮತ್ತು ಅಹಂಕಾರಿಗಳನ್ನು ಅವಮಾನಪಡಿಸುತ್ತದೆ, ದೀನರನ್ನು ಉನ್ನತ ಸ್ಥಿತಿಗೆ ಏರಿಸುತ್ತದೆ ಮತ್ತು ಪವಿತ್ರ ಪ್ರವಾದಿಗಳು ಮಾಡಿದ ದೀರ್ಘ ವಾಗ್ದಾನಗಳೆಡೆಗೆ ಪುನರ್ ಸಂಧಾನಕಾಲದಲ್ಲಿ ನಡಿಸುತ್ತದೆ – ಅ.ಕೃ. 3:19–23.

(7) 'Kurieuo' ಎಂಬ ಪದವನ್ನು ಒಮ್ಮೆ **'ಕರ್ತರುಗಳು'** ಎಂದು ಭಾಷಾಂತರಗೊಳಿಸಲಾಗಿದೆ – 1 ತಿಮೋಥೆ 6:15.

## ದೇವತ್ವ
## The Godhead

ನಮ್ಮ ನೂತನ ಒಡಂಬಡಿಕೆಯ ಭಾಷಾಂತರ ಕಾರರುಗಳು **'ದೇವತ್ವ'** ಎಂಬ ಪದವನ್ನು ಆಯ್ಕೆಮಾಡುವಲ್ಲಿ ಅದನ್ನು ಮೂರುಬಾರಿ ಮೂರುವಿಧವಾಗಿ ಭಾಷಾಂತರಿಸುವಲ್ಲಿ ಅತೀವವಾಗಿ ದೆಸೆಗೆಟ್ಟವರಾಗಿದ್ದಾರೆ.– ಇವುಗಳಲ್ಲಿ ಯಾವುದೂ ಸಮಾನ್ಯ ಓದುಗನಿಗೆ ಆ ವಾಕ್ಯದಲ್ಲಿ ಕಂಡುಬರುವ ಯಾವುದೇ ಮಹತ್ವವನ್ನು ಹೊಂದಿರುವುದಿಲ್ಲ. ಅಂದರೆ, ಅನೇಕ ದೇಹಗಳನ್ನು ಹೊಂದಿರುವ ದೇವರು ಆದರೆ ಒಂದೇ ಶಿರಸ್ಸುಳ್ಳಾತನು ಮುಂತಾಗಿ. ಇದು ಕಂಡುಬರುವ ಸ್ಥಳಗಳೆಂದರೆ :–

(1) Ho Theios ಎಂಬ ಪದವನ್ನು Godhead (ದೈವ) ಎಂಬುದಾಗಿ ಅ.ಕೃ 17:29ರಲ್ಲಿ ಭಾಷಾಂತರಿಸಲಾಗಿದೆ. ಆದರೆ ಅದು Deity (ದೇವತೆ) ಅಂದರೆ – **"ದೇವತೆಯು ಮನುಷ್ಯನ ಶಿಲ್ಪ ವಿದ್ಯೆಯಿಂದಲೂ ಕಲ್ಪನೆಯಿಂದಲೂ ಕೆತ್ತಿರುವ ಚಿನ್ನ ಬೆಳ್ಳಿ ಕಲ್ಲುಗಳಿಗೆ ಸಮಾನವೆಂದು ನಾವು ಭಾವಿಸಬಾರದು"** ಎಂದಾಗಬೇಕಾಗಿತ್ತು. ಇದೇ ಪದವನ್ನು 'ದೈವ' ಎಂಬುದಾಗಿ ನೂತನ ಒಡಂಬಡಿಕೆಯ ಬೇರೆ ಎರಡು ಕಡೆಗಳಲ್ಲಿ ಮಾತ್ರವೇ ಭಾಷಾಂತರಿಸಲಾಗಿದೆ – 2 ಪೇತ್ರ 1:3,4.

(2) 'Theiotes' ಎಂಬ ಪದವನ್ನು ರೋಮಾ. 01:20ರಲ್ಲಿ Godhead (ದೇವತ್ವ) ಎಂಬುದಾಗಿ ಭಾಷಾಂತರಿಸಲಾಗಿದೆ. ಆದರೆ ಆದನ್ನು Divinity (ದೈವತ್ವ) ಅಥವಾ Deity (ದೇವತೆ) ಎಂಬುದಾಗಿ ಭಾಷಾಂತರ ಮಾಡಬೇಕಾಗಿತ್ತು – **"ಆತನ ನಿತ್ಯ ಶಕ್ತಿಯು ದೇವತ್ವವೂ Ho (Godhead – Theiotes – Diety) ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ದಿಗೆ ಗೊತ್ತಾಗಿ ಕಂಡುಬರುತ್ತದೆ"**. ಹೊಸ ಒಡಂಬಡಿಕೆಯಲ್ಲಿ ಈ ಪದವು ಕಂಡು ಬರುವುದು ಈ ಒಂದು ಸಂಧರ್ಭದಲ್ಲಿ ಮಾತ್ರವೇ.

(3) 'Theotes' ಎಂಬ ಪದವನ್ನು Godhead (ದೇವತ್ವ) ಎಂಬುದಾಗಿ ಕೊಲೊಸ್ಸೆ 2:9 ರಲ್ಲಿ ಭಾಷಾಂತರಿಸಲಾಗಿದೆ. ಇದು ಸಹಾ Diety (ದೇವತ್ವ) ಎಂದಿರಬೇಕಾಗಿತ್ತು – **"ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ವಾಸಮಾಡುತ್ತದೆ"** ಈ ಪದವು ಸಹಾ ಕಂಡು ಬರುವುದು ಈ ಒಂದು ಸಂಧರ್ಭದಲ್ಲಿ ಮಾತ್ರವೇ.

ಸಭೆಯ ಶಿರಸ್ಸಾಗಿರುವ ಮಹಿಮೆಹೊಂದಿದ ಕ್ರಿಸ್ತನಲ್ಲಿ ಎಲ್ಲಾ ಸರ್ವಸಂಪೂರ್ಣತೆಗಳೂ ವಿವೇಕದ ಸಮೃದ್ಧಿ, ಕೃಪೆ ಮತ್ತು ಶಕ್ತಿ ಇವುಗಳು ವಾಸಮಾಡುತ್ತವೆ. ಇದು ಆತನ ದೇಹವಾದ ಸಭೆಯ ಎಲ್ಲಾ ವ್ಯವಹಾರಗಳನ್ನು ಮಾರ್ಗದರ್ಶನ ಮಾಡುವುದಕ್ಕಾಗಿ ಮಾತ್ರವಲ್ಲ, ತಂದೆಯ ಪ್ರತಿನಿಧಿಯಾಗಿ ಆತನ ಯೋಜನೆಯನ್ನು ಫಲಪ್ರಧವಾಗಿ ಪೂರೈಸಿ ಅಂತಿಮದಲ್ಲಿ ಆತನ ಪರಿಪಾಲನೆಗೆ ಒಪ್ಪಿಸಲು ಅಗತ್ಯವಾದ ಯಾವುದನ್ನಾದರೂ, ಅಥವಾ ಎಲ್ಲವನ್ನೂ ಮಾಡುತ್ತದೆ.

## "ನಿನ್ನ ದೇವರಾದ ಕರ್ತನಿಗೆ ಅಡ್ಡಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು"

(ಮತ್ತಾಯ 4:10)

**Thou shalt worship The Lord Thy God and Him only Shalt Thou Serve** (Matt. 4:10)

ನಮ್ಮ ಕರ್ತನಾದ ಯೇಸುವು ಯಾವುದೇ ಗದರಿಕೆಗಳಿಲ್ಲದೆ ಆರಾಧನೆ ಸ್ವೀಕರಿಸಿರುವ ಸತ್ಯತೆಯು ಆತನೇ ಯೆಹೋವನೆಂದು ಸೂಚಿಸುತ್ತದೆ ಎಂದು ಕೆಲವರು ಹೇಳುತ್ತಾರೆ. ನಮ್ಮ ಕರ್ತನು ಹೇಳಿದ ಮೇಲಿನ ಮಾತುಗಳು ಯೆಹೋವನಲ್ಲದೆ ಬೇರೆ ಯಾರಾದರೂ ಆರಾಧನೆ ಹೊಂದಿಕೊಳ್ಳುವುದು ತಪ್ಪೆಂಬ ಅಭಿಪ್ರಾಯವನ್ನು ನೀಡುತ್ತದೆ ಎಂದು ಅಂದಾಜಿಸಲಾಗಿದೆ. ಆದರೆ, ನಾವು ಹಾಗಲ್ಲವೆಂದು ಉತ್ತರಿಸುತ್ತೇವೆ ! ಈ ರೀತಿಯಾಗಿ ಅರ್ಥೈಸುವುದರಿಂದ ಅವರಲ್ಲಿದ್ದ ಅರ್ಥವನ್ನು ಅವರು ಅಲೋಚಿಸುವಂತೆ ಮಾಡುತ್ತದೆ ಮತ್ತು ಇತರ ದೇವರವಾಕ್ಯಗಳ ಬೋಧನೆಗಳಿಗೆ ಅವರು ಭಿನ್ನರಾಗುವಂತೆ ಮಾಡುತ್ತದೆ. ಯೆಹೋವನು ಹೇಳಿದ್ದೇನಂದರೆ – **"ನನಗೆ ನೀನು ಮಗನು; ನಾನೇ ಈಹೊತ್ತು ನಿನ್ನನ್ನು ಪಡೆದಿದ್ದೇನೆ"** (ಕೀರ್ತನೆ 2:7) ಇದನ್ನು ಈಗಾಗಲೇ ಪ್ರವಾದಿಗಳ ಮೂಲಕ ದಾಖಲಿಸಲಾಗಿದೆ. ಮತ್ತು ಆತನು ಆಜ್ಞಾಪಿಸಿದ್ದೇನೆಂದರೆ – **"ದೇವರುಗಳಿರಾ, ನೀವೆಲ್ಲರೂ ಆತನಿಗೆ ಅಡ್ಡಬೀಳಿರಿ"** (ಕೀರ್ತನೆ 97:7, ಇಬ್ರಿಯ 1:5–6). ನಮ್ಮ ಕರ್ತನಾದ ಯೇಸುವಿಗೂ ಇದು ತಿಳಿದಿತ್ತು ಈ ಹಿಂದೆ ಯೆಹೋವನ ದೂತ ವಾಹಕರುಗಳು ಸಹಾ ದೇವರ ಪ್ರತಿನಿಧಿಗಳನ್ನು ಆರಾಧಿಸುತ್ತಿದ್ದರು ಎಂಬುದೂ ಆತನಿಗೆ ತಿಳಿದಿತ್ತು ; ಆತನು ತಾನೇ ಒಬ್ಬ ಮುಖ್ಯ ಪ್ರತಿನಿಧಿ, ದೇವರು ಪಡೆದ ಏಕೈಕ ಕುಮಾರನು, "ಒಡಂಬಡಿಕೆಯ ದೂತನು (ಮಲಾಕಿ. 3:1) ಆಗಿದ್ದು ತಂದೆಯು ತನ್ನನ್ನು ಪವಿತ್ರಗೊಳಿಸಿ ಈ ಲೋಕಕ್ಕೆ ಕಳುಹಿಸಿಕೊಟ್ಟಿದ್ದಾನೆ" ಎಂಬುದನ್ನು ಆತನು ಅರಿತಿದ್ದನು. ಇದರ ಫಲವಾಗಿ ತನ್ನನ್ನು ಗೌರವಿಸುವವರು ತನ್ನನ್ನು ಕಳುಹಿಸಿದ ತಂದೆಯನ್ನು ಗೌರವಿಸಿದಂತಾಗುತ್ತದೆ ಎಂಬುದನ್ನೂ ಆತನು ತಿಳಿದಿದ್ದನು.

ನಿಜವಾಗಿಯೂ ಆತನ ಸ್ವಂತ ಮಾತುಗಳೇನೆಂದರೆ **"ಎಲ್ಲರೂ ತನಗೆ ಮಾನಕೊಡುವ ಪ್ರಕಾರವೇ ಮಗನಿಗೂ ಮಾನಕೊಡಬೇಕೆಂದು ತಂದೆಯು ಅಪೇಕ್ಷಿಸುತ್ತಾನೆ"** – ಯೋಹಾನ 5:23 : ಮಲಾಕಿ 3:1.

'ಆರಾಧನೆ' (worship) ಎಂದು ಹೊಸ ಒಡಂಬಡಿಕೆಯಲ್ಲಿ ತರ್ಜುಮೆಗೊಂಡ ಗ್ರೀಕ್ ಪದವು Proskuneo ಎಂಬುದಾಗಿದ್ದು ಇದರ ಅರ್ಥ 'To kiss the hand' (ನಾಯಿಯು ತನ್ನ ಒಡೆಯನ ಕೈ ನೆಕ್ಕುವಂತೆ). ಇದು ಪೂಜ್ಯಭಾವನೆಯನ್ನು ವ್ಯಕ್ತಪಡಿಸುತ್ತದೆ.

ಹಳೆ ಒಡಂಬಡಿಕೆಯಲ್ಲಿ, ಆರಾಧನೆ ಎಂಬ ಪದವು ತರ್ಜುಮೆಗೊಂಡದ್ದು Shaw-kaw ಎಂಬ ಹಿಬ್ರೂ ಪದದಿಂದ. ಇದು ಬಾಗುವುದನ್ನು ಅಂದರೆ ಅಡ್ಡಬಿದ್ದು ನಮಸ್ಕರಿಸುವುದನ್ನು ಸೂಚಿಸುತ್ತದೆ ಮತ್ತು ಇದು ಪೂಜ್ಯ ಭಾವನೆಯನ್ನು ವ್ಯಕ್ತಪಡಿಸುತ್ತದೆ. ಈ ಪದವು 170 ಬಾರಿ ಕಂಡು ಬರುತ್ತದೆ. ಇದರಲ್ಲಿ ಒಂದರ್ಧ ಸಂಖ್ಯೆ ಮಾತ್ರ ದೇವರ ಆರಾಧನೆಯನ್ನು ಸೂಚಿಸುವುದಾಗಿದೆ. ಆದರೆ ಈ ಸತ್ಯವನ್ನು ಆಂಗ್ಲ ಓದುಗನಿಂದ ಮರೆಮಾಚಲಾಗಿದೆ. ಕಾರಣವೇನೆಂದರೆ, ಇದನ್ನು 74 ಸಾರಿ, ಈ ಲೋಕದ ಮಹಾನುಭಾವರಿಗೆ ಗೌರವಿಸಿದಾಗ ತಲೆಬಾಗು, ತನ್ನನ್ನು ಬಾಗಿಸಿಕೊಂಡನು, ಪೂಜ್ಯಭಾವನೆ ತೋರ್ಪಡಿಸಿದನು, ಪ್ರಣಾಮಮಾಡಿದನು ಅಥವಾ ನಮಸ್ಕರಿಸಿದನು ಮುಂತಾಗಿ ಉಪಯೋಗಿಸಲಾಗಿದೆ. ಇದಕ್ಕೆ ನಾವು ಈ ಕೆಳಗಿನ ಉದಾಹರಣೆಗಳನ್ನು ಕೊಡುತ್ತೇವೆ :

ಅಬ್ರಹಾಮನು **"ಕೂಡಲೇ ಅವರನ್ನು ಎದುರುಗೊಳ್ಳುವುದಕ್ಕೆ ಗುಡಾರದ ಬಾಗಿಲಿನಿಂದ ಓಡಿಹೋಗಿ ಬೊಗ್ಗಿ ನಮಸ್ಕರಿಸಿ (Shaw-kaw) – ಸ್ವಾಮೀ (Adonai) . . . ನೀರು ತರಿಸಿಕೊಡುತ್ತೇನೆ, ನಿಮ್ಮ ಕಾಲುಗಳನ್ನು ತೊಳೆದುಕೊಂಡು ಮರದ ನೆರಳಿನಲ್ಲಿ ವಿಶ್ರಮಿಸಿಕೊಳ್ಳಿರಿ"** (ಆದಿ. 18: 2–4). ಈ ಮಾತುಗಳನ್ನು, ಕ್ರಿಯೆಗಳನ್ನು ಆತನು ಅವರು ಕೇವಲ ಮೂರು ಮಂದಿಗಳಿದ್ದಾರೆಂದು ತಿಳಿದಾಗ ಮಾಡಿದನು.

ಇದೇ ರೀತಿಯಲ್ಲಿ ಲೋಟನು ಸಹಾ ಸಾಯಂಕಾಲದಲ್ಲಿ ಸೊದೋಮಿಗೆ ಬಂದ ದೂತರನ್ನು ಎದುರುಗೊಂಡು ಬೊಗ್ಗಿ ನಮಸ್ಕರಿಸಿದನು – ಆದಿ 19:1.

ಅಬ್ರಹಾಮನು ಹಿತ್ತೀಯ ದೇಶದವರಿಗೆ ಬೊಗ್ಗಿ ನಮಸ್ಕರಿಸಿದನು – ಆದಿ 23:7,12.

ಇಸಾಕನು ಯಾಕೋಬನನ್ನು ಆಶೀರ್ವದಿಸುತ್ತಾ **"ಪರಜನಗಳು ನಿನ್ನನ್ನು ಸೇವಿಸಲಿ; ಪರಕುಲಗಳು ನಿನಗೆ ಅಡ್ಡಬೀಳಲಿ (Shaw-kaw) ಎಂದು ಹೇಳುತ್ತಾನೆ. ನಿನ್ನ ತಾಯಿಯ ಮಕ್ಕಳು ನಿನಗೆ ಅಡ್ಡಬೀಳಲಿ** – ಆದಿ 27:29.

**"ದಾವೀದನೂ ಹೊರಗೆ ಬಂದು – ಅರಸನೇ ನನ್ನ ಒಡೆಯನೇ ಎಂದು ಕೂಗಿ. . . . ಅವನಿಗೆ ಸಾಷ್ಟಾಂಗ ನಮಸ್ಕಾರ (Shaw-kaw) ಮಾಡಿದನು"** – 1 ಸಮು. 24:8.

**"ಅಬೀಗೈಲಳು ದಾವೀದನನ್ನು ಕಂಡಕೂಡಲೇ ಕತ್ತೆಯಿಂದಿಳಿದು ಅವನಿಗೆ ಸಾಷ್ಟಾಂಗ ನಮಸ್ಕಾರ (Shaw-kaw) ಮಾಡಿದಳು'** – 1 ಸಮು. 25:23,41.

ತೆಕೋವದಿಂದ ಬಂದ ಬುದ್ಧಿವಂತಳಾದ ಸ್ತ್ರೀಯು ಅರಸನ ಹತ್ತಿರ ಹೋಗಿ ಅವನ ಮುಂದೆ ನೆಲಕ್ಕೆ ಬಿದ್ದು ನಮಸ್ಕರಿಸಿದಳು (did obeisance -Shaw-kaw) – 2 ಸಮು. 14:4, 22,23.

ಮೆಫೀಬೋಶೆತನು ಬಂದಾಗ ದಾವೀದನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು (did reverence -Shaw-kaw) – 2 ಸಮು. 9:6.

ಈ ನಿದರ್ಶನಗಳಿಂದ ಮೊದಲನೆಯ ಆಜ್ಞೆಯಲ್ಲಿನ **"ನೀವು ಅವುಗಳಿಗೆ ಅಡ್ಡಬೀಳಲೂ (Shaw-kaw) ಬಾರದು, ಪೂಜೆಮಾಡಲೂ ಬಾರದು"** (ವಿಮೋ. 20:5) ಎಂಬ ನಿಷೇದವು ಗೌರಾವಾನ್ವಿತರ ಇಲ್ಲವೇ ಜನರಲ್ಲಿ ಗೌರವ ಸ್ಥಾನದಲ್ಲಿರುವವರ ಸನ್ಮಾನ, ಇಲ್ಲವೇ ಗೌರವಾರ್ಪಣೆ ಮುಂತಾದವುಗಳ ನಿಷೇಧವೆಂಬ ಅರ್ಥವಲ್ಲ, ಅಥವಾ ಅದು ಹಾಗೆ ಅರ್ಥ ಮಾಡಿಕೊಳ್ಳಲಿಕ್ಕಾಗಿ ಇರುವುದಲ್ಲ ಎಂಬುದು ಸ್ಪಷ್ಟವಾಗುತ್ತದೆ. ಯೆಹೂದ್ಯರು ಯೆಹೋವನ ಸಂದೇಶಗಳನ್ನು ಹೊತ್ತುತಂದ ದೇವದೂತರುಗಳನ್ನು ಸನ್ಮಾನಿಸುವ ಮೂಲಕ ಯಾವ ತಪ್ಪನ್ನೂ ಮಾಡಲಿಲ್ಲ ಮತ್ತು ಅಂಥಾಃ ಸನ್ಮಾನವು ಒಪ್ಪತಕ್ಕದ್ದಾಗಿದೆಯೇ ಹೊರತು ಎಂದಿಗೂ ಆಕ್ಷೇಪಾರ್ಹವಲ್ಲ. ಈ ಆಜ್ಞೆಯು ವಿಗ್ರಹಾರಾಧನೆಯ ಅಥವಾ ಬೇರೆಯಾವುದೇ ಪ್ರತಿದ್ವಂದಿ ದೇವರುಗಳನ್ನು ಆರಾಧಿಸುವುದರ ವಿರುದ್ಧವಾಗಿ ನಮ್ಮನ್ನು ಎಚ್ಚರಿಸುತ್ತದೆ. ಇದನ್ನು ಯೆಹೋವನು ಸಹಿಸುವವನಲ್ಲ. ಆದುದರಿಂದ ಯಾವುದೇ ಯೆಹೂದ್ಯನು ಯೇಸುವನ್ನು **"ದೇವರಿಂದ ಕಳುಹಿಸಲ್ಪಟ್ಟವನು"** ಎಂದು ಭಾವಿಸಿ ಆತನಿಗೆ ಗೌರವತೋರಿಸಿದರೆ, ನಮಸ್ಕರಿಸಿದರೆ ಅದು ಅನುಚಿತವೆನಿಸುವುದಿಲ್ಲ. ಮತ್ತು ಯಾರಾದರೂ ಈ ರೀತಿಮಾಡುವುದರಿಂದ ನಮ್ಮ ಕರ್ತನಾದ ಯೇಸುವು ಹೇಳಿಕೊಳ್ಳುವ ಪ್ರಕಾರ ಆತನನ್ನು 'ದೇವರ ಕುಮಾರನು' ಎಂದು ಮಾನ್ಯಮಾಡಿದಂತಾಗುತ್ತದೆ.

ವಾಸ್ತವವಾಗಿ, ನಮ್ಮ ಕರ್ತನು ತನ್ನನ್ನು 'ದೇವರ ಕುಮಾರ'ನೆಂದು ಹೇಳಿಕೊಂಡಾಗ ಆ ಫರಿಸಾಯರು ಆತನನ್ನು ಕೊಲ್ಲಲು ಕಲ್ಲುಗಳನ್ನು ಕೈಗೆತ್ತಿಕೊಂಡದ್ದು

ಎಲ್ಲೆಮೀರಿದ ಕ್ರೂರತನವಾಗಿದೆ. ಅವರುಗಳು ನಮ್ಮ ಕರ್ತನನ್ನು ಕೊಲ್ಲುವುದು ಮಾತ್ರವಲ್ಲ ಆತನ ಆರಾಧಕರು ಈ ರೀತಿಯ ಉತ್ತುಂಗ ಆರಾಧನೆ ಅಥವಾ ಪೂಜ್ಯ ((proskuneo) ವರ್ತನೆಯನ್ನು ಪ್ರದರ್ಶಿಸಿದ್ದರೆ ಅವರನ್ನು ಸಹಾ ಮೂರ್ತಿ ಪೂಜಕರೆಂದು ಕೊಲ್ಲುತ್ತಿದ್ದರು. ಈ ಮಾತುಗಳ ಅತಿರೇಖವಾದ ಅರ್ಥವನ್ನು ಗೌರವಿಸುವವರನ್ನು ನಾವು ಪ್ರತಿಭಟಿಸುತ್ತೇವೆ ಮತ್ತು ತಪ್ಪಿತಸ್ಥರೆಂದು ರುಜುವಾತುಪಡಿಸುತ್ತೇವೆ.

ಈ ಸ್ವಚ್ಛಂದಕ್ಕೆ ವಿನಾಯತಿಯೆಂದರೆ, ಯಾರಿಗೆ ಗೌರವ, ಪ್ರಣಾಮ ಅಥವಾ ಆರಾಧನೆ ಸಲ್ಲೋಣವಾಗುತ್ತದೋ ಅವರು ಸುಳ್ಳುದೇವತೆಗಳ – ಸುಳ್ಳು ದೇವರ ಅಥವಾ ಸುಳ್ಳು ಕ್ರಿಸ್ತನ ಪ್ರತಿನಿಧಿಗಳಾಗಿರುತ್ತಾರೆ. ಅವರು ಕ್ರಿಸ್ತ ವಿರೋಧಿಗಳು. ಪೋಪರಿಗೆ ಗೌರವ ತೋರುವುದು ಈ ರೀತಿಯ ಸುಳ್ಳು ಅಥವಾ ತಪ್ಪಾದ ಆರಾಧನೆಯಾಗಿದೆ ಎಂದು ನಾವು ನಂಬುತ್ತೇವೆ. ಯಾಕೆಂದರೆ ಆತನ ಸ್ಥಾನದಲ್ಲಿ ಆತನು ತಾನು ಕ್ರಿಸ್ತನ ಪ್ರತಿಹಸ್ತಕನೆಂದು ಹೇಳಿಕೊಳ್ಳುತ್ತಾನೆ. ಈ ನೆಲೆಯ ಮೇಲೆ ನಮ್ಮ ಕರ್ತನಾದ ಯೇಸುವು ಸೈತಾನನು ಮತ್ತು ಈ ಲೋಕದ ಮೇಲೆ ಆತನ ಮಹಾ ಅಧಿಕಾರಶಕ್ತಿಯನ್ನು ಒಪ್ಪಿಕೊಳ್ಳಲಿಲ್ಲ. ಅದೊಂದು ಕ್ರಿಯಾತ್ಮಕವಾದ ದುಷ್ಟಶಕ್ತಿಯಾಗಿದ್ದು ಯೆಹೋವನ ನಿಯಮಗಳ ವಿರೋಧವಾಗಿ ವಿನ್ಯಾಸಗೊಂಡದ್ದಾಗಿತ್ತು. ಈ ರೀತಿಯಲ್ಲಿ, ಕೆಡುಕನ್ನು ವಿರೋಧಿಸದೆ, ಈಗಾಗಲೇ ಸೈತಾನನ ಆಡಳಿತದಲ್ಲಿ ಸ್ಥಾಪಿತವಾಗಿರುವ ದುಷ್ಟ ಪದ್ದತಿಗಳನ್ನು ಗೌರವಿಸುವುದು ನಮ್ಮ ಕರ್ತನ ರಾಜ್ಯವನ್ನು ಸ್ಥಾಪಿಸಲು ಸಹಕಾರಿಯಾಗುವುದೆಂಬ ಪ್ರಸ್ತಾಪವು ಒಮ್ಮೆಗೇ ಇಳಿಮುಖವಾಗಿ, ಸೂಚಿತವಾದ ಉತ್ತರವೇನೆಂದರೆ, – ನಾನು ಯೆಹೋವ ದೇವರ ಸಂಪೂರ್ಣ ಅನುಗ್ರಹದಲ್ಲಿದ್ದೇನೆ. ನೀನು ಇಚ್ಛೆಯಿಂದ ವಿರೋಧಿಯಾಗಿರುವ ಪ್ರಯುಕ್ತ ನಾನು ನಿನ್ನನ್ನು ನಿನ್ನ ವಿಧಾನಗಳನ್ನು ಗೌರವಿಸುವುದಿಲ್ಲ, ಅಥವಾ ನಿನ್ನ ಉದ್ದೇಶಗಳಿಗೆ ಸೇವೆ ಸಲ್ಲಿಸುವುದಿಲ್ಲ ಅಥವಾ ಸಹಕರಿಸುವುದಿಲ್ಲ. ನಿನ್ನ ಉದ್ದೇಶಗಳು ಸ್ಪಷ್ಟವಾಗಿ ಬೇರೆಯದಾಗಿದೆ. ನಿನ್ನೊಡನೆ ನನಗೇನೂ ಇಲ್ಲ. ಆದುದರಿಂದ ಪ್ರವಾದಿಯ ಪ್ರಕಟನೆಯಾದ **"ನೀನು ನಿನ್ನ ದೇವರಾದ ಯೆಹೋವನಿಗೆ ಅಡ್ಡಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು"** (ಮತ್ತಾಯ 4:10, ಧರ್ಮೋ. 10:20,21 ಹೋಲಿಸಿ ನೋಡಿ) ಎಂಬುದಕ್ಕೆ ಸಂಪೂರ್ಣವಾಗಿ ಒಡಂಬಡುತ್ತೇನೆ ಎಂಬುದೇ.

ನಮ್ಮ ಕರ್ತನಾದ ಯೇಸು ತನ್ನನ್ನು ದೇವರ ಕುಮಾರನು ಅಥವಾ ಆತನ ಸೇವಕನು ಎಂದೆಣಿಸದೆ ಯೆಹೋವನಿಗೆ ಪ್ರತಿದ್ವಂದಿಯಾಗಿ ಮಾಡಿಕೊಂಡಿದ್ದರೆ, ಆತನಿಗೆ ತೋರುವ ಯಾವುದೇ ಗೌರವವು, ತಂದೆಗೆ ತೋರುವ ಅಗೌರವವಾಗುತ್ತಿತ್ತು ಮತ್ತು ಇದು ಪಾಪಮಯವಾದ ವಿಗ್ರಹಾರಾಧನೆ ಎಂದೆನಿಸುತ್ತಿತ್ತು. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಯೇಸು ತಾನು ದೇವಕುಮಾರನು ಎಂಬ ಗೌರವವನ್ನು ಅಂಗೀಕರಿಸುವಾಗ, ಹೆಚ್ಚಿನ ನಿಖರತೆಯುಳ್ಳವನಾಗಿ **"ತಂದೆಯು ನನಗಿಂತ ದೊಡ್ಡವನು"** ಎಂದು ಅರಿಕೆಮಾಡಿದ್ದಾನೆ ಮತ್ತು ಆತನ ಶಿಷ್ಯರುಗಳಿಗೆ ಎಲ್ಲಾ ವಿಜ್ಞಾಪನೆಗಳನ್ನು ತಂದೆಗೆ ಮಾಡುವವರಾಗಿ "ನೀವು ತಂದೆಯನ್ನು ಏನಾದರೂ ಬೇಡಿಕೊಂಡರೆ ಅದನ್ನು ಆತನು ನನ್ನ ಹೆಸರಿನ ಮೇಲೆ ನಿಮಗೆ ಕೊಡುವನು" ಎಂದು ಬೋಧಿಸಿದ್ದಾನೆ – ಯೋಹಾನ 16:23.

## "ನಾನೂ ತಂದೆಯೂ ಒಂದಾಗಿದ್ದೇವೆ" (ಯೋಹಾನ 10:30)

**"I and My Father are One"** (John. 10:30)

ನಮ್ಮ ಕರ್ತನಾದ ಯೇಸುಕ್ರಿಸ್ತನಿಗೆ 'ಯೆಹೋವ' ಎಂಬ ನಾಮವನ್ನು ನೀಡಲು ಅರ್ಹವನ್ನಾಗಿಸುವುದಕ್ಕೆ ಮತ್ತು ಆತನೇ ತಂದೆಯೂ, ಮಗನೂ ಆಗಿದ್ದಾನೆ – ಅಥವಾ ಆತನಿಗೆ ತಂದೆಯೂ ಇಲ್ಲ ಆತನು ಮಗನೂ ಅಲ್ಲ ಎಂಬುದಕ್ಕೆ. ಈ ವಾಕ್ಯಭಾಗವನ್ನು ರುಜುವಾತು ಎಂದು ಪರಿಗಣಿಸಲಾಗುತ್ತಿದೆ.

ತ್ರಯೇಕತ್ವದ ಬಗ್ಗೆ ಒಂದು ಅಸ್ಪಷ್ಟವಾದ, ನಿಗೂಢವಾದ ಆಲೋಚನೆಗಳನ್ನು ಹೊಂದಿರುವವರು, ಗಣನೀಯವಾಗಿ ಹೆಚ್ಚಿನ ಸಂಖ್ಯೆಯಲ್ಲಿರುವ ಅನ್ಯಥಾ ಬುದ್ದಿವಂತರು ಏಕತ್ವವಲ್ಲದ ಬೇರೆ ರೀತಿಯ ಏಕತ್ವಗಳೂ ಇರುವುದನ್ನು ಮರೆತಿರುವಂತೆ ತೋರಿಬರುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ, ಹೇಗಾದರೂ, ಈ ಪದದ ಇನ್ನಿತರ ಎಲ್ಲಾ ಉಪಯೋಗಗಳಲ್ಲಿ ಕಂಡುಬರುವ ಆಲೋಚನೆ ಸಾಮರಸ್ಯ – ಯೋಜನೆಯಲ್ಲಿ, ಉದ್ದೇಶದಲ್ಲಿ, ಚಿತ್ತ ಮತ್ತು ಮನಸ್ಸಿನಲ್ಲಿ ಇರುವ ಏಕತೆ ಅಥವಾ ಏಕರೂಪತೆ. ಒಂದು ವಿಚಾರಣಸರಣಿಯು ನಮ್ಮನ್ನು ಎಷ್ಟರ ಮಟ್ಟಿಗೆ ಕುರುಡರನ್ನಾಗಿ ಮಾಡಬಹುದು ಎಂಬುದು ತಾನೂ ತಂದೆಯೂ ಯಾವ ರೀತಿಯಲ್ಲಿ ಒಂದಾಗಿದ್ದೇವೆ ಎಂಬುದರ ಬಗ್ಗೆ ನಮ್ಮ ಕರ್ತನ ಸ್ವಂತ ವಿವರಣೆಗಳಿಂದ ನಿರೂಪಿಸಬಹುದು ಎಂಬುದನ್ನು ಸಾಮಾನ್ಯವಾಗಿ ಉದಾಸೀನ ಮಾಡಲಾಗುತ್ತಿದೆ. ಆತನು ತಂದೆಗೆ ಮಾಡಿದ ಪ್ರಾರ್ಥನೆಯಲ್ಲಿ ಹೇಳಿದ್ದೇನೆಂದರೆ :– **"ನಾನು ಇವರಿಗೋಸ್ಕರ ಕೇಳಿಕೊಳ್ಳುತ್ತೇನೆ; ಲೋಕಕ್ಕೋಸ್ಕರ ಕೇಳಿಕೊಳ್ಳದೆ ನೀನು ನನಗೆ ಕೊಟ್ಟವರಿಗೋಸ್ಕರವೇ ಕೇಳಿಕೊಳ್ಳುತ್ತೇನೆ; ಅವರು ನಿನ್ನವರಾಗಿದ್ದಾರೆ** . . .. . . . **ಆದರೆ ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ** . .

**ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವಪ್ರಕಾರ . . . ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂತಲೂ . . . . . . . . ಪ್ರಾರ್ಥಿಸುತ್ತೇನೆ "** – ಯೋಹಾನ 17: 9, 20–23.

ಇಲ್ಲಿ ನಮ್ಮ ಕರ್ತನು ಬೇಡಿಕೊಂಡ ಸಭೆಯ ಏಕತೆಯು ತಂದೆ ಮತ್ತು ಮಗನ ನಡುವಿನ ಏಕತೆಯಂತೆಯೇ ಇರಬೇಕೆಂದು ವಿಶೇಷವಾಗಿ ಹೇಳಲಾಗಿದೆ. ಸಭೆಯ ಏಕತೆಯೆಂದರೆ, ಮನಸ್ಸಿನ ಏಕತೆಯೇ ಹೊರತು ವ್ಯಕ್ತಿಗತವಾದ ಏಕತೆ ಅಲ್ಲ ಎಂಬುದಕ್ಕೆ ಯಾವ ವಾದವೂ ಅಗತ್ಯವಿಲ್ಲ. ನಿಶ್ಚಯವಾಗಿಯೂ ನಮ್ಮ ವಿಮೋಚಕನ ಮನಸ್ಸಿನಲ್ಲಿರುವ ಸ್ಪಷ್ಟವಾದ ಆಲೋಚನೆಯೆಂದರೆ ಆತನ ಅನುಯಾಯಿಗಳಲ್ಲಿರ ಬೇಕಾದ ಹೃದಯದ ಏಕತೆ, ಉದ್ದೇಶದ ಏಕತೆ, ಚಿತ್ತದ ಏಕತೆ ; ಮತ್ತು ಈ ಏಕತೆಯು ತಂದೆ ಮತ್ತು ತನ್ನ ನಡುವಣ ಇರುವ ಏಕತೆಗೆ ಸಮವಾಗಿದೆ. ಇಂಥಾಃ ಏಕತೆಯನ್ನು ಸಭೆಯು ತಂದೆ ಮತ್ತು ಮಗನು ಏಕತೆಯನ್ನು ಹೊಂದಿಕೊಂಡ ರೀತಿಯಲ್ಲಿಯೇ ಹೊಂದಿಕೊಳ್ಳಬೇಕು. ಮಗನು ತಂದೆಯೊಂದಿಗೆ ಒಂದಾಗಿದ್ದಾನೆ. ಯಾಕೆಂದರೆ, ಆತನು ತನ್ನ ತಂದೆಯ ಚಿತ್ತವೇ ತನ್ನ ಚಿತ್ತವೆಂದು ಸಂಪೂರ್ಣವಾಗಿ ಒಪ್ಪಿಕೊಂಡವನಾಗಿ "ನನ್ನ ಚಿತ್ತದಂತಲ್ಲ, ನಿನ್ನ ಚಿತ್ತದಂತೆಯೇ ಆಗಲಿ" ಎಂದು ಹೇಳಿದ್ದಾನೆ, ಆದುದರಿಂದ ಸಭೆಯ ಪ್ರತಿಯೊಬ್ಬ ಸದಸ್ಯನೂ ತನ್ನ ಸ್ವಂತ ಚಿತ್ತವನ್ನು ನೆರವೇರಿಸದೆ, ಅದನ್ನು ಬದಿಗಿರಿಸಿ ಕ್ರಿಸ್ತನ ಚಿತ್ತವನ್ನು ಮತ್ತು ತಂದೆಯ ಚಿತ್ತವನ್ನು ನೆರವೇರಿಸುವುದರ ಮೂಲಕ ತಂದೆಯೊಂದಿಗೆ, ಮತ್ತು ಮಗನೊಂದಿಗೆ ಪರಿಪೂರ್ಣವಾದ ಸಾಮರಸ್ಯಕ್ಕೆ ಬರಬೇಕು ಮತ್ತು ಈ ರೀತಿಯಾಗಿ ಮಾತ್ರವೇ ತಾನು ತನ್ನ ತಂದೆಯೂ ಒಂದಾಗಿರುವಂತೆ ಅವರೂ (ಸಭೆಯವರೂ) ಒಂದಾಗಿರಬೇಕೆಂದು ನಮ್ಮ ಕರ್ತನು ಬೇಡಿಕೊಂಡಂತೆ ಸಭೆಯು ಸದಾ ಒಂದಾಗಿರಲು ಸಾಧ್ಯ. ತಮ್ಮ ವಿವೇಚನಾರಹಿತವಾದ, ಮತ್ತು ಸತ್ಯವೇದದಲ್ಲಿರದ 'ಒಂದೇ ವ್ಯಕ್ತಿಯಲ್ಲಿ ಮೂರು ದೇವರುಗಳು' ಎಂಬ 'ತ್ರೈಯೇಕತ್ವ' ವನ್ನು ಬೆಂಬಲಿಸುವ ಸಲುವಾಗಿ ನಮ್ಮ ಕರ್ತನ ಈ ಮಾತುಗಳನ್ನು ಯಾರಾದರೂ ತಪ್ಪಾಗಿ ಉಪಯೋಗಿಸುವುದಾಗಲೀ, ಅದನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನವಾಗಲೀ ಎಷ್ಟೋ ವಿಚಿತ್ರವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಸತ್ಯವೇದದಲ್ಲಿನ ತಂದೆಯ, ಕುಮಾರ ಮತ್ತು ಸಭೆಯ ಆತ್ಮದ ಏಕತೆಯು ಎಷ್ಟೋ ಸುಂದರವೂ ವಿವೇಚನಾಯುತವೂ ಆಗಿದೆ.

## "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" (ಯೋಹಾನ 14:9)

## "He That hath Seen Me hath Seen the Father" (John. 14:9)

ನಮ್ಮ ಕರ್ತನೂ **"ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ, ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವುದಿಲ್ಲ. ನೀವು ನನ್ನನ್ನು ಅರಿತಿದ್ದರೆ ನನ್ನ ತಂದೆಯನ್ನೂ ಅರಿಯುತ್ತಿದ್ದಿರಿ"** (ಯೋಹಾನ 14:6,7) ಎಂಬುದನ್ನು ಪ್ರಕಟಿಸಿದ ಮೇಲೆ ಫಿಲಿಪ್ಪನು **"ಸ್ವಾಮೀ, ನಮಗೆ ತಂದೆಯನ್ನು ತೋರಿಸು, ನಮಗೆ ಅಷ್ಟೇ ಸಾಕು"** (ವ. 8) ಎನ್ನುತ್ತಾನೆ. ಇದಕ್ಕೆ ಉತ್ತರವಾಗಿ ಯೇಸು **"ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದರೂ, ನೀನು ಇನ್ನೂ ನನ್ನನ್ನು ಅರಿತುಕೊಳ್ಳಲಿಲ್ಲವೇ? ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ. ನನಗೆ ತಂದೆಯನ್ನು ತೋರಿಸೆಂದು ನೀನು ಹೇಳುವುದು ಹೇಗೆ? ನಾನು ತಂದೆಯಲ್ಲಿದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆ ಎಂದು ನೀನು ನಂಬುವುದಿಲ್ಲವೋ? ನಾನು ನಿಮಗೆ ಹೇಳುವ ಮಾತುಗಳನ್ನು ನನ್ನಷ್ಟಕ್ಕೆ ನಾನೇ ಆಡುವುದಿಲ್ಲ ; ತಂದೆಯು ನನ್ನಲ್ಲಿ ಇದ್ದುಕೊಂಡು ತನ್ನ ಕ್ರಿಯೆಗಳನ್ನು ನಡೆಸುತ್ತಾನೆ. ನಾನು ತಂದೆಯಲ್ಲಿದ್ದೇನೆ ತಂದೆಯು ನನ್ನಲ್ಲಿದ್ದಾನೆಂಬುವ ನನ್ನ ಮಾತನ್ನು ನಂಬಿರಿ; ಇಲ್ಲದಿದ್ದರೆ ಆ ಕ್ರೀಯೆಗಳನ್ನು ನೋಡಿ ನನ್ನ ಮಾತನ್ನು ನಂಬಿರಿ"** (ವ. 9–11) ಎಂದೆನ್ನುತ್ತಾನೆ.

ನಮ್ಮ ಕರ್ತನಾದ ಯೇಸುಕ್ರಿಸ್ತನ ಈ ಮಾತುಗಳನ್ನು ಆತನೇ **'ಯೆಹೋವ'** (ಯೆಹೋವನ ಮಗನಲ್ಲ) ಎಂಬುದಕ್ಕೆ ಸಾಕ್ಷಿಯನ್ನಾಗಿಸಿದೆ ಮತ್ತು ಈ ಕಾರಣದಿಂದ **'ಯೆಹೋವ'** ಎಂಬ ನಾಮವು ಉಚಿತವಾಗಿ ಆತನಿಗೆ ಅನ್ವಯವಾಗುತ್ತದೆ ಎಂದು ಒಪ್ಪಿಕೊಳ್ಳುವಂತೆ ನಮಗೆ ಹೇಳಲಾಗುತ್ತಿದೆ. ಆದರೆ, ಎಲ್ಲರೂ ಗಮನಿಸ ಬೇಕಾದುದೇನೆಂದರೆ, ಈ ಪೂರ್ಣವಾದ ಸನ್ನಿವೇಶದಲ್ಲಿ ನಾವು ತಂದೆಗೂ, ಮಗನಿಗೂ ಇರುವ ವ್ಯತ್ಯಾಸಗಳನ್ನು ಗುರುತಿಸಬಹುದು. ಆದುದರಿಂದ ಇದರಿಂದ ತ್ರೈಯೇಕತ್ವವಾದಿಗಳು ಬಯಸುವ ಅಭಿಪ್ರಾಯವನ್ನು ಸೆಳೆಯಲು ವ್ಯಕ್ತಪಡಿಸುವ ಮನಸ್ಸಿದ್ದರೆ ಯಾವುದೇ ವಿವೇಚನೆಯುಳ್ಳ ವ್ಯಕ್ತಿಯೂ ಇದನ್ನು ಉಪಯೋಗಿಸುವುದಿಲ್ಲ. ಆದುದರಿಂದ ಪೂರ್ಣವಾದ ಪ್ರಶ್ನೆಯೆಂದರೆ, ಈ ಮಾತುಗಳಿಂದ ನಾವು ಏನು ಅರ್ಥಮಾಡಿಕೊಳ್ಳಬೇಕೆಂದು ನಮ್ಮ ಕರ್ತನು ಬಯಸುತ್ತಾನೆಂದರೆ "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" ಎಂದೋ ? ಇದಕ್ಕೆ ನಮ್ಮ ಉತ್ತರವೆಂದರೆ, ಯಾವ ಮನುಷ್ಯನೂ (ಮಾಂಸಧಾರಿಯಾದ, ಈ ಲೋಕದ ಶರೀರ ಹೊಂದಿದ) ತಂದೆ ದೇವರ ಆತ್ಮಿಕ ದೇಹವನ್ನು ನೋಡಲು ಸಾಧ್ಯವಿಲ್ಲ.

ಹೀಗೆಂದು ಅಪೋಸ್ತಲನಾದ ಯೋಹಾನನು ತಾನೇ ಸಾಕ್ಷಿಹೇಳಿದ್ದಾನೆ – **“ದೇವರನ್ನು ಯಾರೂ ಎಂದೂ ಕಂಡಿಲ್ಲ; ಯಾವನು ಏಕಪುತ್ರನೂ, ಸ್ವತಃ ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು”** (ಯೋಹಾನ 1:18, ರೋಥರ್‌ಹ್ಯಾಮ್ಸ್ ಭಾಷಾಂತರ). ಕರ್ತನು ಮೋಶೆಗೆ “ನನ್ನ ಮುಖವನ್ನು ನೋಡಿದವರು ಯಾರೂ ಬದುಕುಳಿಯಲಾರರು” ಎಂಬುದನ್ನು ಅವರು ಅರ್ಥಮಾಡಿಕೊಳ್ಳ ಬೇಕೆಂದು ಬಯಸಿದನು. ಹೀಗಾಗಿ, ತಂದೆಯು ತನ್ನನ್ನು ಮಾನವರಿಗೆ ತೋರಿಸಿಕೊಂಡಲ್ಲಿ , ಅದು ಒಂದೋ ಅದ್ಬುತವಾದ ರೀತಿಯಲ್ಲಿ ಆತನ ಆತ್ಮೀಕ ಕಣ್ಣುಗಳನ್ನು ತೆರೆದು ಆತನ ಆತ್ಮಿಕ ಮಹಿಮೆಯನ್ನು ಗ್ರಹಿಸಿಕೊಳ್ಳುವಂತೆ (ಈ ರೀತಿಯಾಗಿ ಮನುಷ್ಯನು ಮರಣಕ್ಕೆ ಗುರಿಮಾಡಿಕೊಳ್ಳುತ್ತಾನೆ) ಅಥವಾ ಆತನು ತನ್ನನ್ನು ಮಾಂಸಧಾರಿ ದೇಹದಲ್ಲಿ ಪ್ರಕಟಿಸಿಕೊಳ್ಳುವುದು – ಈ ರೀತಿಯಲ್ಲಿ ಮಾನವನು ಆತನೊಂದಿಗೆ ಸಂಪರ್ಕಿಸಿ, ಹೊಕ್ಕುಬಳಿಕೆ ಮಾಡಿ ಆತನ ಗುಣಲಕ್ಷಣಗಳಲ್ಲಿ ಕೆಲವನ್ನು ಅರ್ಥಮಾಡಿಕೊಳ್ಳುವುದು.

ದೇವರು ಮಾಡಿದ್ದು ಇದೇ ಅಲ್ಲವೋ? ದೇವರ ಮನಸ್ಸು, ದೇವರ ಚಿತ್ತ ಇವುಗಳೆಲ್ಲವೂ ಆತನು ಪಡೆದ ಏಕೈಕ ಕುಮಾರನಾದ ನಮ್ಮ ಕರ್ತನಲ್ಲಿ ಆತನು ಮಾನವ ಶರೀರಧಾರಿಯಾಗಿ ಮಾನವರ ಮಧ್ಯೆ ವಾಸಮಾಡಿದಾಗ ಪೂರ್ಣವಾಗಿ ಪ್ರತಿನಿಧಿಸಲ್ಪಟ್ಟಿತು. ಆದುದರಿಂದ, ಆತನು ಎಂದೆಂದಿಗೂ ಮಾನವ ಜಾತಿಗೆ ನೀಡಲ್ಪಟ್ಟ ಅತ್ಯುತ್ತಮನಾದ, ಅತ್ಯಂತ ನಿಕಟನಾದ, ದೇವರ ನಿಶ್ಚಿತ ರೂಪದ ಪ್ರತಿನಿಧಿಯಾಗಿರುತ್ತಾನೆ. ಕರ್ತನಾದ ಯೇಸುವನ್ನು ನೋಡುವುದರಿಂದ ಮತ್ತು ನಿಕಟವಾಗಿ ಅರ್ಥ ಮಾಡಿಕೊಳ್ಳುವುದರಿಂದ ಫಿಲಿಪ್ಪನು ಮತ್ತು ಉಳಿದ ಅಪೋಸ್ತಲರುಗಳು ತಂದೆಯಾದ ದೇವರನ್ನು ಮಾನವರಿಗೆ ಸಾಧ್ಯವಾದ ನಿರಪೇಕ್ಷ ಅರ್ಥದಲ್ಲಿ ಅರ್ಥ ಮಾಡಿಕೊಂಡಿದ್ದಾರೆ. ದೇವರು, ಮನುಕುಲಕ್ಕೆ ಎಷ್ಟು ಸಾಧ್ಯವೋ ಅಷ್ಟು ಸಮಗ್ರವಾಗಿ ತಿಳಿಯಪಡಿಸಿದಷ್ಟು ಸಮಗ್ರವಾಗಿ ಅವರು ದೇವರನ್ನು ಅರಿತುಕೊಂಡರು. ಯೇಸುಕ್ರಿಸ್ತನೆಂಬ ವ್ಯಕ್ತಿಯ ಮೂಲಕವಾದ ಸ್ಪಷ್ಟವಾದ ದೇವರ ಪ್ರಕಟನೆಯು ಈ ಹಿಂದೆಯಾಗಲೀ, ಈಗಲಾಗಲೀ, ಮುಂದೆಯಾಗಲೀ ಇರುವುದಿಲ್ಲ : ಆತನು ಮಾಂಸಧಾರಿಯಾದಾಗ “ಆತನು ಶರೀರವಾಗಿ ಪ್ರಕಟಗೊಂಡ ದೇವರಾಗಿದ್ದನು” **“ಆತನು ಶರೀರಧಾರಿಯಾಗಿ ಪ್ರತ್ಯಕ್ಷನಾದನು”** (1 ತಿಮೋ. 3:16). ಇದೇ ರೀತಿಯಲ್ಲಿ ಅಪೋಸ್ತಲನು ಕ್ರಿಸ್ತನ ನಿಷ್ಠಾವಂತ ಅಂಗಗಳಿಂದ ಕೂಡಿದ ಸಭೆಯ ವಿಷಯದಲ್ಲಿಯೂ ಪ್ರಕಟಿಸುತ್ತಾನೆ. **“ಯೇಸುವಿನ ಜೀವವು ನಮ್ಮ ಮರ್ತ್ಯಶರೀರದಲ್ಲಿ ಉಂಟೆಂದು ತೋರಿಬರುವುದಕ್ಕಾಗಿ ಬದುಕಿರುವ ನಾವು ಯೇಸುವಿನ ನಿಮಿತ್ತ ಮರಣಕ್ಕೆ ಒಪ್ಪಿಸಲ್ಪಡುತ್ತಾ ಇದ್ದೇವೆ”** – 2 ಕೊರಿ 4:11.

ಸರ್ವಸಂಪೂರ್ಣನಾದ ಮನುಷ್ಯನು ಅಂದರೆ, ಅದೃಶ್ಯನಾದ ದೇವರ ಸರ್ವ ಸಂಪೂರ್ಣತೆಯ ಪ್ರತೀಕ ಎಂಬರ್ಥ. ಇದುವೇ ಪ್ರಸ್ತುತಿಪಡಿಸಬಹುದಾದ ಅತ್ಯುತ್ತಮವಾದ ಕಲ್ಪನೆ ಮತ್ತು ದೃಷ್ಟಾಂತ. ಅದೇ ರೀತಿಯಲ್ಲಿ ಮಿಲಿಯಾಂತರ ಯುಗದಲ್ಲಿ ಸರ್ವಸಂಪೂರ್ಣತೆ ಹೊಂದುವ ಅರ್ಹರಾದ ಪುರಾತನ ಪಿತೃಗಳು ಮಾನವರಲ್ಲಿ ಪರಲೋಕದ ತಂದೆಯ, ಪರಲೋಕದ ಮಗನ ಮತ್ತು ಮಗನ ಪರಲೋಕದ ಮದಲಗಿತ್ತಿಯಾಗಿ ಪ್ರತಿನಿಧಿಸಲ್ಪಡುತ್ತಾರೆ. ಅವರನ್ನು ನೋಡಿದವರು ದೇವರು ಮಾಂಸಧಾರಿಯಾಗಿ ಪ್ರತ್ಯಕ್ಷಗೊಂಡದ್ದನ್ನು – ದೇಹದಲ್ಲಿ ದೇವರ ಸ್ವರೂಪವನ್ನು ನೋಡುತ್ತಾರೆ. ನರಳಾಡುವ ಸ್ಥಿತಿ ಯಲ್ಲಿರುವವರೆಲ್ಲರೂ ಪುರಾತನ ಪಿತೃಗಳ ಮೂಲಕ ಸೇವೆಮಾಡುವ ರಾಜವಂಶಸ್ಥ ಯಾಜಕನ ಮತ್ತು ಆತನ ಸಹೋದರರುಗಳಾದ ಉಪಯಾಜಕರ ಮಾರ್ಗ ದರ್ಶನದಲ್ಲಿ ಈ ಉದಾತ್ತವಾದ ಸ್ಥಿತಿ ಹೊಂದಿಕೊಳ್ಳುವ ಸೌಭಾಗ್ಯ ಪಡಕೊಳ್ಳುತ್ತಾರೆ. ಅವರು ದೇವರ ರಾಜ್ಯದ ದೇಹಧಾರಿ ಪ್ರತಿನಿಧಿಗಳಾಗಿ ಭೂಮಿಯ ರಾಜಕುಮಾರರಂತಿರುತ್ತಾರೆ – ಕೀರ್ತನೆ 45:16.

## “ಭಾಗ್ಯವಂತನಾದ ಏಕಾಧಿಪತಿ – ಆ ಏಕಾಧಿಪತಿಯು ರಾಜಾಧಿರಾಜನೂ, ಕರ್ತರ ಕರ್ತನೂ, ತಾನೊಬ್ಬನೇ ಅಮರತ್ವವುಳ್ಳವನೂ, ಅಗಮ್ಯವಾದ ಬೆಳಕಿನಲ್ಲಿ ವಾಸಮಾಡುವವನೂ ಆಗಿದ್ದಾನೆ” – 1 ತಿಮೊಥೆ 6:15–16

**The Blessed and Only Potentate The King of Kings and Lord of Lords, who only hath Immortality** - 1 Tim 6:15,16

ಅನೇಕರು ಇದನ್ನು ನಮ್ಮ ಕರ್ತನಾದ ಯೇಸುವು ದ್ವಿತಿಯಾಗಮನದಲ್ಲಿ ಕಾಣಿಸಿಕೊಳ್ಳುವಾಗ ಪ್ರದರ್ಶಿಸುವ ಪರಲೋಕದ ತಂದೆಯ ಶ್ರೇಷ್ಠತೆ ಎಂದು ಪರಿಗಣಿಸುತ್ತಾರೆ. ಆದರೆ, ಈ ದೃಷ್ಟಿಕೋನದಲ್ಲಿ ಕೆಲವು ವಿವೇಚನಾ ಸಂಗತಿಗಳು ಇರಬಹುದಾದರೂ, ನಾವು ಇದನ್ನು ಕರ್ತನಾದ ಯೇಸುಕ್ರಿಸ್ತನ ಮಹಿಮೆ ಮತ್ತು ಗೌರವಕ್ಕೆ ಮಿಲಿಯಾಂತರ ಯುಗದ ಪ್ರಾರಂಭದ ದಿನದಿಂದಲೇ ಅನ್ವಯಿಸುವತ್ತ ವಾಲುತ್ತೇವೆ. ನಿಜವಾಗಿಯೂ, ತನ್ನ ಮಾರ್ಗವನ್ನು ಅಂಗೀಕರಿಸುವವರಿಗೆ ಆತನು ಯೆಹೋವ ದೇವರನ್ನು ಸಹಾ ಗ್ರಹಿಸುವಂತೆ ಮಾಡುತ್ತಾನೆ. ಆದರೆ ಇದು ಕಾಣಿಸಿಕೊಳ್ಳುವಾಗ ಅಲ್ಲ, ಆತನ ರಾಜ್ಯಭಾರದ ಅಂತ್ಯದಲ್ಲಿ ಆತನು ತನ್ನ ರಾಜ್ಯವನ್ನು ತಂದೆ ದೇವರಿಗೆ ಒಪ್ಪಿಸಿಕೊಡುವಾಗ – 1 ಕೊರಿಂಥ 15:24–28.

ಈ ವಾಕ್ಯವೃಂದವನ್ನು ತಂದೆ ದೇವರಿಗೆ ಅನ್ವಯಿಸಿದಲ್ಲಿ ನಮ್ಮ ಕರ್ತನ ಅಮರತ್ವವನ್ನು ಅಲ್ಲಗಳೆದಂತೆ ಆಗುತ್ತದೆ.

ಆದರೆ, ಪರಿಶುದ್ಧ ಗ್ರಂಥವು ಸ್ಪಷ್ಟವಾಗಿ ಹೇಳುವಂತೆ ಆತನು ಮತ್ತು ಆತನೊಂದಿಗೆ ಮೊದಲನೆಯ ಪುನರುತ್ಥಾನದಲ್ಲಿ ಭಾಗಿಯಾಗುವವರೆಲ್ಲರೂ ಆಗಲೇ ಅಮರತ್ವವನ್ನು ಪಡಕೊಳ್ಳುವರು ಮತ್ತು ಸ್ವತಃ ಜೀವ (ನಿರ್ಲಯತ್ವ – ಸ್ವಯಂ ಅಸ್ಥಿತ್ವ)ವುಳ್ಳ ದೇವರು ತನ್ನ ಮಗನೂ ಅದನ್ನು ಹೊಂದಿಕೊಳ್ಳಬೇಕೆಂದು ಆತನಿಗೂ ಸ್ವತಃ ಜೀವವನ್ನು (ನಿರ್ಲಯತ್ವ – ಸ್ವಯಂ ಅಸ್ಥಿತ್ವ) ದಯಪಾಲಿಸುತ್ತಾನೆ – 1 ಕೊರಿ. 15:42–44,53,54 ಮತ್ತು ಯೋಹಾನ 5:26.

ಆದರೆ ಈ ವಾಕ್ಯಭಾಗವನ್ನು ಮಗನಿಗೆ ಅನ್ವಯಿಸುವುದು ಎಲ್ಲ ಸ್ಥಿತಿಗೂ ಸಮರ್ಪಕವಾಗಿ ಹೊಂದಿಕೊಳ್ಳುವಂತೆ ಕಾಣುತ್ತದೆ ಮತ್ತು ಯಾವರೀತಿಯಲ್ಲಿಯೂ ಇದು ತಂದೆ ದೇವರನ್ನು ಯೆಹೋವನನ್ನು ನಿರ್ಲಕ್ಷಿಸುವುದಿಲ್ಲ – ಅಥವಾ ನಮ್ಮ ಕರ್ತನೇ ತಂದೆ ದೇವರಾದ ಯೆಹೋವನೆಂದು ರುಜುವಾತು ಪಡಿಸುವುದಿಲ್ಲ. – ಅದರಂತೆ ನಾವು ಅಂಥಾಃ ಎಲ್ಲಾ ಪ್ರಕರಣಗಳಲ್ಲಿ ಸ್ಫೂರ್ತಿಗೊಂಡ ಅಪೋಸ್ತಲನ ಅಚಲವಾದ ನಿಯಮವನ್ನು ನೆನಪು ಮಾಡಿ ಕೊಳ್ಳಬೇಕಾಗುತ್ತದೆ – ಏನೆಂದರೆ, ಮಗನ ಸಂಬಂಧವಾಗಿ ಹೇಳಿರುವ ಹೋಲಿಕೆ, ಗೌರವ ಮುಂತಾದವುಗಳಲ್ಲಿ ತಂದೆಯು ಯಾವಾಗಲೂ ಶಬ್ದಾತೀತನಾಗಿ ಎಲ್ಲದಕ್ಕಿಂತ ಮೇಲೆ ಹೊರತಾಗಿದ್ದಾನೆ. ಕರ್ತನಾದ ಯೇಸುವಿಗೆ ಸಂಬಂಧಿಸಿದ ವಿಷಯಗಳಲ್ಲಿ ಮತ್ತು ಆತನಿಗೆ ತಂದೆಯಾದ ದೇವರು ಅನುಗ್ರಹಿಸಿರುವ ವಿವಿಧ ಅಧಿಕಾರಗಳಲ್ಲಿ ಆತನನ್ನು ಪರಿಗಣಿಸಬಾರದು. ಮಗನು ಯಾವಾಗ ಈ ಲೋಕದಲ್ಲಿ ಪಾಪವನ್ನು ನಿಗ್ರಹಿಸುತ್ತಾನೋ ಆಗ ಮಗನೂ ತನ್ನನ್ನು ತಂದೆಗೆ ಅಧೀನಪಡಿಸಿಕೊಳ್ಳುವನು – 1 ಕೊರಿ 15:27.

ತಂದೆಯಾದ ದೇವರು ತನ್ನ ಮಗನ ರಾಜ್ಯಕ್ಕೆ ದಯಪಾಲಿಸಿರುವ ಅದೇ ರೀತಿಯಾದ ಮಹಿಮೆಯ ಬಗ್ಗೆ ಹೇಳಿಕೆಯೆಂದರೆ **"ಆತನು ಎಲ್ಲಾ ದೊರೆತನಗಳಿಗೂ ಅಧಿಕಾರಿಗಳಿಗೂ ಶಿರಸ್ಸು"** (ಕೊಲೊಸ್ಸೆ 2:10). ಇದಕ್ಕೆ ಉತ್ತರವು ಅದೇ ಆಗಿರುತ್ತದೆ. ತಂದೆಯ ರಾಜ್ಯಾಡಳಿತ ಮತ್ತು ಅಧಿಕಾರಗಳು ಮಗನ ಆಡಳಿತ, ಅಧಿಕಾರಕ್ಕೆ ಎಂದಿಗೂ ಭಿನ್ನವಾಗುವುದಿಲ್ಲ; ಯಾಕೆಂದರೆ, ಎರಡನೆಯವನು ಮೊದಲನೆಯವನೊಂದಿಗೆ ಒಂದಾಗಿದ್ದಾನೆ ಮತ್ತು ಆತನ ಪ್ರತಿನಿಧಿಯಾಗಿದ್ದಾನೆ.

## "ದೇವರಿಗೆ ಸಮಾನನಾಗಿರುವೆ ಎಂಬ ಆಲೋಚನೆಯು ಸುಲಿಗೆಯಲ್ಲ"

## "Thought it not Robbery to be Equal with God"

ಫಿಲಿಪ್ಪದವರಿಗೆ ಬರೆದ ಪತ್ರಿಕೆ 2:6 ರಲ್ಲಿ ನಮ್ಮ ಸಾಮಾನ್ಯ ಆಂಗ್ಲ ಭಾಷಾಂತರವು ಪ್ರತಿನಿಧಿಸುವಂತೆ **"ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನವಾಗಿರುವನೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು (Robbery) ಎಂದೆಣಿಸದೆ ತನ್ನನ್ನು ಬರಿದುಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು"**. ಈ ಹೇಳಿಕೆಯಲ್ಲಿ ಅಪೋಸ್ತಲನಾದ ಪೌಲನು "ಆತನು ದೇವಸ್ವರೂಪನು, ದೇವರಿಗೆ ಸರಿಸಮಾನನು" ಎಂಬ ದಿಗ್ಭ್ರಮೆಗೊಳಿಸುವ ಹೇಳಿಕೆಯಲ್ಲಿ **"ದೇವರೊಂದಿಗೆ ಸಮನಾಗಿರುವನೆಂಬ ಆಲೋಚನೆಯು ಸುಲಿಗೆಯಲ್ಲ"** ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾನೆ. ಮೊಟ್ಟಮೊದಲಿಗೆ, ನಾವು ಇಲ್ಲಿ ಗಮನಿಸಬೇಕಾದುದೇನೆಂದರೆ, ಈ ವಾಕ್ಯಭಾಗವು ಖಂಡಿತವಾಗಿಯೂ ನಮಗೆ **'ತ್ರೈಯೇಕತ್ವ'**ವನ್ನು ಬೋಧಿಸುವುದಿಲ್ಲ. ನಮ್ಮ ಕರ್ತನಾದ ಯೇಸುವು ತಂದೆ ದೇವರೂ ಅಲ್ಲ, ಯೆಹೋವನೂ ಅಲ್ಲ; ಹಾಗಿರುವುದಾದರೆ 'ಬಿಡಲೊಲ್ಲೆನು' ಎಂಬ ಸುಲಿಗೆಯೊಂದನ್ನು ಧ್ಯಾನಿಸುವ, ಅಥವಾ ಸಮಾನತೆಯನ್ನು ಪರಿಗಣಿಸುವ ಅವಕಾಶವಾದರೂ ಎಲ್ಲಿದೆ? 'ಸುಲಿಗೆ' ಮತ್ತು 'ಸರಿಸಮಾನ' ಎಂಬ ಈ ಪದಗಳು ನಿರ್ಧಿಷ್ಟವಾಗಿ ತಂದೆ ಮತ್ತು ಮಗನು ಒಂದೇ ವ್ಯಕ್ತಿಗಳಲ್ಲ ಎರಡು ವ್ಯಕ್ತಿಗಳಾಗಿದ್ದಾರೆ ಎಂದು ನಮಗೆ ಬೋಧಿಸುತ್ತವೆ. ಆದರೆ ಈ ಪ್ರಸ್ತಾಪದಲ್ಲಿ ನಮ್ಮ ಕರ್ತನ ಮಾತಿಗೂ, ಅಪೋಸ್ತಲನ ಮಾತುಗಳಿಗೂ ಇಷ್ಟೊಂದು ಭಿನ್ನತೆ ಇರುವುದು ಎಷ್ಟೋ ವಿಚಿತ್ರವಾಗಿದೆ! ಆತನು ಪ್ರಕಟಿಸಿದ್ದೇನೆಂದರೆ "ತಂದೆಯು ನನಗಿಂತ ದೊಡ್ಡವನು" "ನನ್ನಷ್ಟಕ್ಕೇ ನಾನು ಏನನ್ನೂ ಮಾಡುವುದಿಲ್ಲ"ಎಂಬುದಾಗಿ. ನಮ್ಮ ಕರ್ತನಾದ ಯೇಸುವು ತನ್ನ ದೀನತೆಯನ್ನು ಕಳೆದುಕೊಂಡು ನಂತರದಲ್ಲಿ ತನ್ನನ್ನು ತನ್ನ ತಂದೆಯಾದ ದೇವರಿಗೆ ಸರಿಸಮಾನನ್ನಾಗಿ ಮಾಡಿಕೊಂಡನೋ? ಎಂದು ನಾವು ಪ್ರಶ್ನಿಸುತ್ತೇವೆ.

ಆದರೆ, ಎರಡನೆಯದಾಗಿ, ಇಂಥಾಃ ದೃಷ್ಟಿಕೋನವು ಅಪೋಸ್ತಲನು ನಮಗೆ ಬೋಧಿಸಲು ಬಯಸಿದ ಬೋಧನೆಯೊಂದಿಗೆ ಎಷ್ಟರಮಟ್ಟಿಗೆ ಘರ್ಷಣೆಯಿಂದೊಡ ಗೂಡಿದೆ ಎಂಬುದನ್ನು ನಾವು ಗಮನಿಸಬಹುದು. ಸಭೆಯು ತಂದೆಯ ಮಹಿಮೆಯನ್ನು ಅಥವ ಪರಸ್ಪರ ಗೌರವವನ್ನು ಹಂಬಲಿಸಿ ಅದನ್ನು ಪಟ್ಟುಹಿಡಿಯುವಂತೆ ಅಪೋಸ್ತಲನು ಬಯಸುತ್ತಾನೆಂದು ಹೇಳಬಹುದೋ? ಖಂಡಿತ ವಾಗಿಯೂ ಇಲ್ಲ! ಇದಕ್ಕೆ ವ್ಯತಿರಿಕ್ತವಾಗಿ, ಆತನು ಒಣಜಂಬದ ಮಹಿಮೆಯ ವಿರುದ್ಧವಾಗಿ ಮತ್ತು ಮನಸ್ಸಿನಲ್ಲಿ ತಗ್ಗಿಸಿಕೊಳ್ಳುವುದರ ಪರವಾಗಿ, ಪ್ರತಿಯೊಬ್ಬರೂ ಮತ್ತೊಬ್ಬರನ್ನು ತನಗಿಂತ ಹೆಚ್ಚಾಗಿ ಗೌರವಿಸಬೇಕು ಎಂಬುದನ್ನು ಒತ್ತಾಯ ಪಡಿಸುವವನಾಗಿದ್ದಾನೆ. ತನ್ನನ್ನು ತಗ್ಗಿಸಿಕೊಳ್ಳುವ ಈ ಸ್ವಭಾವವು ನಮ್ಮ ಕರ್ತನ ಮನೋಧರ್ಮವಾಗಿತ್ತು ಎಂದು ಆತನು ತನ್ನ ಓದುಗರಿಗೆ ಖಚಿತಪಡಿಸುತ್ತಾ **"ಕ್ರಿಸ್ತಯೇಸುವಿನಲ್ಲಿದಂಥ ಮನಸ್ಸು**

**ನಿಮ್ಮಲ್ಲಿಯೂ ಇರಲಿ"** (ಫಿಲಿಪ್ಪಿ 2:5) ಎಂದು ಹೇಳುವವನಾಗಿದ್ದಾನೆ. ಕ್ರಿಸ್ತ ಯೇಸುವಿನಲ್ಲಿದ್ದಂಥಾಃ ಮನಸ್ಸು ತಂದೆಯ ಮಹಿಮೆ ಮತ್ತು ವೈಭವಗಳನ್ನು ಗ್ರಹಿಸುವುದಾದಲ್ಲಿ ಮತ್ತು ಹಾಗೆಮಾಡುವುದು ಸುಲಿಗೆಯಲ್ಲ ಎಂದು ಯೋಚಿಸುವಾಗ ಅದೇ ರೀತಿಯ ಮನಸ್ಸು ಕರ್ತನ ಸಭೆಯಲ್ಲಿಯೂ ಇರುವುದಾದರೆ ಅದು ನಾವು ಪ್ರತಿಯೊಬ್ಬರೂ ಸಾಧ್ಯವಾದ ಮಟ್ಟಿಗೆ ಹೊಂದಿ ಕೊಳ್ಳಬಹುದಾದ ಎಲ್ಲಾ ಮಹಿಮೆ ಮತ್ತು ಗೌರವಗಳನ್ನು ಗ್ರಹಿಸುತ್ತಿದ್ದೇವೆಂಬ ಅರ್ಥ ಮತ್ತು ಇದನ್ನು ಸರಿಯಾದ ಕ್ರಮವೆಂದು ಪರಿಗಣಿಸಬೇಕು. ಈ ರೀತಿಯಾಗಿ ಕರ್ತನು ಪ್ರಕಟಿಸಿದ ಮನೋಧರ್ಮ ಮತ್ತು ಮನಸ್ಸನ್ನು ನಾವು ಹೊಂದಿಕೊಳ್ಳುತ್ತಿದ್ದೆವು.

ಆದರೆ, ಇದೆಲ್ಲವೂ ತಪ್ಪು. ಇದರ ಭಾಷಾಂತರವೇ ತಪ್ಪಾಗಿದೆ. ಇದು ತಿರಸ್ಕರಣೀಯ. ಅಪೋಸ್ತಲನ ಅರ್ಥಕ್ಕೆ ವಿರೋಧವಾದ ಅರ್ಥವನ್ನು ನೀಡುವುದಾಗಿದೆ. ಗ್ರೀಕ್ ಪದವಾದ 'harpagmos' ಎಂಬುದನ್ನು ಇಲ್ಲಿ 'robbery' ಎಂಬುದಾಗಿ ತರ್ಜುಮೆಗೊಳಿಸಲಾಗಿದೆ. ಇದು ನೂತನ ಒಡಂಬಡಿಕೆಯಲ್ಲಿ ಕೇವಲ ಒಂದು ಸಾರಿ ಮಾತ್ರವೇ ಕಂಡುಬರುತ್ತದೆ ಮತ್ತು ಈ ಪದವು ಸುಲಿಗೆ, ದರೋಡೆ ಅಥವಾ ಅನ್ಯಾಯವಾಗಿ ಪಡಕೊಳ್ಳುವುದು ಎಂಬ ಆಲೋಚನೆಯೊಂದಿಗೆ ಸಂಬಂಧಹೊಂದಿದೆ. ಆದರೆ, ಈ ವಾಕ್ಯವನ್ನು ತಪ್ಪಾಗಿ ಜೋಡಿಸುವುದರ ಮೂಲಕ ಅಪೋಸ್ತಲನ ಅರ್ಥಕ್ಕೆ ಇದು ತೀರಾ ವಿರುದ್ಧವಾಗಿದೆ. ಆತನ ಭಾವನೆಯನ್ನು ಹೆಚ್ಚು ಕಡಿಮೆ ಅದೇ ಮಾತುಗಳನ್ನು ವಿರುದ್ಧವಾದ ಅರ್ಥ ಬರುವಂತೆ ಪುನಃ ಜೋಡಿಸಬಹುದಾಗಿದೆ – "Who thought not by robbery to be equal with god" (ಆತನು ಆ ಪದವಿಯನ್ನು ಬಿಡಲೊಲ್ಲದೆ ಇರುವ ಮೂಲಕ ತಾನು ದೇವರೊಂದಿಗೆ ಸಮಾನಾನಾಗಿರುವನೆಂದು ಎಣಿಸಲಿಲ್ಲ). ನಮ್ಮ ಕರ್ತನ ಕ್ರಮವು ದೇವರ ಸ್ಥಾನ ಮತ್ತು ಗೌರವವನ್ನು ಅಪಹರಿಸರಿಸಲು ಪ್ರಯತ್ನಿಸಿದ ಸೈತಾನನ ಕ್ರಮಕ್ಕಿಂತ ಬೇರೆಯಾದುದು. (ಯೆಶಾಯ 14: 12–14 ನೋಡಿರಿ). ಇದು ಮುಂದಿನ ಸನ್ನಿವೇಶದಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ – ನಿರರ್ಥಕವಾದ ಮಹಿಮೆಯಿಂದ ಏನೂ ಮಾಡಬಾರದು. ಕ್ರಿಸ್ತನು ಬಹಳ ದೀನ ಮಸ್ಸುಳ್ಳವನು. ಅದರಂತೆ ನಾವೂ ಸಹಾ ದೀನಮಸ್ಸುಳ್ಳವರಾಗಿರಬೇಕು ಮತ್ತು ಆತನ ಹೆಜ್ಜೆಜಾಡಿನಲ್ಲಿ ನಡೆಯಬೇಕು. ವಿವಿಧ ಪಂಗಡಗಳಿಗೆ ಸೇರಿದ ಪ್ರಖ್ಯಾತ ಪಂಡಿತರುಗಳು 'harpagmos' ಎಂಬ ಪದಕ್ಕೆ ಮಾಡಿರುವ ಈ ಕೆಳಗಣ ಭಾಷಾಂತರಗಳನ್ನು ಗಮನಿಸಿರಿ :

**"ವಿಷಯವನ್ನು ಮನಃಪೂರ್ವಕವಾಗಿ ಅಪೇಕ್ಷಿಸಿದ್ದೆಂದು ಅಲೋಚಿಸದಿರುವುದು"** – ಕ್ಲಾರ್ಕ್

**"ತವಕದಿಂದ ಹಿಡಿದಿಟ್ಟುಕೊಳ್ಳಲಾಗಿದೆ ಎಂದು ಆಲೋಚಿಸದಿರುವುದು"** – ವೇಕ್‌ಫೀಲ್ಡ್

**"ಒಂದು ತವಕಿಸುವ ಆಕಾಂಕ್ಷೆಯುಳ್ಳ ವಿಷಯವಾಗಿ ಗಣನೆಗೆ ತೆಗೆದುಕೊಳ್ಳದಿರುವುದು"** –ಸ್ಟೀವರ್ಟ್

**"ದೇವರ ಸ್ವರೂಪದಲ್ಲಿ ಅಸ್ಥಿತ್ವದಲ್ಲಿರುವಾತನು ದೇವರಿಗೆ ಸಮವಾದ ಸದಭಿಪ್ರಾಯವುಳ್ಳ ಯಾವುದೇ ಒಂದು ಸಂಗತಿಯನ್ನು ಸ್ವಾಧೀನಪಡಿಸಿಕೊಳ್ಳದಿರುವುದು"** – ರೋಥರ್‌ಹ್ಯಾಮ್

**"ಮೂಲದಲ್ಲಿ ದೇವರ ಸ್ವರೂಪದಲ್ಲಿರುವಾತನು, ಅದನ್ನು ದೇವರಿಗೆ ಸಮನಾದುದೆಂದು ತಿಳಿದುಕೊಳ್ಳ ಬಲ್ಲ ಒಂದು ಬಹುಮಾನ ಎಂದೆಣಿಸದಿರುವುದು"** – ಪರಿಷ್ಕೃತ ಆವೃತ್ತಿ

**"ದೇವರ ಸ್ವರೂಪದಲ್ಲಿರುವಾತನು, ದೇವರ ಸಮಾನನೆಂದೆಣಿಸದಿರುವ ಸಂಗತಿಯನ್ನು ಗ್ರಹಿಸುವುದು"** – ಆಮೆರ್ ರೆವ್ ಕಮಿಟಿ

**"ಸ್ವಾಧೀನ ಪಡಿಸಿಕೊಳ್ಳ ಬಹುದಾದ ಸಂಗತಿಯೊಂದರ ಬಗ್ಗೆ ಆಲೋಚಿಸದೇ ಇರುವುದು"** – ಶಾರ್ಪೆ

**"ಆಸಕ್ತಿಯಿಂದ ಗ್ರಹಿಸದೇ ಆತ್ಯಾಸಕ್ತಿಯಿಂದ ಸ್ವಾಧೀನಪಡಿಸಿಕೊಳ್ಳದಿವುದು"** – ನಿಲ್ಯಾಂಡ್

**"ಹಿಂಸಾತ್ಮಕವಾಗಿ ಹೆಣಗಾಡದಿರುವುದು"** – ಡಿಕನ್‌ಸನ್

**"ಅಪಹರಣವನ್ನು ಚಿಂತಿಸದಿರುವುದು"** – ಟರ್ನ್‌ಬುಲ್

ಈ ಸನ್ನಿವೇಶಕ್ಕೆ ಕಡೆಯ ವಿವರಣೆಯು ಅತ್ಯಂತ ಸೂಕ್ತವಾಗಿದೆ ಎಂದೆನಿಸುತ್ತದೆ. ಇದು ಎಂಫಾಟಿಕ್ ಡಯಗ್ಲಾಟ್‌ನಲ್ಲಿ ನೀಡಲ್ಪಟ್ಟಿರುವ ಭಾಷಾಂತರವಾಗಿದ್ದು ಇಡೀ ಪರಿಚ್ಛೇದವನ್ನು ಈ ರೀತಿಯಾಗಿ ತರ್ಜುಮೆಗೊಳಿಸುತ್ತದೆ :–

**"ದೇವರ ಸ್ವರೂಪದಲ್ಲಿದ್ದರೂ, ದೇವರಂತಾಗಲು ಅದರ ಅಪಹರಣದ ಬಗ್ಗೆ ಚಿಂತಿಸದೆ, ತನ್ನನ್ನು ಬರಿದುಮಾಡಿಕೊಂಡು ದಾಸನರೂಪವನ್ನು ಧರಿಸಿಕೊಂಡನು"**

ಪ್ರಕರಣದ ಸತ್ಯಸಂಗತಿಗಳ ಬಗ್ಗೆ ಮಾತ್ರವಲ್ಲ, ಇದು ಒಂದು ಭಾಗವಾಗಿರುವ ಅಪೋಸ್ತಲನ ವಾದಗಳಿಗನುಸಾರವಾಗಿ ಈ ಭಾಷಾಂತರವು ಸಮಂಜಸವಾಗಿದೆ. ಇದರ ಹೇಳಿಕೆಯನ್ನು ವಿಶದಪಡಿಸಿದಾಗ, ನಮ್ಮ ಕರ್ತನಾದ ಯೇಸು ಆತ್ಮಸ್ವರೂಪಿಯಾಗಿದ್ದಾಗ, ಆತನಿಗೆ ದೇವರಂಥಃ ಸ್ವರೂಪ ಮತ್ತು ಸ್ವಭಾವಗಳಿದ್ದಾಗ, ಆತನು ಯಾವುದೇ ಮಹತ್ವಾಕಾಂಕ್ಷೆಯನ್ನು ಹೊಂದಿದವನಾಗಿರಲಿಲ್ಲ ಮತ್ತು ದೈವಿಕ ಅಧಿಕಾರ ಶಕ್ತಿ ಮತ್ತು ಮಹಿಮೆಗಳನ್ನು ಹಾಗೂ

ಸನ್ಮಾನವನ್ನು ಅಪಹರಿಸ ಬಯಸಲಿಲ್ಲ – ಆತನು ತನ್ನನ್ನು ಹೆಚ್ಚಿಸಿಕೊಳ್ಳಲು ಹೆಣಗಾಡಿ **"ನಾನು ಅತ್ಯುನ್ನತ ನಂತಾಗುತ್ತೇನೆ"** ಎಂದು ಹೇಳಿದ ಸೈತಾನನಂಥಃ ಆತ್ಮವನ್ನು ಹೊಂದಿರಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಆತನು ಪರಲೋಕದ ತಂದೆಯ ನಂತರದ ಅತ್ಯುನ್ನತ ಸ್ಥಾನವನ್ನು ಹೊಂದಿದ್ದರೂ ಆತನು ಎಷ್ಟು ದೀನ ಮನಸ್ಸುಳ್ಳವನಾಗಿದ್ದನೆಂದರೆ, ತನ್ನ ತಂದೆಯ ಚಿತ್ತಕ್ಕೆ ವಿಧೇಯನಾಗಿ, ಆತನು ತಾನೇ ತನ್ನ ಆತ್ಮೀಕ ಸ್ಥಿತಿಯ ಮಹಿಮೆ ಮತ್ತು ವೈಭವಗಳನ್ನು ಕಳಚಿಹಾಕಿದನು. ಆ ಉನ್ನತ ಸ್ಥಿತಿಯನ್ನು ಕೆಳಗಿನ ಸ್ಥಿತಿಯೊಂದಿಗೆ ಅಂದರೆ 'ದೇವದೂತರುಗಳಿಗಿಂತ ಸ್ವಲ್ಪವೇ ಕಡಿಮೆಯಾಗಿದ್ದ' ಮಾನವಸ್ಥಿತಿಯೊಂದಿಗೆ ಬದಲಾಯಿಸಿಕೊಂಡನು. ನಂತರದಲ್ಲಿ ಅಪೋಸ್ತಲನು ಮುಂದುವರೆದು ಇಲ್ಲಿ ದೀನತೆಯು ಮಾತ್ರವೇ ಪ್ರಕಟವಾಗಲಿಲ್ಲ, ನಂತರದಲ್ಲಿ ಇನ್ನೂ ಹೆಚ್ಚಿನ ದೀನತೆಯೊಂದು ತೋರಿಬಂತು. ಇದರಲ್ಲಿ ನಮ್ಮ ಕರ್ತನಾದ ಯೇಸುವು, ಮಾನವನಾದ ಯೇಸುಕ್ರಿಸ್ತನಾಗಿ, ತನ್ನನ್ನು ಮರಣಕ್ಕೆ ಅಂದರೆ ಅವಮಾನಕರವಾದ ಶಿಲುಬೆಯ ಮರಣಕ್ಕೆ ಒಳಪಡಿಸಿಕೊಂಡನು. ಈ ರೀತಿಯಾಗಿ ತನ್ನನ್ನು ತಗ್ಗಿಸಿಕೊಂಡದ್ದರಿಂದ ಆತನು ದೇವರ ಚಿತ್ತಕ್ಕೆ ವಿಧೇಯನಾದನು ಎಂದು ಅಪೋಸ್ತಲನು ಪ್ರಕಟಿಸುತ್ತಾನೆ. ನಂತರದಲ್ಲಿ ಅಪೋಸ್ತಲನು ಇದರ ಫಲಿತಾಂಶವನ್ನು ನಮ್ಮ ಗಮನಕ್ಕೆ ತರುವವನಾಗಿ – **"ಈ ಕಾರಣದಿಂದ , ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸುಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡುತ್ತಾ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು"** ಎಂದಿದ್ದಾನೆ – ಫಿಲಿಪ್ಪಿ 2:10–11, ಇಬ್ರಿಯ 2:7,9 ಮತ್ತು 1 ತಿಮೋ. 2:5.

ಈ ರೀತಿಯಾಗಿ ನೋಡುವಾಗ, ತ್ರೈಯೇಕತ್ವ ಸಿದ್ಧಾಂತಕ್ಕೆ ಅನುಕೂಲವಾಗುವ ಬದಲು ಇದು ಅದಕ್ಕೆ ವಿರುದ್ಧವಾಗಿದೆ, ಬಲಯುತವಾಗಿ ಅದನ್ನು ವಿರೋಧಿಸುತ್ತದೆ ಮತ್ತು ದೇವರ ಸಮಗ್ರ ವಾಕ್ಯಕ್ಕೆ ಸಾಮಾನ್ಯವಾದ ಪವಿತ್ರ ಪ್ರಜ್ಞೆಗೆ ಮತ್ತು ವಿವೇಚನೆಗೆ ಸಾಮರಸ್ಯವಾಗಿ ತನ್ನನ್ನು ಇಟ್ಟುಕೊಳ್ಳುತ್ತದೆ.

ನಾವು ಪರಲೋಕದ ತಂದೆಯ ವ್ಯಕ್ತಿತ್ವ, ಗುಣಲಕ್ಷಣ ಮತ್ತು ಯೋಜನೆಗಳ ಶ್ರೇಷ್ಠತೆಯ ಉದ್ದಗಲ, ಆಳಗಳ ಮೆಚ್ಚಿಗೆಗಳೊಂದಿಗೆ, ಮತ್ತು ಆತನ ಮಗನ ಅದ್ಭುತವಾದ ಪ್ರೀತಿಯು, ತಂದೆಯ ಜ್ಞಾನದಲ್ಲಿ, ಕೃಪೆಯಲ್ಲಿ ಮತ್ತು ಶಕ್ತಿಯಲ್ಲಿ ತೋರಿಬಂದ ಆತನ ನಿಷ್ಠೆ, ನಂಬಿಕೆ ಇವುಗಳ ಕಾರಣ ಮಗನ ಮೇಲೆ ಹಿಂದೆಂದೂ ಕಾಣದ ಹೆಚ್ಚಿನ ಸದಭಿಪ್ರಾಯಗಳೊಂದಿಗೆ ಆತನು ಎಷ್ಟೋ ಘನವಾದ ರೀತಿಯಲ್ಲಿ ಬಹುಮಾನಿಸಲ್ಪಟ್ಟನು ಎಂಬುದರೊಂದಿಗೆ ನಮ್ಮ ಪ್ರಸ್ತಾಪದ ಹೆಚ್ಚಿಸಲ್ಪಟ್ಟ ಈ ಲಕ್ಷಣಗಳನ್ನು ಸಂತೋಷದೊಡನೆ ಬಿಟ್ಟುಕೊಡುತ್ತೇವೆ. ನಿಜವಾಗಿಯೂ, ನಾವು ತಂದೆಗೆ ಮಾನ ಕೊಡುವ ಪ್ರಕಾರವಾಗಿ ಮಗನಿಗೂ ಮಾನ ಕೊಡುವವರಾಗಿದ್ದೇವೆ (ಯೋಹಾನ 5:23). ಮತ್ತು ದೇವರ ವಾಕ್ಯದಲ್ಲಿ ನಮಗೆ ನೀಡಲ್ಪಟ್ಟ ಸಂಪೂರ್ಣವಾದ, ಹಾಗೂ ಸ್ಪಷ್ಟವಾದ ಪರೀಕ್ಷೆಯ ನಂತರ ನಾವು ಅಪೋಸ್ತಲನಾದ ಪೌಲನ ಸ್ಫೂರ್ತಿಯುತವಾದ ಈ ಸಾಕ್ಷಿಯೊಂದಿಗೆ ಸಹಮತರಾಗಿದ್ದೇವೆ : **"ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ತಂದೆಯೆಂಬಾತನೇ; ಆತನು ಸಮಸ್ತಕ್ಕೂ ಮೂಲಕಾರಣನು; ನಾವು ಆತನಿಗಾಗಿ ಉಂಟಾದೆವು. ಮತ್ತು ನಮಗೆ ಒಬ್ಬನೇ ಕರ್ತ; ಆತನು ಯೇಸುಕ್ರಿಸ್ತನೇ; ಆತನ ಮುಖಾಂತರ ಸಮಸ್ತವೂ ಉಂಟಾಯಿತು, ನಾವೂ ಆತನ ಮೂಲಕ ಉಂಟಾದೆವು"** – 1 ಕೊರಿಂಥ 8:6.

**"ನಮ್ಮ ತಂದೆಯಾದ ದೇವರಿಂದಲೂ ಕರ್ತನಾದ ಯೇಸುಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ. ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತಯೇಸುವಿನಲ್ಲಿ ದಯಪಾಲಿಸಿದ್ದಾನೆ. ಹೇಗೆಂದರೆ . . . ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು, . . . .ನಮ್ಮನ್ನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವುದಕ್ಕೆ . . . ಸಂಕಲ್ಪಮಾಡಿದ್ದನು . . . ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ಪ್ರಭಾವಸ್ವರೂಪನೂ ಆದ ತಂದೆಯೂ ಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ಜ್ಞಾನವುಳ್ಳ ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ"** – ಎಫೆಸ 1:2–18.

* * * * * *